ಸಂಪುಟ: 05 ಸಂಚಿಕೆ: 28 ಪುಟಗಳು: 08 ಶನಿವಾರ 12 ಏಪ್ರಿಲ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

9448225696 +91 8035841833 ₹5

**ಮುಂಜಾನೆ ಮಾತು**
ಕನಸು, ಕನಸು,
ಕನಸು. ಕನಸುಗಳು
ಆಲೋಚನೆಗಳಾಗಿ
ರೂಪಾಂತರಗೊಳ್ಳುತ್ತವೆ
ಮತ್ತು ಆಲೋಚನೆಗಳು
ಕಾರ್ಯರೂಪಕ್ಕೆ ಬರುತ್ತವೆ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

### ಬಿಎಂಟಿಸಿ, ಕಲ್ಯಾಣ, ವಾಯವ್ಯ ಸಾರಿಗೆ ಸಂಸ್ಥೆಗೆ ಬರಲಿವೆ

# 4000 ಹೊಸ ಎಲೆಕ್ಟ್ರಿಕ್ ಬಸ್‌ಗಳು

• **ಉದಯವಾಹಿನಿ, ಬೆಂಗಳೂರು**

ಬಸ್ ರಶ್ ಎಂದು ಬೇಸರದಲ್ಲಿ ಪ್ರಯಾಣ ಮಾಡುವವರಿಗೆ ಗುಡ್ ನ್ಯೂಸ್. ಕರ್ನಾಟಕ ಸರ್ಕಾರವು ಹೊಸದಾಗಿ 4000 ಎಲೆಕ್ಟ್ರಿಕ್ ಬಸ್ ಖರೀದಿಗೆ ನಿರ್ಧಾರ ಮಾಡಿದೆ. ಈ ಹೊಸ ಬಸ್‌ಗಳು ಬಿಎಂಟಿಸಿ, ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆ ಹಾಗೂ ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆಗೆ ನೀಡಲಾಗುತ್ತದೆ.

ಶುಕ್ರವಾರ ನಡೆದ ಕರ್ನಾಟಕ ಸರ್ಕಾರ ಸಚಿವ ಸಂಪುಟ ಸಭೆಯಲ್ಲಿ ಈ ಹೊಸ ಬಸ್ ಖರೀದಿ ಬಗ್ಗೆ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ. ಬಸ್ ಖರೀದಿಗೆ ಸಂಪುಟದ ಒಪ್ಪಿಗೆ ಸಿಕ್ಕು ಅದಕ್ಕಾಗಿ ಯೋಜನೆ ಸಿದ್ಧಪಡಿಸಲಾಗಿದೆ. ಈ ಮೂಲಕ ಶಕ್ತಿ ಯೋಜನೆಯಿಂದ ಹೆಚ್ಚಾದ ಬಸ್ ಪ್ರಯಾಣಿಕ ದಟ್ಟಣೆ ನಿವಾರಣೆಗೆ ಸರ್ಕಾರ ಮುಂದಾಗಿದೆ.

ಈ ಬಗ್ಗೆ ಕಾನೂನು ಮತ್ತು ಪ್ರವಾಸೋದ್ಯಮ ಸಚಿವ ಎಚ್‌ಕೆ ಪಾಟೀಲ್ ಮಾಹಿತಿ ನೀಡಿದ್ದು, ವಿಶ್ವಬ್ಯಾಂಕ್ ಸಹಯೋಗದೊಂದಿಗೆ




ಕರ್ನಾಟಕ ಎಲೆಕ್ಟ್ರಿಕ್ ಬಸ್ ಯೋಜನೆಯಡಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಪ್ರಸ್ತಾವನೆಯಲ್ಲಿ ಬಿಎಂಟಿಸಿ, ವಾ.ಕ.ರ.ಸಾ.ಸಂ ಮತ್ತು ಕ.ಕ.ರ.ಸಾ.ನಿಗಮಗಳಲ್ಲಿ ಒಟ್ಟು 4000 ಸಂಖ್ಯೆಯ ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲು ಸಚಿವ ಸಂಪುಟ ನಿರ್ಣಯಿಸಿದೆ ಎಂದು ತಿಳಿಸಿದ್ದಾರೆ.

**ಮೂರು ಸಾವಿರ ಕೋಟಿ ಸಾಲ:** ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಪರಿಸರ ಸ್ನೇಹಿ ಎಲೆಕ್ಟ್ರಿಕ್ ಬಸ್ಸುಗಳನ್ನು ಕಾರ್ಯಾಚರಣೆ ಗೊಳಿಸಲು ವಿಶ್ವಬ್ಯಾಂಕ್‌ನಿಂದ ಕಡಿಮೆ ಬಡ್ಡಿದರದಲ್ಲಿ 3 ಸಾವಿರ ಕೋಟಿ ರೂ. ಸಾಲವನ್ನು ಪಡೆದುಕೊಳ್ಳಲಾಗುವುದು. ಇದಕ್ಕೆ ಅಗತ್ಯ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಕಾನೂನು ಸಚಿವರು ತಿಳಿಸಿದರು.

''ಕರ್ನಾಟಕ ಪ್ಲಾಟ್ ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ) ವಿದೇಯಕಕ್ಕೆ 2024 ಅನುಮೋದಿಸಿ ಸುಗ್ರೀವಾಜ್ಞೆ ಹೊರಡಿಸಲು ತೀರ್ಮಾನಿಸಲಾಗಿದೆ ಎಂದು ಇದೇ ವೇಳೆ ಸಚಿವರು ತಿಳಿಸಿದ್ದಾರೆ.

**ಸಚಿವ ಸಂಪುಟದ ಪ್ರಮುಖ ನಿರ್ಧಾರಗಳು**

- **ಕೆಪಿಎಸ್‌ಸಿ ಅಧ್ಯಕ್ಷರು ಮತ್ತು ಸದಸ್ಯರಿಗೆ 7ನೇ ವೇತನ ಆಯೋಗ ಶಿಫಾರಸುಗಳು: ಜನವರಿ 2016ರಿಂದ ಅನ್ವಯವಾಗುವಂತೆ ನಿಯಮಗಳಿಗೆ ತಿದ್ದುಪಡಿ ಅನುಮೋದನೆ ನೀಡಲಾಗಿದೆ.**
- **ಲೋಕಾಯುಕ್ತ ಅಭಿಯೋಜನಾ ಮಂಜೂರಾತಿ ಪ್ರಕರಣಗಳು: ವಿವಿಧ ಇಲಾಖೆ/ಸಕ್ಷಮ ಪ್ರಾಧಿಕಾರಗಳಲ್ಲಿ ಬಾಕಿ ಇರುವ ಪ್ರಕರಣಗಳ ಬಗ್ಗೆ ಅನುಮೋದನೆ ನೀಡಲಾಗಿದೆ.**
- **ಕ್ಷಯರೋಗ ಪತ್ತೆಗೈಯುವ True NAAT ಯಂತ್ರ ಖರೀದಿ: 38 ತಾಲ್ಲೂಕು ಆಸ್ಪತ್ರೆಗಳು ಹಾಗೂ 121 ಸಮುದಾಯ ಆರೋಗ್ಯ ಕೇಂದ್ರಗಳಿಗೆ ರೂ.14.24 ಕೋಟಿಗಳ ವೆಚ್ಚದಲ್ಲಿ 159 ಯಂತ್ರ ಖರೀದಿಗೆ ಅನುಮೋದನೆ.**

**ವೈದ್ಯಕೀಯ ಸೌಕರ್ಯ ವಿಸ್ತರಣೆ:** ಮೈಸೂರು ಮತ್ತು ಹುಬ್ಬಳ್ಳಿಯ ರಾಜ್ಯ ವಿಮಾ ಯೋಜನೆ ಆಸ್ಪತ್ರೆಗಳಲ್ಲಿ ಐಸಿಯು, ಡೈಲಿಸಿಸ್ ಘಟಕ, ಮಾಡ್ಯುಲರ್ ಓಟಿ ಪ್ರಾರಂಭ ಹಾಗೂ ಉಪಕರಣಗಳ ಖರೀದಿಗೆ ರೂ.63.67 ಕೋಟಿಗಳ ಯೋಜನೆಗೆ ಆಡಳಿತಾತ್ಮಕ ಅನುಮೋದನೆ.

**ಬೆಂಗಳೂರು-ಮೈಸೂರು ಮೂಲಸೌಕರ್ಯ ಕಾರಿಡಾರ್:** ಯೋಜನೆ ಅನುಷ್ಠಾನಕ್ಕಾಗಿ ಕ್ಯಾಬಿನೆಟ್ ಉಪ ಸಮಿತಿಯ ರಚನೆಗೆ ಅನುಮೋದನೆ.

## ಎಐಎಡಿಎಂಕೆ ಜೊತೆ ಮೈತ್ರಿ ಮಾಡಿಕೊಂಡ ಬಿಜೆಪಿ

• **ಉದಯವಾಹಿನಿ, ಚೆನ್ನೈ**

ತಮಿಳುನಾಡು ವಿಧಾಸಭಾ ಚುನಾವಣೆಗೆ ಒಂದು ವರ್ಷ ಬಾಕಿಯಿದ್ದು, ಚುನಾವಣೆ ಕಾವೇರಿದೆ. ಇದರ ನಡುವೆ 2026ರ ತಮಿಳುನಾಡು ವಿಧಾನಸಭಾ ಚುನಾವಣೆಗೆ ಎಐಎಡಿಎಂಕೆ ಮತ್ತು ಬಿಜೆಪಿ ಮೈತ್ರಿ ಮಾಡಿಕೊಂಡಿದ್ದು, ಎನ್‌ಡಿಎ ಮೈತ್ರಿಕೂಟದ ಭಾಗವಾಗಿ ಎಲೆಕ್ಷನ್‌ಗೆ ಸ್ಪರ್ಧಿಸಲಿವೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಚೆನ್ನೈನಲ್ಲಿ ಸುದ್ದಿಗೋಷ್ಠಿ ನಡೆಸಿ ಈ ವಿಚಾರವನ್ನು ಹಂಚಿಕೊಂಡರು. ಮುಂಬರುವ ಚುನಾವಣೆಯನ್ನು ರಾಷ್ಟ್ರೀಯವಾಗಿ ನರೇಂದ್ರ ಮೋದಿ ಅವರು ಮತ್ತು ತಮಿಳುನಾಡಿನಲ್ಲಿ ಎಡಪ್ಪಾಡಿ ಪಳನಿ ಸ್ವಾಮಿ ಅವರು ಎನ್‌ಡಿಎ ಅನ್ನು ಮುನ್ನಡೆಸಲಿದ್ದಾರೆ ಎಂದು ಅಮಿತ್ ಶಾ ಹೇಳಿದರು. ಈ ವೇಳೆ ಅಮಿತ್ ಶಾ ಎರಡು ಬದಿಯಲ್ಲಿ ಎಡಪ್ಪಾಡಿ ಕೆ ಪಳನಿಸ್ವಾಮಿ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಕೆ ಅಣ್ಣಾಮಲೈ ಉಪಸ್ಥಿತರಿದ್ದರು. 1998 ರಿಂದ ಎಐಎಡಿಎಂಕೆ ಎನ್‌ಡಿಎ ಭಾಗವಾಗಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಮಾಜಿ ಸಿಎಂ ಜೆ. ಜಯಲಲಿತಾ ಈ ಹಿಂದೆ ಒಟ್ಟಿಗೆ ಕೆಲಸ ಮಾಡಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಎನ್‌ಡಿಎ ಮತ್ತೊಮ್ಮೆ ಪ್ರಚಂಡ ಬಹುಮತವನ್ನು ಪಡೆದು ತಮಿಳುನಾಡಿನಲ್ಲಿ ಮತ್ತೊಮ್ಮೆ ನಮ್ಮ ಸರ್ಕಾರ ರಚನೆಯಾಗುವ ವಿಶ್ವಾಸ ಇದೆ ಎಂದು ಅಮಿತ್ ಶಾ ಇದೇ ವೇಳೆ ಹೇಳಿದರು.

## ಲಾಲ್‌ಬಾಗ್‌ನಲ್ಲಿ ಬೋನ್ಸಾಯ್ ವನ ಸಾರ್ವಜನಿಕರಿಗೆ ಮುಕ್ತ

• **ಉದಯವಾಹಿನಿ, ಬೆಂಗಳೂರು**

ಲಾಲ್‌ಬಾಗ್‌ನಲ್ಲಿ ಹಲವು ವರ್ಷಗಳಿಂದ ಸ್ಥಗಿತಗೊಳಿಸಿದ್ದ ಬೋನ್ಸಾಯ್ ಗಾರ್ಡನ್‌ಗೆ ಇದೀಗ ಹೊಸ ರೂಪ ನೀಡಲಾಗಿದ್ದು, ಸಾರ್ವಜನಿಕ ವೀಕ್ಷಣೆಗೆ ಮುಕ್ತಗೊಳಿಸಲಾಗಿದೆ. ಜತೆಗೆ ಇಲ್ಲಿ ಬೋನ್ಸಾಯ್ ಸ್ಟುಡಿಯೋ ಕೂಡ ನಿರ್ಮಿಸಲಾಗಿದೆ. ಗಿಡಗಳ ಆರೈಕೆ, ಜೋಡಣೆಯನ್ನು ಇಲ್ಲಿ ವೀಕ್ಷಿಸಬಹುದಾಗಿದೆ. ಇನ್ನು, ಲ್ಯಾಂಡ್ ಸ್ಕೇಪಿಂಗ್ ಮತ್ತು ಇಕೋ ಶಾಪ್ ನಿರ್ಮಿಸಲಾಗುವುದು. ಎರಡು ಅಂತಸ್ತಿನ ಇಕೊ ಶಾಪ್ ಬರಲಿದ್ದು, ಇಲ್ಲಿ ಬೋನ್ಸಾಯ್ ಗಿಡಗಳು ಹಾಗೂ ಅದಕ್ಕೆ ಬೇಕಾದ ಪರಿಕರಗಳ ಮಾರಾಟಕ್ಕೂ ಅವಕಾಶ ಕಲ್ಪಿಸಲಾಗುವುದು. ಬೋನ್ಸಾಯ್ ಉದ್ಯಾನದಲ್ಲಿಒಂದು ಫೌಂಟೇನ್ ಕೂಡ ಬರಲಿದೆ. ಹೀಗಾಗಿ, ಅತ್ಯಂತ ಸುಂದರ ವನ ಇದಾಗಲಿದೆ. ಮುಂಬರುವ ದಿನಗಳಲ್ಲಿಅದಕ್ಕೆ ಶುಲ್ಕವನ್ನೂ ನಿಗದಿಪಡಿಸುವ ಚಿಂತನೆಯಿದೆ. ಬೋನ್ಸಾಯ್ ಎಂದರೆ ಜಪಾನಿ ಭಾಷೆಯಲ್ಲಿ ಟ್ರೇನಲ್ಲಿ ಬೆಳೆಸುವುದು ಎಂದರ್ಥ. ಸಣ್ಣ ಸಣ್ಣ ಸಸ್ಯ ಕುಂಡಗಳಲ್ಲಿ ದೊಡ್ಡ ದೊಡ್ಡ ಮರಗಳ ಕುಬ್ಜ ಪ್ರತಿರೂಪವನ್ನು ಬೆಳೆಸುವ ಕಲೆಯೇ ಬೋನ್ಸಾಯ್. ಈ ಕುಬ್ಜ ಗಿಡಗಳು ದೊಡ್ಡ ಮರಗಳ ಎಲ್ಲಾ ಪ್ರತಿರೂಪವನ್ನು ಹೊಂದಿರುತ್ತವೆ. ಇಂತಹ ಬೋನ್ಸಾಯ್ ಗಿಡಗಳ ಬಗೆಗಿನ ಅಚ್ಚರಿಯ ಸಂಗತಿಯೆಂದರೆ ಇವು ಒಂದು ಶತಮಾನ ಅಥವಾ ಅದಕ್ಕಿಂತ ಹೆಚ್ಚು ವರ್ಷಗಳ ಕಾಲ ಬದುಕಬಲ್ಲವು.


## ಸ್ವಿಗ್ಗಿ, ಝೋಮೆಟೋ ಡೆಲಿವರಿ ಬಾಯ್ಸ್‌ಗಳಿಗೆ ಗುಡ್ ನ್ಯೂಸ್

• **ಉದಯವಾಹಿನಿ, ಬೆಂಗಳೂರು**

ಸ್ವಿಗ್ಗಿ, ಝೋಮೆಟೋ ಸೇರಿದಂತೆ ಫುಡ್ ಡೆಲಿವರಿ ಕಾರ್ಮಿಕರು ಹಾಗೂ ಅಮೆಝಾನ್ ಹಾಗೂ ಇನ್ನಿತರ ಈ ಕಾಮರ್ಸ್ ಡೆಲಿವರಿ ಬಾಯ್ಸ್ ಗಳಿಗೆ ರಾಜ್ಯ ಸರ್ಕಾರ ಗುಡ್ ನ್ಯೂಸ್ ನೀಡಿದೆ. ಅಸಂಘಟಿತ ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ನೀಡುವ ನಿಟ್ಟಿನಲ್ಲಿ ಕರ್ನಾಟಕ ಪ್ಲಾಟ್ ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ ( ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ) ವಿಧೇಯಕ ಜಾರಿಗೆ ತರಲು ಸಂಪುಟದಲ್ಲಿ ತೀರ್ಮಾನ ಮಾಡಲಾಗಿದೆ. ಈ ಮೂಲಕ ಈ ಅಸಂಘಟಿತ ವಲಯಕ್ಕೆ ಸಾಮಾಜಿಕ ಭದ್ರತೆ ನೀಡುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯನ್ನು ಇಟ್ಟಿದೆ.

**ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ:** ರಾಜ್ಯದಲ್ಲಿ ಗಿಗ್ ಕಾರ್ಮಿಕರ ಸಂಖ್ಯೆ ಸುಮಾರು 2.30 ಲಕ್ಷದಷ್ಟಿದೆ. ಆದರೆ ಇವರಿಗೆ ಅಪಘಾತ ಪರಿಹಾರ ಸೇರಿದಂತೆ ಯಾವುದೇ ಸರ್ಕಾರಿ ಸೌಲಭ್ಯಗಳು ಇಲ್ಲ. ಒಂದು ಕಡೆಯಿಂದ ಮತ್ತೊಂದು ಕಡೆಗೆ ಫುಡ್/ವಸ್ತುಗಳನ್ನು ಸಾಗಾಟ ಮಾಡುವ ಸಂದರ್ಭದಲ್ಲಿ ಅಪಘಾತವಾಗಿ ಮರಣ/ ಗಾಯ ಆಗುವ ಸಾಧ್ಯತೆ ಇದೆ. ಇಂತಹ ಸಂದರ್ಭದಲ್ಲಿ ಅವರನ್ನು ಅವಲಂಬಿಸಿದವರು ಸಂಕಷ್ಟಕ್ಕೆ ಒಳಗಾಗುತ್ತಾರೆ. ಈ ನಿಟ್ಟಿನಲ್ಲಿ ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಈ ಮಹತ್ವದ ಕ್ರಮ ಕೈಗೊಂಡಿದೆ.

# ಜಾತಿ ಜಂಜಾಟ ಕೈ ನಾಯಕರ ತಿಕ್ಕಾಟ




- ಜಾತಿಗಣತಿಗೆ ಮುಹೂರ್ತ ಫಿಕ್ಸ್
- ಜಾತಿ ಗಣತಿ ವರದಿ ಗದ್ದಲ
- ವಿವಾದಿತ ಜಾತಿ ಗಣತಿ ವರದಿ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ,
- ಏ.17ಕ್ಕೆ ಅಂತಿಮ ತೀರ್ಮಾನ

**ಪ್ರತಿಕ್ರಿಯೆ ಕೊಡದ ಲಿಂಗಾಯತ ಸಚಿವರು!**



ಜಾತಿ ಗಣತಿ ಬಗ್ಗೆ ಲಿಂಗಾಯತ ಸಮುದಾಯದ ಹಿನ್ನೆಲೆಯ ಸಚಿವರು ಪ್ರತಿಕ್ರಿಯೆ ನೀಡಿಲ್ಲ. ಇನ್ನು ಇದೇ ವಿಚಾರವಾಗಿ ಮಾತನಾಡಿದ ಡಿಸಿಎಂ ಡಿಕೆ ಶಿವಕುಮಾರ್ ವರದಿಯಲ್ಲಿ ಏನಿದೆ ಎಂಬುದು ಗೊತ್ತಿಲ್ಲ. ಎಲ್ಲಾವನ್ನೂ ಮಾಧ್ಯಮಗಳ ಮುಂದೆ ಹೇಳಲು ಆಗುವುದಿಲ್ಲ. ಕ್ಯಾಬಿನೆಟ್ ಸಭೆಯಲ್ಲಿ ಚರ್ಚೆ ಮಾಡುತ್ತೇವೆ' ಎಂದರು.

**ಪ್ರಸ್ತಾವನೆಯಲ್ಲಿರುವ ಅಂಶಗಳು**



ಜಸ್ಟೀಸ್ ಹೆಚ್.ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು 2015ರ ಏಪ್ರಿಲ್ 11ರಿಂದ ಮೇ 30ರವರೆಗೆ ರಾಜ್ಯದಾದ್ಯಂತ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಿತ್ತು. ಜಾತಿ ವಿವರವೂ ಒಳಗೊಂಡಂತೆ ಒಟ್ಟು 54 ಮಾನದಂಡಗಳಿಗೆ ಸಂಬಂಧಿಸಿದಂತೆ ಜಿಲ್ಲಾಡಳಿತದ ಸಹಭಾಗಿತ್ವದಲ್ಲಿ ಸಮೀಕ್ಷೆ ನಡೆಸಿ ಮಾಹಿತಿ ಸಂಗ್ರಹಿಸಿ ಗಣಕೀಕರಣಗೊಳಿಸಲಾಗಿದೆ. ಈ ಸಮೀಕ್ಷೆಯ ದತ್ತಾಂಶಗಳನ್ನು ಬಳಸಿಕೊಂಡು ಅಧ್ಯಯನ ವರದಿ ಸಲ್ಲಿಸುವಂತೆ ಕೆ. ಜಯಪ್ರಕಾಶ ಹೆಗ್ಡೆ ನೇತೃತ್ವದ ಆಯೋಗಕ್ಕೆ 2023ರ ಜುಲೈ 17ರಂದು ಸರ್ಕಾರ ಪತ್ರ ಬರೆದಿತ್ತು. ಅದರ ಅನ್ವಯ, ಕಾಂತರಾಜ ಆಯೋಗ ನಡೆಸಿದ್ದ 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಅಧ್ಯಯನ ವರದಿ2024' ಮತ್ತು ಸಮೀಕ್ಷೆಯ ಅಂಕಿ-ಅಂಶಗಳನ್ನು ಒಳಗೊಂಡ ವರದಿಗಳನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಲಾಗಿತ್ತು.

• **ಉದಯವಾಹಿನಿ, ಬೆಂಗಳೂರು**

ತೀವ್ರ ವಿವಾದಕ್ಕೆ ಕಾರಣವಾಗಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಅಥವಾ ಜಾತಿ ಗಣತಿ ವರದಿ ಅನುಷ್ಠಾನದ ಸಂಬಂಧ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಲಾಗಿದೆ. ವಿಧಾನಸೌಧದಲ್ಲಿ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಜಾತಿ ಗಣತಿ ವರದಿಯ ಬಗ್ಗೆ ಚರ್ಚಿಸಲಾಗಿದ್ದು, ಜಾರಿಗೊಳಿಸುವ ಬಗ್ಗೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಅಂತಿಮ ತೀರ್ಮಾನ ಕೈಗೊಳ್ಳುವುದೆಂದು ನಿರ್ಧರಿಸಲಾಯಿತು. ಸಚಿವ ಸಂಪುಟ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರು ಜಾತಿ ಜನಗಣತಿ ಲಕೋಟೆ ಓಪನ್ ಮಾಡಿ, ಸಚಿವರ ಕೈಗೆ ನೀಡಿದರು. ಬಳಿಕ ಸುದೀರ್ಘ ಸಮಾಲೋಚನೆ ನಡೆಸಲಾಯಿತು. ಸಂಪುಟ ಸಹೋದ್ಯೋಗಿಗಳ ಅಭಿಪ್ರಾಯ ಆಲಿಸಿದ ಸಿದ್ದರಾಮಯ್ಯ, ಮುಂದಿನ ಕ್ಯಾಬಿನೆಟ್ ಸಭೆಯಲ್ಲಿ ಅಂತಿಮ ತೀರ್ಮಾನ ಕೈಗೊಳ್ಳುವ ನಿರ್ಧಾರಕ್ಕೆ ಬಂದರು. ಕೆಲವು ಸಚಿವರು ಮೊದಲು ಜಾತಿ ಗಣತಿ ವರದಿಯ ಶಿಫಾರಸುಗಳನ್ನು ಪರಿಶೀಲಿಸಲು ಬಯಸಿದ್ದಾರೆ. ಹೀಗಾಗಿ ಏ.17ರಂದು ನಡೆಯುವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವ ಸಂಪುಟ ಸಭೆ ಬಳಿಕ ಸುದ್ದಿಗಾರರೊಂದಿಗೆ ತಿಳಿಸಿದ್ದಾರೆ.

**ಸಂಪುಟ ನಿರ್ಧಾರ ಕಾದುನೋಡೋಣ!**

ಸಚಿವ ಕೆ. ಎಚ್ ಮುನಿಯಪ್ಪ ಮಾತನಾಡಿ, ಜಾತಿ ಗಣತಿ ಬಗ್ಗೆ ಕ್ಯಾಬಿನೆಟ್ ನಿರ್ಧಾರ ಏನಾಗುತ್ತಿದೆ ನೋಡಿ. ಎಐಸಿಸಿ ಅಧ್ಯಕ್ಷರು, ನಮ್ಮ ನಾಯಕರು ಜಾತಿಗಣತಿ ಆದ್ರೆ ಯಾವುದೇ ಜಾತಿಗೆ ಅನ್ಯಾಯ ಆಗಲ್ಲ ಅಂತ ಹೇಳಿದ್ದಾರೆ. ಇದರಿಂದ ಯಾವುದೇ ಸಮುದಾಯಕ್ಕೆ ತೊಂದರೆ ಆಗುವುದಿಲ್ಲ. ನಮ್ಮ ಹೈಕಮಾಂಡ್ ವರದಿ ಜಾರಿಗೆ ಬದ್ಧವಾಗಿದೆ. ಯಾರ ವಿರೋಧವೂ ಇಲ್ಲ. ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿಗೆ ತೊಂದರೆ ಆಗುವುದಿಲ್ಲ. ವರದಿ ಬಗ್ಗೆ ಚರ್ಚೆ ಆಗಲಿ ನೋಡೋಣ ಎಂದರು.

**1** ವರದಿ ಎಲ್ಲಿಯೂ ಬಹಿರಂಗ ಆಗಿಲ್ಲ. ಈಗ ಬರುತ್ತಿರುವ ಅಂಕಿ ಸಂಖ್ಯೆ ಊಹಾಪೋಹಗಳು

**2** ಜನರ ಸಮೀಕ್ಷೆ ಬಿಟ್ಟು ಜಾತಿ ಸಮೀಕ್ಷೆ ಅಲ್ಲ

**3** ಪ್ರಬಲ ಸಮುದಾಯದ ವಿರೋಧ ಇದೆ ಹೌದು. ಆದರೆ, ವರದಿ ಬಹಿರಂಗವಾಗಲಿ, ಆಮೇಲೆ ನೋಡೋಣ- ಸತೀಶ್ ಜಾರಕಿಹೊಳಿ



ವರದಿ ಜಾರಿಗೆ ಮುಹೂರ್ತ ಫಿಕ್ಸ್ ಆಗಿದೆ. ಎಲ್ಲಾರೂ ಒಟ್ಟಾಗಿ ತೀರ್ಮಾನ ಮಾಡುತ್ತೇವೆ. ವರದಿ ಜಾರಿ ಬಳಿಕ ನೋಡೋಣ. ಪ್ರಬಲ ಸಮುದಾಯದ ವಿರೋಧ ಇದೆ ಹೌದು. ಆದರೆ, ವರದಿ ಬಹಿರಂಗವಾಗಲಿ, ಆಮೇಲೆ ನೋಡೋಣ. ವರದಿ ಜಾರಿಯಾಗುವ ಮೊದಲು ಸದನವನ್ನು ಕರೆಯಬೇಕು. ಅಲ್ಲಿ ಯಾರೆಲ್ಲ ಏನೇನು ಪ್ರಶ್ನೆ ಕೇಳ್ತಾರೆ ನೋಡೋಣ. ವರದಿ ಬಗ್ಗೆ ಸಮಗ್ರವಾಗಿ ಚರ್ಚೆ ಆಗಬೇಕು

-ಸತೀಶ್ ಜಾರಕಿಹೊಳಿ, ಸಚಿವ



ಏಪ್ರಿಲ್ 17ರಂದು ನಡೆಯುವ ವಿಶೇಷ ಸಂಪುಟ ಸಭೆಯಲ್ಲಿ ಜಾತಿ ಜನಗಣತಿ ಕುರಿತು ಚರ್ಚೆ ನಡೆಸಲು ನಿರ್ಧರಿಸಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ಹೇಳಿದ್ದಾರೆ. ಜಾತಿ ಜನಗಣತಿ ವರದಿಯು 50 ಸಂಪುಟಗಳಲ್ಲಿದೆ. ಇದು 1.38 ಕೋಟಿ ಕುಟುಂಬಗಳ 5.98 ಕೋಟಿ ಜನರನ್ನು ಒಳಗೊಂಡಿದೆ.ಇದು ಶೇಕಡಾ 94.77 ಜನರನ್ನು ಒಳಗೊಂಡಿದೆ. ಕೇವಲ ಶೇಕಡಾ 5.23 ರಷ್ಟು ಜನ ಮಾತ್ರ ಇದರ ವ್ಯಾಪ್ತಿಯಿಂದ ಹೊರಗಿದ್ದಾರೆ ಎಂದು ಸಚಿವ ಶಿವರಾಜ್ ತಂಗಡಗಿ ತಿಳಿಸಿದ್ದಾರೆ. ರಾಜ್ಯ ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ಜಾತಿ ಗಣತಿ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಫೆಬ್ರವರಿ 29, 2024 ರಲ್ಲಿ ರಾಜ್ಯ ಸರ್ಕಾರಕ್ಕೆ ಸಲ್ಲಿಕೆ ಮಾಡಿತ್ತು. ಆದರೆ ಈ ವರದಿಗೆ ಕಾಂಗ್ರೆಸ್‌ನಲ್ಲೇ ಆಂತರಿಕವಾಗಿ ವಿರೋಧ ವ್ಯಕ್ತವಾಗಿದೆ. ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯದ ನಾಯಕರುಗಳು ವರದಿಗೆ ವಿರೋಧ ವ್ಯಕ್ತಪಡಿಸಿದ್ದಾರೆ.


**ಸಚಿವರ ಅಭಿಪ್ರಾಯಗಳೇನು?:** ಜಾತಿ ಗಣತಿ ವಿಚಾರವಾಗಿ ಮಾತನಾಡಿದ ಸಚಿವ ಶಿವರಾಜ್ ತಂಗಡಗಿ 'ವರದಿ ಸರ್ಕಾರಕ್ಕೆ ಕೊಟ್ಟ ಬಳಿಕ ತಿಜೋರಿಯಲ್ಲಿ ಇಟ್ಟಿದ್ದೆವು. ಇವತ್ತು ಕ್ಯಾಬಿನೆಟ್ ಗೆ ತರುತ್ತಿದ್ದೇವೆ. ವರದಿಯ ಗೌಪ್ಯತೆ ಕಾಪಾಡಬೇಕು. ಕ್ಯಾಬಿನೆಟ್ ನಲ್ಲಿ ಚರ್ಚೆಯಾದ ಬಳಿಕ ಮಾತನಾಡುತ್ತೇನೆ. ವರದಿ ಬಗ್ಗೆ ಪರ ವಿರೋಧ ಚರ್ಚೆ ನಡೆಯುತ್ತಿದೆ. ವರದಿ ಎಲ್ಲಿಯೂ ಬಹಿರಂಗ ಆಗಿಲ್ಲ. ಈಗ ಬರುತ್ತಿರುವ ಅಂಕಿ ಸಂಖ್ಯೆ ಊಹಾಪೋಹಗಳು' ಎಂದರು. ಜಾತಿ ಗಣತಿ ವರದಿಯಲ್ಲಿ ಏನಿದೆ ಅಂತ ಯಾರಿಗೂ ಗೊತ್ತಿಲ್ಲ. ಇದು ಜಾತಿಗಣತಿ ಅಲ್ಲ. ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ. ಇದಕ್ಕೆ ಯಾರು ಆತಂಕಪಡುವ ಅವಶ್ಯಕತೆ ಇಲ್ಲ. ಜನರ ಸಮೀಕ್ಷೆ ಬಿಟ್ಟು ಜಾತಿ ಸಮೀಕ್ಷೆ ಅಲ್ಲ ಎಂದರು.

## ನಮ್ಮ ಮನೆಗೆ, ನಮ್ಮ ಅಜ್ಜನ ಮನೆಗೆ ಯಾರೂ ಬಂದು ಜಾತಿ ಗಣತಿ ಮಾಡಿಲ್ಲ

• **ಉದಯವಾಹಿನಿ, ಬೆಂಗಳೂರು**

ನಮ್ಮ ಮನೆಗೆ, ನಮ್ಮ ಅಜ್ಜನ ಮನೆಗೆ ಯಾರೂ ಬಂದು ಜಾತಿ ಗಣತಿ ಮಾಡಿಲ್ಲ. ಜಾತಿ ಜನಗಣತಿ ಎನ್ನುವುದು ಕ್ರಮಬದ್ಧವಾಗಿ, ವೈಜ್ಞಾನಿಕವಾಗಿ ನಡೆದಿಲ್ಲ ಎಂದು ನಿಖಿಲ್ ಕುಮಾರಸ್ವಾಮಿ ಆರೋಪಿಸಿದರು.

ಮೊದಲನೆಯದಾಗಿ ವರದಿಯಲ್ಲಿ ಏನಿದೆ ಎನ್ನುವುದನ್ನು ಬಹಿರಂಗಪಡಿಸಬೇಕು. ಆದಾದ ನಂತರ ನಾವು ಯಾವ ರೀತಿಯ ನಿರ್ಧಾರವನ್ನು ತೆಗೆದುಕೊಳ್ಳಬೇಕೆಂಬ ತೀರ್ಮಾನ ಮಾಡುತ್ತೇವೆ. ಒಂದಂತೂ ಸತ್ಯ, ಈ ಜಾತಿ ಜನಗಣತಿ ವೈಜ್ಞಾನಿಕವಾಗಿ ನಡೆದಿಲ್ಲ. ನಮ್ಮ ಮನೆಗಾಗಲಿ, ನಮ್ಮ ಅಜ್ಜ ದೇವೇಗೌಡರ ಮನೆಗಾಗಲಿ ಯಾರೂ ಬಂದು ಗಣತಿ ಮಾಡಿಲ್ಲ ಎಂದು ಅವರು ಟೀಕಿಸಿದರು. ರಾಜಕೀಯ ಸಂಕಷ್ಟ ಕಾಲ ಬಂದಾಗ ಕೆಲವರಿಗೆ ಇಂಥ ವಿಚಾರಗಳು ನೆನಪಿಗೆ



ಬರುತ್ತವೆ. ಐದು ವರ್ಷ ಮುಖ್ಯಮಂತ್ರಿ, ಎರಡನೇ ಬಾರಿ ಸಿಎಂ ಆಗಿ ಎರಡು ವರ್ಷ ಆಗಿದೆ. ಹಣಕಾಸು ಸಚಿವರು, ಉಪ ಮುಖ್ಯಮಂತ್ರಿ, ಪ್ರತಿಪಕ್ಷ ನಾಯಕ ಇಷ್ಟೆಲ್ಲಾ ಆಗಿದ್ದರು ಅವರಿಗೆ ಅಹಿಂದ ಜನರನ್ನು ಉದ್ಧಾರ ಮಾಡುವುದು ಸಾಧ್ಯ ಆಗಿಲ್ಲ. ರಾಜಕೀಯ ಗಿಮಿಕ್ ಮಾಡಿಕೊಂಡು ತಿರುಗಾಡುತ್ತಿದ್ದಾರೆ ಎಂದು ಅವರು ದೂರಿದರು.

**ಸಾಕಪ್ಪ ಸಾಕು ಕಾಂಗ್ರೆಸ್ ಸಾಕು ಅಭಿಯಾನ:** ಸಾಕಪ್ಪ ಸಾಕು ಕಾಂಗ್ರೆಸ್ ಸಾಕು ಅಭಿಯಾನ ನಮ್ಮ ಸ್ಲೋಗನ್ ಅಲ್ಲ, ನಾಡಿನ ಎಳೂವರೆ ಕೋಟಿ ಜನರ ದನಿ. ಸಾಮಾನ್ಯ ಕನ್ನಡಿಗನ ಕಣ್ಣೀರ ಕೂಗು ಎಂದು ಯುವ ಜನತಾದಳ ರಾಜ್ಯಾಧ್ಯಕ್ಷರಾದ ನಿಖಿಲ್ ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದರು. ಈ ಸರ್ಕಾರದ ದುರಾಡಳಿತ, ಭ್ರಷ್ಟಾಚಾರದ ಜತೆಗೆ ಐದು ಗ್ಯಾರಂಟಿಗಳ ಹೆಸರಿನಲ್ಲಿ ರಾಜ್ಯದ ಸಂಪತ್ತನ್ನ ಲೂಟಿ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ರಾಜ್ಯ ಸರ್ಕಾರದ ದುರಾಡಳಿತ, ಬೆಲೆ ಏರಿಕೆ ವಿರೋಧಿಸಿ ಫ್ರೀಡಂ ಪಾರ್ಕ್ ನಲ್ಲಿ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ. ಸಾಕಪ್ಪ ಸಾಕು ಕಾಂಗ್ರೆಸ್ ಸರ್ಕಾರ ಇದು ರಾಜ್ಯದ ಜನರ ಮನೆ ಮನೆಯ ಮಾತು. ಜನರ ಭಾವನೆಗಳಿಗೆ ಸ್ಪಂದಿಸುವ ಕೆಲಸವನ್ನು ನಮ್ಮ ಪಕ್ಷ ಮಾಡುತ್ತಿದೆ ಎಂದು ಅವರು ತಿಳಿಸಿದರು.

# ಹಾವೇರಿಗೂ ಸಿಕ್ಕು ವಂದೇ ಭಾರತ್ ಎಕ್ಸ್‌ಪ್ರೆಸ್ ಸೇವೆ

■ ಹಾವೇರಿ ನಗರ ರೈಲು ನಿಲ್ದಾಣದಲ್ಲಿ ವಂದೇ ಭಾರತ್ ಎಕ್ಸ್‌ಪ್ರೆಸ್ ನಿಲುಗಡೆಗೆ ಸಚಿವ ವಿ ಸೋಮಣ್ಣ, ಸಂಸದ ಬೊಮ್ಮಾಯಿ ಚಾಲನೆ

• **ಉದಯವಾಹಿನಿ, ಹಾವೇರಿ**

ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಸೇವೆಯು ಇನ್ನು ಮುಂದೆ ಹಾವೇರಿ ಜಿಲ್ಲೆಗೂ ಸಿಗಲಿದೆ. ಹಾವೇರಿ ನಗರ ರೈಲ್ವೆ ನಿಲ್ದಾಣದಲ್ಲಿ ಈ ರೈಲು ನಿಲುಗಡೆಗೆ ಕೇಂದ್ರ ಸಚಿವ ವಿ ಸೋಮಣ್ಣ, ಸಂಸದ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು.

ಬಸವರಾಜ ಬೊಮ್ಮಾಯಿ ಅವರು ತಮ್ಮ ಭಾಷಣದಲ್ಲಿ ಹಾವೇರಿಯಲ್ಲಿ ವಂದೇ ಭಾರತ್ ಎಕ್ಸ್‌ಪ್ರೆಸ್‌ಗೆ ಹೆಚ್ಚುವರಿ ನಿಲುಗಡೆ ನೀಡಿದ ಕುರಿತು ಸಚಿವ ಸೋಮಣ್ಣ ಅವರಿಗೆ ಧನ್ಯವಾದ ತಿಳಿಸಿದರು. ಅವರು ಹಾವೇರಿ ರೈಲ್ವೆ ನಿಲ್ದಾಣದಲ್ಲಿ ಎರಡು ಎಸ್ಕಲೇಟರ್‌ಗಳ ಅಗತ್ಯವಿದೆ ಎಂಬುದನ್ನು ಗಮನಕ್ಕೆ ತಂದರು. ಗದಗ-ಯಾಳವಿಗಿ ಹೊಸ ಮಾರ್ಗದ ಸಮೀಕ್ಷೆಯನ್ನು ಶೀಘ್ರ ಪೂರ್ಣಗೊಳಿಸಲು ಹಾಗೂ ರಾಣೆಬೆನ್ನೂರು ಮತ್ತು ಬ್ಯಾಡಗಿಯಲ್ಲಿ ಕೃಷಿ ಉತ್ಪನ್ನಗಳ ಸಾಗಣೆಗಾಗಿ ಗೂಡ್ಸ್ ಶೆಡ್‌ಗಳ ವಿಸ್ತರಣೆ ಅಗತ್ಯವಿದೆ ಎಂದು ಒತ್ತಾಯಿಸಿದರು.

ಈ ಮನವಿಗೆ ಸ್ಪಂದಿಸಿದ ಸಚಿವ ವಿ ಸೋಮಣ್ಣ ಅವರು ಹಾವೇರಿ ನಿಲ್ದಾಣದಲ್ಲಿ ಶೀಘ್ರದಲ್ಲೇ ಎರಡು ಎಸ್ಕಲೇಟರ್‌ಗಳನ್ನು ಸ್ಥಾಪಿಸುವ ಭರವಸೆ ನೀಡಿದರು. ಜೊತೆಗೆ, ಹಾವೇರಿ-ಗದಗ ಪ್ರದೇಶದ ಎಲ್ಲಾ ಲೆವೆಲ್ ಕ್ರಾಸಿಂಗ್‌ಗಳನ್ನು ಬೇಗನೆ ತೆರವುಗೊಳಿಸುವ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.



**ಹಾವೇರಿ ಜನರ ಕನಸು ನನಸು**

**56 ಕೋಟಿ ವೆಚ್ಚದ ವಿದ್ಯುತೀಕರಣ ಕಾಮಗಾರಿಗಳು ಪೂರ್ಣ**

**ಹುಬ್ಬಳ್ಳಿ-ಮಾಯಕೊಂಡ ದ್ವಿಪಥ ಮಾರ್ಗವನ್ನು 1,674 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ದೇವರಗುಡ್ಡ-ಕರಜಗಿ ವಿಭಾಗದಲ್ಲಿ 55 ಕೋಟಿ ಹಾಗೂ ತೋಳಹುಣಸೆ-ದೇವರಗುಡ್ಡ ವಿಭಾಗದಲ್ಲಿ 56 ಕೋಟಿ ವೆಚ್ಚದ ವಿದ್ಯುತೀಕರಣ ಕಾಮಗಾರಿಗಳು ಪೂರ್ಣಗೊಂಡಿವೆ. ಜೊತೆಗೆ, ಹರಪನಹಳ್ಳಿ ಮಾರ್ಗವಾಗಿ ಕೊಟ್ಟೂರು-ಹರಿಹರ ನಡುವಿನ 65 ಕಿ.ಮೀ ಉದ್ದದ ಹೊಸ ರೈಲು ಮಾರ್ಗವು 4,676 ಕೋಟಿ ವೆಚ್ಚದಲ್ಲಿ ಪೂರ್ಣಗೊಂಡಿದೆ ಎಂದು ಹೇಳಿದರು.**

**ಹಾವೇರಿ ಆಗಮನ ನಿರ್ಗಮನ**

- **ಬೆಂಗಳೂರು ಧಾರವಾಡ ವಂದೇ ಭಾರತ್ ರೈಲು ಹಾವೇರಿ ನಿಲ್ದಾಣಕ್ಕೆ ಬೆಳಿಗ್ಗೆ 10.05 ಕ್ಕೆ ಆಗಮಿಸಿ 10.07 ಕ್ಕೆ ನಿರ್ಗಮಿಸಲಿದೆ.**
- **ಧಾರವಾಡ ಬೆಂಗಳೂರು ವಂದೇ ಭಾರತ್ ರೈಲು ಮಧ್ಯಾಹ್ನ 2.40 ಕ್ಕೆ ಆಗಮನಿಸಿ 2.42 ಕ್ಕೆ ನಿರ್ಗಮಿಸಲಿದೆ**

**ದೇಶದಲ್ಲಿ 100 ಕ್ಕೂ ಅಧಿಕ ವಂದೇ ಭಾರತ್ ರೈಲು:** ದೇಶದಲ್ಲಿ ಈಗಾಗಲೇ 104 ವಂದೇ ಭಾರತ್ ರೈಲುಗಳು ಚಾಲನೆಯಲ್ಲಿವೆ ಎಂದು ತಿಳಿಸಿದರು, ಇದರಲ್ಲಿ 10 ರೈಲುಗಳು ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಹೊರತಾಗಿ, ಬೆಳಗಾವಿ-ಹಾವೇರಿ-ಬೆಂಗಳೂರು ಮಾರ್ಗದಲ್ಲಿ ವಂದೇ ಭಾರತ್ ಸ್ಲೀಪರ್ ರೈಲು ಹಾಗೂ ಇನ್ನಷ್ಟು ಎರಡು ವಂದೇ ಭಾರತ್ ರೈಲುಗಳನ್ನು ರಾಜ್ಯಕ್ಕೆ ಪರಿಚಯಿಸುವ ಯೋಜನೆ ಇದೆ ಎಂದು ಹೇಳಿದರು. ಹೊಸ ಆಧುನಿಕ ಸೌಲಭ್ಯಗಳೊಂದಿಗೆ ಅಮೃತ್ ಭಾರತ್ ಎಕ್ಸ್ ಪ್ರೆಸ್ ರೈಲುಗಳ ಸೇವೆಗಳನ್ನು ಈ ಭಾಗಕ್ಕೂ ವಿಸ್ತರಿಸಲಾಗುವುದು ಎಂದು ಹೇಳಿದರು .

ಮೊದಲ ಹಂತದಲ್ಲಿ ಕರ್ನಾಟಕದಲ್ಲಿ ಕವಚ್ ಸುರಕ್ಷತಾ ವ್ಯವಸ್ಥೆಯನ್ನು ಸ್ಥಾಪಿಸಲು 1,900 ಮಾರ್ಗ ಕಿಲೋಮೀಟರ್ ಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗಕ್ಕೆ ಡಿಪಿಆರ್ ಸಲ್ಲಿಸಲಾಗಿದ್ದು, ಶೀಘ್ರದಲ್ಲೇ ಯೋಜನೆ ಪ್ರಾರಂಭವಾಗಲಿದೆ ಎಂದು ಮಾಹಿತಿ ನೀಡಿದರು.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.99 ₹/L | ಬಂಗಾರ: ₹9,540/Gram24ct ₹8,745/Gram22ct | ಬೆಳ್ಳಿ: ₹97.10/Gram

## ಪ್ರೇಕ್ಷಕರ ಕಣ್ಮನ ಸೆಳೆದ ಶ್ರೀ ಕೃಷ್ಣಲೀಲಾ ನೃತ್ಯ ಪ್ರದರ್ಶನ

ಉದಯವಾಹಿನಿ ಚಿತ್ರ



• ಉದಯವಾಹಿನಿ, ಬೆಂಗಳೂರು

ಪರಮಪೂಜ್ಯ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಜಯನಗರದ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್ ಕೆ ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಗುರುವಾರ ಸಂಜೆ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನೆಲಮಂಗಲದ ಶ್ರೀ ಗಣೇಶ ನೃತ್ಯಾಲಯ ಸಂಗೀತ, ನೃತ್ಯ ಶಾಲೆಯ ಗುರುಗಳಾದ ವಿ. ಶ್ರೀಮತಿ ಭಾವನಾ ಗಣೇಶ್, ವಿ. ಶ್ರೀ ಎಂ.ಡಿ. ಗಣೇಶ್ ದಂಪತಿಗಳು ತಮ್ಮ ನೃತ್ಯ ಶಾಲೆಯ ಸುಮಾರು 35 ವಿದ್ಯಾರ್ಥಿಗಳೊಂದಿಗೆ ನಡೆಸಿಕೊಟ್ಟ ಭರತನಾಟ್ಯ ಪ್ರದರ್ಶನದಲ್ಲಿ ಶ್ರೀಕೃಷ್ಣ ಲೀಲಾ ನೃತ್ಯ ಪ್ರದರ್ಶನ ಕಿಕ್ಕಿರಿದು ನೆರೆದಿದ್ದ ಭಕ್ತಾದಿಗಳ ಕಣ್ಮನ ಸೆಳೆಯಿತು ಎಂದು ಶ್ರೀ ನಂದಕಿಶೋರಾಚಾರ್ ತಿಳಿಸಿದರು.

## ಜಾತಿ ಗಣತಿ ಒಮ್ಮತದ ನಿರ್ಧಾರ

• ಉದಯವಾಹಿನಿ, ಬೆಂಗಳೂರು

ಜಾತಿ ಗಣತಿ ವರದಿ ಕುರಿತು ಎಲ್ಲರ ಅಭಿಪ್ರಾಯ ಪಡೆದು ಒಮ್ಮತದ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ



ಮಾತನಾಡಿದ ಅವರು, ವರದಿ ಮಂಡನೆಗೆ ಮುಹೂರ್ತ ಫಿಕ್ಸ್ ಆಗಿದೆ. ವರದಿಯಲ್ಲಿ ಏನಿದೆ? ಏನಿಲ್ಲ ಎಂಬುದು ಯಾರಿಗೂ ಗೊತ್ತಿಲ್ಲ. ಅದು ಮೊದಲು ಬಹಿರಂಗವಾಗಲಿ. ಆನಂತರ ಎಲ್ಲರ ಜೊತೆ ಚರ್ಚಿಸಿ ಅಂತಿಮ ನಿರ್ಧಾರ ತೆಗೆದುಕೊಳ್ಳಬಹುದು.

ಯಾವ ನಿರ್ಧಾರ ಎಂದು ಈಗಲೇ ಹೇಳಲು ಸಾಧ್ಯವಿಲ್ಲ ಎಂದರು. ವರದಿಯಲ್ಲಿರುವ ಅಂಶಗಳು ಬಹಿರಂಗವಾದ, ನಂತರ ವಿಧಾನಮಂಡಲದ ಅಧಿವೇಶನ ಕರೆದು ಚರ್ಚೆ ಮಾಡಲು ಸಾಧ್ಯವಾಗುತ್ತದೆ ಎಂದು ಹೇಳಿದರು. 169 ಕೋಟಿ ಖರ್ಚು ಮಾಡಿ ಸಿದ್ದಪಡಿಸಲಾಗಿರುವ ವರದಿ ಬಹಿರಂಗಗೊಳ್ಳದೆ, ಅವೈಜ್ಞಾನಿಕ ಎಂದೆಲ್ಲ ಟೀಕೆ ಮಾಡಿರುವುದು ಸರಿಯಲ್ಲ. ಮೊದಲು ವರದಿಯಲ್ಲಿನ ಅಂಶಗಳನ್ನು ಹಿಡಿದು ಅದರ ಮೇಲೆ ಚರ್ಚೆ ಮಾಡಲಿ. ಆಗ ಅದರಲ್ಲಿನ ಸರಿತಪ್ಪುಗಳು ಚರ್ಚೆಯಾಗಲಿ, ವಿಧಾನ ಮಂಡಲದಲ್ಲಿ ಎಲ್ಲರಿಗೂ ತಮ್ಮ ಅಭಿಪ್ರಾಯಗಳನ್ನು ಹೇಳಲು ಮುಕ್ತ ಅವಕಾಶವಿದೆ ಎಂದರು.

## ಹಿಂದುಳಿದ ವರ್ಗಗಳ ವರದಿ ಸಮಗ್ರ ಪರಿಶೀಲನೆ : ಪ್ರಿಯಾಂಕ್

• ಉದಯವಾಹಿನಿ, ಬೆಂಗಳೂರು

ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ಸಿದ್ಧಪಡಿಸಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ವರದಿಯ ಸಾಧಕ-ಬಾಧಕಗಳ ಬಗ್ಗೆ ಸಮಗ್ರ ಪರಿಶೀಲನೆ ನಡೆಸುವ ಅಗತ್ಯವಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು



ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ಆಯೋಗದ ಸಲ್ಲಿಸಿರುವ ವರದಿ ಜಾತಿ ಗಣತಿ ಅಲ್ಲ, ಮನೆ ಮನೆ ಸಮೀಕ್ಷೆ ನಡೆದಿಲ್ಲ. ಅವೈಜ್ಞಾನಿಕವಾಗಿದೆ ಎಂಬೆಲ್ಲ ವಿಚಾರಗಳು ಚರ್ಚೆಯಾಗುತ್ತಿವೆ. ವರದಿ ಬಹಿರಂಗಗೊಳ್ಳದ ಹೊರತು ಅದರಲ್ಲಿನ ಅಂಶಗಳ ಬಗ್ಗೆ ಹೇಳಿಕೆ ನೀಡುವುದು ಅಪ್ರಸ್ತುತವಾಗಿದೆ. ವರದಿ ವೈಜ್ಞಾನಿಕವೋ, ಅವೈಜ್ಞಾನಿಕವೋ? ದತ್ತಾಂಶಗಳು ಸರಿಯಾಗಿವೆ. ಯಾವ ರೀತಿಯ ಅಂಶ ಸಂಗ್ರಹಿಸಲಾಗಿದೆ, ಜಾತಿ ಗಣತಿಯ ಅಂಕಿಸಂಖ್ಯೆಗಳ ಜೊತೆ ಹೋಲಿಕೆಯಾಗುತ್ತದೆಯೇ? ಎಂಬೆಲ್ಲ ವಿಚಾರಗಳನ್ನು ಪರಿಶೀಲಿಸಲಾಗುವುದು ಎಂದರು. ಒಳಮೀಸಲಾತಿ ವಿಚಾರ ಬಂದಾಗ ನ್ಯಾಯಮೂರ್ತಿ ನಾಗಮೋಹನ್ ದಾಸ್ ವೈಜ್ಞಾನಿಕವಾಗಿ ಮರು ಸಮೀಕ್ಷೆ ಮಾಡುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಆ ಪ್ರಕ್ರಿಯೆಗಳು ಹೇಗಿರಬೇಕು ಎಂಬ ನಿಟ್ಟಿನಲ್ಲಿ ತೀರ್ಮಾನ ತೆಗೆದುಕೊಳ್ಳಲಿದ್ದೇವೆ.

ಅದೇ ರೀತಿ ಹಿಂದುಳಿದ ವರ್ಗಗಳ ಆಯೋಗದ ವರದಿಯ ಬಗ್ಗೆಯೂ ಸರ್ಕಾರ ಸೂಕ್ತ ನಿರ್ಧಾರ ತೆಗೆದುಕೊಳ್ಳಲಿದೆ ಎಂದರು.

## ಸಂಸದರ ಮೇಲೆ ಕಾಂಗ್ರೆಸ್ ಗೂಂಡಾಗಿರಿ : ಜೆಡಿಎಸ್ ಆರೋಪ

• ಉದಯವಾಹಿನಿ, ಬೆಂಗಳೂರು

ಚಿಂತಾಮಣಿಯಲ್ಲಿ ನಿರ್ಮಾಣವಾಗಲಿರುವ 50 ಹಾಸಿಗೆಗಳ ತೀವ್ರ ನಿಗಾ ಆರೈಕೆ ಘಟಕ ಕಟ್ಟಡದ ಶಂಕುಸ್ಥಾಪನೆ ವೇಳೆ ಆಗಿದ್ದ ಶಿಷ್ಟಾಚಾರ ಉಲ್ಲಂಘನೆಯನ್ನು ಕೋಲಾರ ಸಂಸದ ಎಂ.ಮಲ್ಲೇಶ್ ಬಾಬು ಅವರು ಪ್ರಶ್ನಿಸಿದ್ದಕ್ಕೆ ಸಚಿವ ಡಾ. ಎಂ.ಸಿ.ಸುಧಾಕರ್ ಬೆಂಬಲಿಗರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಕೊಂಡಾಗಿರಿ ಪ್ರದರ್ಶಿಸಿದ್ದಾರೆ ಎಂದು ಜೆಡಿಎಸ್ ಆರೋಪಿಸಿದೆ. ಈ ಸಂಬಂಧ ತನ್ನ ಸಾಮಾಜಿಕ ಜಾಲ ತಾಣದಲ್ಲಿ ಪೋಸ್ಟ್ ಮಾಡಿರುವ ಜೆಡಿಎಸ್, ಕಾಂಗ್ರೆಸ್ ಸರ್ಕಾರ ದ್ವೇಷದ ರಾಜಕಾರಣ ಮಾಡುತ್ತಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆ ಅಡಿ ಮಂಜೂರಾದ ಕಾಮಗಾರಿ ಉದ್ಘಾಟನೆ ವೇಳೆ ರಾಜ್ಯ ಕಾಂಗ್ರೆಸ್‌ನಿಂದ ಗೂಂಡಾಗಿರಿ ನಡೆದಿದೆ ಎಂದು ಆಪಾದಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾರವರ ಫೋಟೋವನ್ನು ಹಾಕದೆ ರಾಜ್ಯ ಕಾಂಗ್ರೆಸ್‌ಸರ್ಕಾರ ಶಿಷ್ಟಾಚಾರದ ನಿಯಮ ಉಲ್ಲಂಘಿಸಿದೆ. ಕೇಂದ್ರ ಸರ್ಕಾರದ ಯೋಜನೆಯಡಿ ಅನುದಾನ ಪಡೆದು, ಕೇವಲ ಕಾಂಗ್ರೆಸ್ ಕಾರ್ಯಕ್ರಮ ಎಂದು ಬಿಂಬಿಸಿಕೊಂಡು ಕಾಂಗ್ರೆಸ್ ಜಾತ್ರೆ ನಡೆಸಿದ್ದಾರೆ.

ಲಜ್ಜೆಗೆಟ್ಟ ಕಾಂಗ್ರೆಸ್ಸಿಗರು ಎಂದು ಜೆಡಿಎಸ್ ಟೀಕಿಸಿದೆ.

## ಕುಡಿಯಲು ಹಣ ಕೊಡಲಿಲ್ಲ ಅಂತ ತಾಯಿಯನ್ನೇ ಕೊಂದ ಪಾಪಿ ಮಗ


• ಉದಯವಾಹಿನಿ, ಬೆಂಗಳೂರು

ಮದ್ಯ ಕುಡಿಯೋದಕ್ಕೆ ಹಣ ಕೊಡಲಿಲ್ಲ ಅಂತ ಸ್ವತಃ ಮಗನೇ ತಾಯಿಯನ್ನು ಹತ್ಯೆ ಮಾಡಿರುವ ಘಟನೆ ಬೆಂಗಳೂರಿನಲ್ಲಿ ನಡೆದಿದೆ.

ಕುಡಿತಕ್ಕೆ ದಾಸನಾಗಿದ್ದ 52 ವರ್ಷದ ಮಗ 82 ವರ್ಷದ ವೃದ್ಧ ತಾಯಿಯನ್ನ ಕಬ್ಬಿಣದ ರಾಡ್‌ನಿಂದ ಹೊಡೆದು ಕೊಲೆ ಮಾಡಿದ್ದಾನೆ. ಶಾಂತಾಬಾಯಿ (82) ಕೊಲೆಯಾದ ಮೃತ ವೃದ್ದೆ. ಮಹೆಂದ್ರ ಸಿಂಗ್ (52) ಕೊಲೆ ಮಾಡಿದ ಮಗ. ಬಗಲಗುಂಟೆಯ ಮುನೇಶ್ವರ ನಗರದಲ್ಲಿ ತಡರಾತ್ರಿ ಕೊಲೆ ಮಾಡಿ ಮಗ ಎಸ್ಕೇಪ್ ಆಗಿದ್ದಾನೆ. ಕುಡಿತದ ಚಟಕ್ಕೆ ಬಿದ್ದು ಕೆಲಸಕ್ಕೆ ಹೋಗದೇ ಅಲೆಯುತ್ತಿದ್ದ ಮಹೇಂದ್ರ ಸಿಂಗ್, ನಿತ್ಯ ಹಣಕ್ಕಾಗಿ ತಾಯಿಗೆ ಹಿಂಸೆ ನೀಡಿ, ನಿಂದಿಸುತ್ತಿದ್ದ. ಹಣ ಕೊಡದಿದ್ದಕ್ಕೆ ಕಬ್ಬಿಣದ ರಾಡ್‌ನಿಂದ ಹೊಡೆದು ಕೊಲೆಮಾಡಿ ಎಸ್ಕೇಪ್ ಆಗಿದ್ದಾನೆ. ಈ ಕುರಿತು ಬಗಲಗುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕಾಂಗ್ರೆಸ್ ವಿರುದ್ಧ ಅಶೋಕ್ ವಾಗ್ದಾಳಿ

• ಉದಯವಾಹಿನಿ, ಬೆಂಗಳೂರು



ಕಾಂಗ್ರೆಸ್‌ನವರು ಹಲವಾರು ವರ್ಷಗಳ ಕಾಲ ದಲಿತರನ್ನು ತುಳಿದು ಕೊಂಡೇ ಬಂದಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆರೋಪಿಸಿದರು.

ವಿಧಾನಸೌಧದ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಬಳಿ ಭೀಮ ಹೆಜ್ಜೆ 100ರ ಸಂಭ್ರಮ ಕಾರ್ಯಕ್ರಮದ ಉದ್ಘಾಟನೆಯಲ್ಲಿ ಮಾತನಾಡಿದ ಅವರು, ದಲಿತರ ಬಗ್ಗೆ ಮಾತಾಡುವಾಗಲೆಲ್ಲ ಅವರು ತುಳಿತಕ್ಕೆ ಒಳಗಾದವರು ಎಂದು ಹೇಳುತ್ತೇವೆ. ಆದರೆ ಈ ರೀತಿ ತುಳಿದವರು ಯಾರು ಎಂದು ಪ್ರಶ್ನೆ ಮಾಡಿದರೆ, ಕಾಂಗ್ರೆಸ್‌ನವರೇ ಎಂಬ ಉತ್ತರ ಸಿಗುತ್ತದೆ ಎಂದರು. ಇಷ್ಟು ವರ್ಷ ಶೋಷಿತರನ್ನು ಕಾಂಗ್ರೆಸ್‌ನವರೇ ತುಳಿದಿದ್ದಾರೆ.

ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಕಾಂಗ್ರೆಸ್‌ನ ಕಳ್ಳರು ದಲಿತರನ್ನು ಉದ್ಧಾರ ಮಾಡಲಿಲ್ಲ ಎಂದು ಹೇಳಿದರು. ವಕ್ಫ್ ಮಂಡಳಿ ಲಕ್ಷಾಂತರ ದಲಿತರ ಆಸ್ತಿಗಳನ್ನು ಲೂಟಿ ಮಾಡಿದೆ. ವಕ್ಫ್‌ನಿಂದಾದ ಭೂ ಕಬಳಿಕೆ ಬಗ್ಗೆ ನಾನು ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡುತ್ತಿದ್ದಾಗ, ದೂರು ಹೇಳಿಕೊಳ್ಳಲು ಬರುತ್ತಿದ್ದವರಲ್ಲಿ ದಲಿತರೇ ಹೆಚ್ಚಿನ ಸಂಖ್ಯೆಯಲ್ಲಿರುತ್ತಿದ್ದರು.

ಸಂಸತ್ತಿನಲ್ಲಿ ವಸ್ತ್ರ ತಿದ್ದುಪಡಿ ಮಸೂದೆಗೆ ವಿರುದ್ಧವಾಗಿ ಕಾಂಗ್ರೆಸ್ ನಿಂತುಕೊಳ್ಳುತ್ತದೆ ಎಂಬುದರಲ್ಲೇ ಅವರ ದಲಿತರ ಕಾಳಜಿ ಅರ್ಥವಾಗುತ್ತದೆ. ಸಂವಿಧಾನ ಉಳಿಯಬೇಕು, ಕಾಂಗ್ರೆಸ್‌ನ ಪೊಳ್ಳು ಭರವಸೆಗಳು ಹೋಗಬೇಕು ಎಂದರು. ಗುತ್ತಿಗೆದಾರರು ಕಮಿಶನ್ ಆರೋಪ ಮಾಡಿದ್ದು, ಈ ಬಗ್ಗೆ ಕಾಂಗ್ರೆಸ್ ನಾಯಕರು ಸಭೆ ಮಾಡಿ ಚರ್ಚಿಸಲಿ, ಯಾವ ಖಾತೆಗಳಲ್ಲಿ ಎಷ್ಟು ಲೂಟಿ ನಡೆಯುತ್ತಿದೆ ಎಂದು ಹೇಳಿದ್ದಾರೆ.

**ಕೈ ನಾಯಕರು ಸಭೆ ಮಾಡಿ ಚರ್ಚಿಸಲಿ**

ಕಮಿಶನ್ ಕೊಡುವವರಿಗೆ ಬಿಲ್ ಪಾವತಿಯಾಗುತ್ತದೆ. ಅಬ ಕಾರಿ ಇಲಾಖೆಯಲ್ಲಿ ಸಚಿವರ ಮಗ ಲೂಟಿ ಮಾಡುತ್ತಿದ್ದಾರೆ. ಸಚಿ ವರ ಮೇಲೆ ಇಷ್ಟೆಲ್ಲ ಆರೋಪ ಬಂದರೂ ಸಿಎಂ ಸಿದ್ದರಾಮಯ್ಯ ಸಮರ್ಥನೆ ಮಾಡಿಕೊಳ್ಳುತ್ತಾರೆ. ಭ್ರಷ್ಟಾಚಾರವೇ ನಮ್ಮ ಬಂಧು ಬಳಗ ಎಂದು ಕಾಂಗ್ರೆಸ್ ಘೋಷ ಮಾಡಿಕೊಳ್ಳಬೇಕು. ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡದೇ ಇರಲು ಕಮಿಷನ್ ವಸೂಲಿ ಮಾಡುತ್ತಿದ್ದಾರೆ. ಡಿ.ಕೆ.ಶಿವಕುಮಾರ್ ಸಿಎಂ ಆಗಲು ಕಮಿಶನ್ ಸಂಗ್ರಹಿಸುತ್ತಿದ್ದಾರೆ. ಸಚಿವರು ಕೂಡ ಸಿಎಂ ಆಗಲು ಕಮಿಶನ್ ಮಾಡುತ್ತಿದ್ದಾರೆ. ವಿಧಾನಸೌಧದ ಸಚಿವರ ಕಚೇರಿಗಳು ಕಲೆಕ್ಷನ್ ಸೆಂಟರ್ ಆಗಿದೆ. ಜೊತೆಗೆ ಜನರ ಮೇಲೆ 80 ಸಾವಿರ ಕೋಟಿ ರೂ. ತೆರಿಗೆ ಹಾಕಿದ್ದಾರೆ ಎಂದು ದೂರಿದರು.

> **ಬಾಬಾ ಸಾಹೇಬ್ ಅಂಬೇಡ್ಕರ ಹೆಸರನ್ನು ಕಾಂಗ್ರೆಸ್‌ನವರು ದುರುಪಯೋಗ ಮಾಡಿಕೊಂಡರು. ನರೇಂದ್ರ ಮೋದಿ ಪ್ರಧಾನಿಯಾದ ಬಳಿ ಅಂಬೇಡ್ಕರರ ಜೀವನದ ಪ್ರಮುಖ ಸ್ಥಳಗಳನ್ನು ಪಂಚತೀರ್ಥವೆಂದು ಯಾತ್ರಾ ಸ್ಥಳವಾಗಿಸಿದರು. ಕಾಂಗ್ರೆಸ್ ನಾಯಕರು ತಾವು ದಲಿತರ ಪರ ಎಂದು ಹೇಳುತ್ತಾರೆ. ಆದರೆ ದಲಿತರಿಗೆ ಮೋಸ ಮಾಡುತ್ತಾರೆ**
> **- ಆರ್.ಅಶೋಕ, ಪ್ರತಿಪಕ್ಷ ನಾಯಕ**

## ಬಿಜೆಪಿ ಸರ್ಕಾರದ ವಿರುದ್ಧ 40% ಕಮಿಷನ್ ಆರೋಪ

### 1699 ಎಕರೆಯನ್ನು ನೈಸ್ ಸಂಸ್ಥೆಯವರು ಬೇರೆಯವರಿಗೆ ಶುದ್ಧ ಕ್ರಯ ಮಾಡಿಕೊಡಲು ಮುಂದು

• ಉದಯವಾಹಿನಿ, ಬೆಂಗಳೂರು

ಬಿಜೆಪಿ ಸರ್ಕಾರದ ವಿರುದ್ಧ ಕೇಳಿಬಂದಿದ್ದ 40% ಕಮಿಷನ್ ಆರೋಪಕ್ಕೆ ಸಂಬಂಧಿಸಿದ ತನಿಖೆಗೆ ಎಸ್‌ಐಟಿ ರಚಿಸಲು ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಕಾನೂನು ಸಚಿವ ಹೆಚ್. ಕೆ. ಪಾಟೀಲ್ ಅವರು ಹೇಳಿದರು. ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಗುತ್ತಿಗೆದಾರರ ಸಂಘದ ಆರೋಪ ಬಗ್ಗೆ ನಾಗಮೋಹನ್ ದಾಸ್ ನೇತೃತ್ವದಲ್ಲಿ ವಿಚಾರಣಾ ಆಯೋಗ ರಚಿಸಲಾಗಿತ್ತು. ನಾಗಮೋಹನ್ ದಾಸ್ ಅವರು ವಿಚಾರಣಾ ವರದಿ ಸಲ್ಲಿಸಿದ ಬಳಿಕ ಸಂಪುಟದಲ್ಲಿ ಮಂಡಿಸಲಾಗಿದೆ.

ಕೆಲವು ವಿವರಗಳನ್ನು ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡಲಾಯಿತು. ಇನ್ನಷ್ಟು ವಿವರವಾಗಿ ಚರ್ಚೆಯ ಅಗತ್ಯವಿದೆ ಎಂದು ಹೇಳಿದರು. ದೂರುಗಳ ಮಾಹಿತಿ ಕಲೆ ಹಾಕಿ ವರದಿಯನ್ನು ನೀಡ ಲಾಗಿದೆ. 3 ಲಕ್ಷ ಕಾಮಗಾರಿಗಳ ಪೈಕಿ 1729 ಕಾಮಗಾರಿಗಳ ಬಗ್ಗೆ ಆಪಾದನೆಗಳಿವೆ. ಯೋಜನೆ, ಹಣ ಬಿಡುಗಡೆ, ಎಲ್‌ಒಸಿ ಬಿಡುಗಡೆ ಸರಿಯಾದ ರೀತಿಯಲ್ಲಿ ಇಲ್ಲ. ಯಾವ ಪ್ರಮಾಣದಲ್ಲಿ ವ್ಯತ್ಯಾಸಗಳಾಗಿವೆ ಎಂಬುದನ್ನು ಚರ್ಚೆ ನಡೆಸಿದ್ದೇವೆ. ಅನುದಾನಕ್ಕಿಂತ ಹೆಚ್ಚು ಬಿಲ್ ಆಗಿದೆ, ಕಾಮ ಗಾರಿಗಳ ಬಗ್ಗೆ ಸಂಶಯಗಳಿವೆ. ಕೆಲವು ಕಡೆ ಟೆಂಡರ್ ಹಂಚಿಕೆ ವೇಳೆಯೇ ಮಧ್ಯವರ್ತಿಗಳ ಕೆಲಸ ಆಗಿದೆ. ಗಂಭೀರವಾದ ವರದಿಯಾದ ಹಿನ್ನೆಲೆಯಲ್ಲಿ ಎಸ್‌ಐಟಿ ರಚನೆ ಮಾಡಲು ತೀರ್ಮಾನಿಸಿದ್ದೇವೆ. ಎರಡು ತಿಂಗಳಲ್ಲಿ ಕ್ರಮ ಕೈಗೊಳ್ಳಲು ಎಸ್‌ಐಟಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು. ನೈಸ್ ರಸ್ತೆ ಯೋಜನೆ ಬಗ್ಗೆ ಸಂಪುಟ ಸಭೆಯಲ್ಲಿ ವಿಷಯ ಪ್ರಸ್ತಾಪವಾಗಿದೆ. ನೈಸ್ ರಸ್ತೆ ವಿಚಾರಕ್ಕೆ ಸುಪ್ರೀಂ ಮತ್ತು ಹೈಕೋರ್ಟ್‌ನಲ್ಲಿ ವಿಚಾರಣೆ



ನಡೆದಿದೆ. ನೈಸ್ ರಸ್ತೆ ನಿರ್ಮಾಣ ಮುಂದೆ ಆಗಬೇಕಾ?, ಬೇಡ್ವಾ ಎಂಬ ಬಗ್ಗೆ ಸಂಪೂರ್ಣವಾಗಿ ಚರ್ಚೆ ಮಾಡುವುದು ಒಂದು ಸಭೆಯಲ್ಲಿ ಸಾಧ್ಯವಿಲ್ಲ. ಕಾನೂನಾತ್ಮಕ ಅಂಶಗಳನ್ನು ಪರಿ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಸಂಪುಟ ಉಪ ಸಮಿತಿ ನೇಮಕ ಮಾಡಿ ಮುಂದಿನ ತೀರ್ಮಾನ ಮಾಡುತ್ತೇವೆ. 1699 ಎಕರೆಯನ್ನು ನೈಸ್ ಸಂಸ್ಥೆಯವರು ಬೇರೆಯವರಿಗೆ ಶುದ್ಧ ಕ್ರಯ ಮಾಡಿಕೊಡಲು ಮುಂದಾಗಿದ್ದಾರೆ. ಈ ಬಗ್ಗೆಯೂ ಕ್ಯಾಬಿನೆಟ್ ಸಬ್ ಕಮಿಟಿ ತೀರ್ಮಾನ ಕೈಗೊ ಳ್ಳುತ್ತೆ. ಕ್ಯಾಬಿನೆಟ್ ಸಬ್ ಕಮಿಟಿ ರಚನೆಯನ್ನು ಸಿಎಂ ಸಿದ್ದರಾಮಯ್ಯ ಮಾಡಲಿದ್ದಾರೆ ಎಂದು ತಿಳಿಸಿದರು.

ಲೋಕೋಪಯೋಗಿ ಇಲಾಖೆಯ ಚಿಕ್ಕಬಳ್ಳಾಪುರ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಂ. ಮುರಳೀಧರ್. ಕಾರ್ಯನಿರ್ವಾಹಕ ಇಂಜಿನಿಯರ್, ಪಿ.ವಿ. ಶ್ರೀನಿವಾಸುಲು, ಗ್ರೂಪ್-ಡಿ ಇವರ ವಿರುದ್ಧ ಉಪ ಲೋಕಾಯುಕ್ತರು ಮಾಡಿರುವ ದಂಡನಾ ಶಿಫಾರಸನ್ನು ತಿರಸ್ಕರಿಸಿ ಕ್ಯಾಬಿನೆಟ್ ಅನುಮೋದನೆ ನೀಡಿದೆ. ಬೆಂಗಳೂರು ಮೈಸೂರು ಮೂಲಸೌಕರ್ಯ ಕಾರಿಡಾರ್ ಯೋಜನೆಯ ಅನುಷ್ಠಾನದ ಬಗ್ಗೆ ಕ್ಯಾಬಿನೆಟ್ ಸಬ್ ಕಮಿಟಿ ರಚಿಸಲು ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ. ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 512/1ರಲ್ಲಿ 0.26 ಎಕರೆ (26 ಸೆಂಟ್) ಜಮೀನನ್ನು ಬಿಲ್ಲವ ಸಮಾಜ ಸೇವಾ ಸಂಘಕ್ಕೆ ಮಂಜೂರು ಮಾಡಲು ಕ್ಯಾಬಿನೆಟ್ ತೀರ್ಮಾನಿಸಿದೆ.

ಬೆಂಗಳೂರು ನಗರ ಜಿಲ್ಲೆ, ಉತ್ತರ (ಅಪರ) ತಾಲ್ಲೂಕು, ಹೊಸಹಳ್ಳಿ ಗ್ರಾಮದ ಸರ್ವೆ ನಂಬರ್ 21ರಲ್ಲಿ ಕೊಡವ ಸಮಾಜ, ಬೆಂಗಳೂರು ಇವರಿಗೆ ಮಂಜೂರು ಮಾಡಿರುವ 7 ಎಕರೆ ಜಮೀನಿಗೆ ವಿಧಿಸಿರುವ ಮೌಲ್ಯವನ್ನು ಪರಿಷ್ಕರಿಸಿ ಅನುಮೋದಿಸಲಾಗಿದೆ . ಗಿಗ್ ಕಾರ್ಮಿಕರ ವಿಧೇಯಕ ಮಂಡನೆಗೆ ಕ್ಯಾಬಿನೆಟ್ ತೀರ್ಮಾನ ಕೈಗೊಂಡಿದ್ದು, ಸುಗ್ರೀವಾಜ್ಞೆ ಮೂಲಕ ಬಿಲ್ ಜಾರಿಗೆ ತರಲಿದೆ.

### ಕ್ಯಾಬಿನೆಟ್‌ನಲ್ಲಿ ಹಲವು ವಿಷಯಗಳಿಗೆ ಅನುಮೋದನೆ

**ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರಿಗೆ 7ನೇ ಕೇಂದ್ರ ವೇತನ ಆಯೋಗದ ಶಿಫಾರಸ್ಸುಗಳನ್ನು 2019ರ ಸೆಪ್ಟೆಂಬರ್ 9ರ ಬದಲಾಗಿ 2016ರ ಜನವರಿ 1 ರಿಂದ ಅನ್ವಯಿಸಲು ಕರ್ನಾಟಕ ಲೋಕಸೇವಾ ಆಯೋಗ ವಿನಿಯಮಗಳು, 19576 ತಿದ್ದುಪಡಿ ಮಾಡುವ ಬಗ್ಗೆ ಅನುಮೋದನೆ ದೊರೆತಿದೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿ, ಸಕ್ಷಮ ಪ್ರಾಧಿಕಾರಗಳಲ್ಲಿ ಬಾಕಿ ಇರುವ ಲೋಕಾಯುಕ್ತ ಅಭಿಯೋಜನಾ ಮಂಜೂರಾತಿ ಪ್ರಕರಣಗಳ ಬಗ್ಗೆ ಅನುಮೋದನೆ ನೀಡಲಾಗಿದೆ.**

## ಸಿಎಂಆರ್ ನ್ಯಾಷನಲ್ ಪಿಯು ಸಮೂಹ ಕಾಲೇಜುಗಳ ವಿದ್ಯಾರ್ಥಿಗಳಿಂದ ಉತ್ತಮ ಸಾಧನೆ

• ಉದಯವಾಹಿನಿ, ಬೆಂಗಳೂರು

ನಗರದ ವಿವಿಧೆಡೆ ಇರುವ ಸಿಎಂಆರ್ ನ್ಯಾಷನಲ್ ಪಿಯು ಸಮೂಹ ಕಾಲೇಜುಗಳ ವಿದ್ಯಾರ್ಥಿಗಳು 2024-25ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿಉನ್ನತ ಶ್ರೇಣಿಯಲ್ಲಿತೇರ್ಗಡೆಯಾಗುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ.



ಎಚ್‌ಆರ್‌ಬಿಆರ್‌ನಲ್ಲಿರುವ ಸಿಎಂಆರ್ ನ್ಯಾಷನಲ್ ಪಿಯುಕಾಲೇಜಿನ ವಾಣಿಜ್ಯ ವಿಭಾಗದಲ್ಲಿ ವಿದ್ಯಾರ್ಥಿನಿ ಕೆ. ಇಶಾನಿ, ಶೇ.97.67% ಅಂಕಗಳನ್ನು ಪಡೆದರೆ, ವಿಜ್ಞಾನ ವಿಭಾಗದಲ್ಲಿ ವಿದ್ಯಾರ್ಥಿನಿ ಮೇಘನಾ ಎಂ ನಂಬಿಯಾರ್ ಶೇ 97.3% ಅಂಕಗಳನ್ನು ಪಡೆದುಉತ್ತಮ ಸಾಧನೆ ಮಾಡಿದ್ದಾರೆ. ನಗರದಐಟಿಪಿಎಲ್ ನಲ್ಲಿರುವ ಸಿಎಂಆರ್ ನ್ಯಾಷನಲ್ ಪಿಯುಕಾಲೇಜಿನ ವಾಣಿಜ್ಯ ವಿಭಾಗದಲ್ಲಿ ವಿದ್ಯಾರ್ಥಿನಿ ವರ್ಷಾಎಸ್ ಶೇ. 96.8% ಅಂಕಗಳನ್ನು ಪಡೆದರೆ, ವಿಜ್ಞಾನ ವಿಭಾಗದಲ್ಲಿ ವಿದ್ಯಾರ್ಥಿನಿ ಆರ್. ಜಾಗೃತಿ ಶೇ. 94.7% ಅಂಕ ಪಡೆದು ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಬಿಟಿಎಂ ಲೇಔಟ್‌ನ ಸಿಎಂಆರ್ ನ್ಯಾಷನಲ್ ಪಿಯುಕಾಲೇಜಿನ ವಿಜ್ಞಾನ ವಿಭಾಗದಲ್ಲಿ ವಿದ್ಯಾರ್ಥಿನಿ ಪ್ರೇರಣಾ ಮೂಲಚಂದಾನಿ ಶೇ. 96.33% ಅಂಕಗಳನ್ನು ಪಡೆದು ಸಾಧನೆ ಮಾಡಿದ್ದಾರೆ.

ವಿದ್ಯಾರ್ಥಿಗಳ ನಿರಂತರ ಪರಿಶ್ರಮ, ಉಪನ್ಯಾಸಕರಗುಣಾತ್ಮಕ ಬೋಧನೆ, ಆಡಳಿತ ಮಂಡಳಿಯ ಸಕಾರಾತ್ಮಕ ಪ್ರೋತ್ಸಾಹದಿಂದ ಸಿಎಂಆರ್ ನ್ಯಾಷನಲ್ ಪಿಯು ಸಮೂಹ ಕಾಲೇಜುಗಳ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ನೀಡಲು ಸಾಧ್ಯವಾಯಿತುಎಂದು ಸಮೂಹ ಕಾಲೇಜುಗಳ ಪ್ರಾಂಶುಪಾಲರು ಹರ್ಷ ವ್ಯಕ್ತಪಡಿಸಿದ್ದಾರೆ. ಉತ್ತಮ ಅಂಕಗಳೊಂದಿಗೆ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

## ರಾಯರೆಡ್ಡಿ ಯೂಟರ್ನ್: ಹೆಚ್‌ಡಿಕೆ ಲೇವಡಿ

• ಉದಯವಾಹಿನಿ, ಬೆಂಗಳೂರು

ರಾಜ್ಯವು ಭ್ರಷ್ಟಾಚಾರದಲ್ಲಿ ದೇಶದಲ್ಲಿಯೇ ನಂಬರ್ ಒನ್ ಆಗಿದೆ ಎಂದು ಹೇಳಿಕೆ ನೀಡಿದ್ದ ಮುಖ್ಯ ಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ



ರಾಯರೆಡ್ಡಿ ಯೂ ಟರ್ನ್ ಹೊಡೆದಿರುವ ಬಗ್ಗೆ ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಹೆಚ್ .ಡಿ.ಕುಮಾರಸ್ವಾಮಿ ಅವರು ವ್ಯಂಗ್ಯವಾಡಿದ್ದಾರೆ. ಅಲ್ಲದೆ, ಮುಖ್ಯಮಂತ್ರಿ ಗುಣಗಾನ ಮಾಡಿರುವ ರಾಯರೆಡ್ಡಿ ಅವರಿಗೆ ಟಾಂಗ್ ಕೊಟ್ಟಿರುವ ಅವರು, ಸರಣಿ ಹಗರಣಗಳ ಸಿದ್ವಿಲಾಸಿ ಸಿಎಂ ಬಗ್ಗೆ ನಿಮಗೆ ಗೊತ್ತಿಲ್ಲವೇ ಎಂದು ಕಾಲೆಳೆದಿದ್ದಾರೆ.

ಈ ಬಗ್ಗೆ ಮಾಧ್ಯಮ್ ಹೇಳಿಕೆ ನೀಡಿರುವ ಅವರು, ಬಸವರಾಜ ರಾಯರೆಡ್ಡಿ ಅವರು ಯೂ ಟರ್ನ್ ಹೊಡೆಯುವ ಅಗತ್ಯವೇ ಇಲ್ಲ. ಅವರು ಸತ್ಯವನ್ನೇ ನುಡಿದಿದ್ದಾರೆ . ಮಹಾತ್ಮ ಗಾಂಧೀಜಿ ಅವರ ಸತ್ಯಮೇವ ಜಯತೇ ಘೋಷ ವಾಕ್ಯವನ್ನು ಕಾಂಗ್ರೆಸ್ ನಾಯಕರು ಅದೆಷ್ಟು ಶ್ರದ್ಧಾ ಶಕ್ತಿಯಿಂದ ಪರಿಪಾಲನೆ ಮಾಡುತ್ತಿದ್ದಾರೆ ಎಂಬುದಕ್ಕೆ ರಾಯರೆಡ್ಡಿ ಅವರ ಹೇಳಿಕೆಯೇ ಸಾಕ್ಷಿ



ಎಂದು ತಿಳಿಸಿದ್ದಾರೆ. ಗುತ್ತಿಗೆಯಲ್ಲಿ ಪರ್ಸಂಟೇಜ್ , ಕಮಿಷನ್ ದಂಧೆ ಆರಂಭಿಸಿದ್ದು, ಅನ್ಯಪಕ್ಷಗಳ ಸರ್ಕಾರಗಳೇ ಹೊರತು, ಜೆಡಿಎಸ್ ಸರ್ಕಾರವಲ್ಲ. ನಾನು ಮುಖ್ಯ ಮಂತ್ರಿ ಆಗಿದ್ದ ವೇಳೆ ಗುತ್ತಿಗೆದಾರರಿಗೆ ನಿಯಮಿತವಾಗಿ ಹಣ ಪಾವತಿ ಆಗುತ್ತಿತ್ತು, ವಿಳಂಬ ಎನ್ನುವ ಪ್ರಶ್ನೆಯೇ ಇರಲಿಲ್ಲ. ನನ್ನ ಆಡಳಿತದಲ್ಲಿ ಕಮಿಷನ್ ಸಂವಿಧಾನ ಮೆಟ್ಟಿಲು ಮುಟ್ಟಲು ಬಿಟ್ಟಿರಲಿಲ್ಲ. ಸೋ ಕಾಲ್ಡ್ ಸತ್ಯಸಂಸದರಾದ ಕಾಂಗ್ರೆಸ್ಸಿಗರು ಅರ್ಥ ಮಾಡಿಕೊಳ್ಳಬೇಕು ಎಂದು ಜೆಡಿಎಸ್ ಬಗ್ಗೆ ಹೇಳಿಕೆ ನೀಡಿದ್ದ ರಾಯರೆಡ್ಡಿ ಅವರಿಗೆ ಅವರು ತಿರುಗೇಟು ನೀಡಿದ್ದಾರೆ. ಭ್ರ ಷ್ಟಾಚಾರದ ವಿರುದ್ಧ ಸಿದ್ದರಾಮಯ್ಯ ಕಠಿಣ ಕ್ರಮ ಕೈಗೊಳ್ಳುತ್ತಿದ್ದಾರೆ ಎಂದು ರಾಯರೆಡ್ಡಿ ಹೇಳಿದ್ದಾರೆ. ಅವರು ಏಕಿಷ್ಟು ಹೆದರಿದರು ಎನ್ನುವುದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲ. ಅಧಿಕಾರ ಮತ್ತು ಆಸರೆ ನಾಲಿಗೆಯ ಶಕ್ತಿಯನ್ನು ಕುಂದಿಸುತ್ತವೆ ಎಂದು ರಾಯರೆಡ್ಡಿ ಅವರ ಅಸಹಾಯಕತೆ ಬಗ್ಗೆ ಕುಮಾರಸ್ವಾಮಿ ಲೇವಡಿ ಮಾಡಿದ್ದಾರೆ. ಸಿಎಂ ಸಾಹೇಬರ ಸರಣಿ ಹಗರಣಗಳ ಸಿದ್ವಿ ಲಾಸದ ಬಗ್ಗೆ ಅರಿಯದಷ್ಟು ಮುಗ್ಧರೇ ರಾಯರೆಡ್ಡಿ? ಕರ್ನಾಟಕವನ್ನು ಕೊಳ್ಳೆ ಹೊಡೆಯುತ್ತಿರುವ ಕಾಂಗ್ರೆಸ್ ಈಸ್ಟ್ ಇಂಡಿಯಾ ಕಂಪನಿ ಸರ್ಕಾರದ ಭಾಗವಾಗಿರುವ ಅವರಿಗೆ ಜೆಡಿಎಸ್ ಕುರಿತು ಟೀಕಿ ಸುವ ನೈತಿಕತೆ ಎಲ್ಲಿದೆ? ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

## ಕೇವಲ ಹಿಂದೂಗಳಿಗೆ ಮಾತ್ರವಲ್ಲ, ದಲಿತರಿಗೂ ವಿರೋಧಿಗಳು: ಜೋಶಿ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಕಾಂಗ್ರೆಸ್ಸಿನವರು ಕೇವಲ ಹಿಂದೂ ವಿರೋಧಿಯಲ್ಲ, ದಲಿತ ವಿರೋಧಿ ಕೂಡ ಎಂದು ಜನರಿಗೆ ಭೀಮ ಹೆಜ್ಜೆ ಕಾರ್ಯಕ್ರಮದ ಮೂಲಕ ತಿಳಿಸುತ್ತೇವೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಟೀಕಿಸಿದರು. ಭೀಮ ಹೆಜ್ಜೆ 100ರ ಸಂಭ್ರಮ ಕಾರ್ಯಕ್ರಮದ ಉದ್ಘಾಟನೆಯ ಸಂದರ್ಭದ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು. ಡಾ.ಬಿ.ಆರ್.ಅಂಬೇಡ್ಕರ್ ಅವರು ನಿಪ್ಪಾಣಿಗೆ ಬಂದು 100 ವರ್ಷಗಳಾದ ಹಿನ್ನೆ ಲೆಯಲ್ಲಿ, ಅಂಬೇಡ್ಕರರ ಜನ್ಮದಿನವೂ ಬರುತ್ತಿರುವ ಸಲುವಾಗಿ 100 ವರ್ಷದ ನೆನಪನ್ನು ಭೀಮ ಹೆಜ್ಜೆ ಹೆಸರಿನಲ್ಲಿ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು.

ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಯಾವ ಕಾರಣಕ್ಕಾಗಿ ತಮ್ಮ ಜೀವನವನ್ನು ಮೀಸಲಿಟ್ಟಿದ್ದರೋ ಅದನ್ನು ಜನರಿಗೆ ನೆನಪಿಸಲಾಗುವುದು. ಕಾಂಗ್ರೆಸ್ ಪಕ್ಷವು ಅವರಿಗೆ ಅನ್ಯಾಯ ಮಾಡಿದ್ದರು.

ಅವರು ಸಂವಿಧಾನ ರಚನಾ ಸಭೆಯಲ್ಲಿ ಇರಬಾರದೆಂಬ ಕಾರಣಕ್ಕೆ ಹಿಂದೂ ಬಾಹುಳ್ಯದ ಕ್ಷೇತ್ರಗಳನ್ನು ಪಾಕಿಸ್ತಾನಕ್ಕೆ ಬಿಟ್ಟುಕೊಟ್ಟ ಸಂಗತಿಯನ್ನು, ಎರಡೆರಡು ಬಾರಿ ಅವರನ್ನು ಸೋಲಿಸಿದ್ದು, ಮಧ್ಯಂತರ ಸರ್ಕಾರ ಬಾರದಂತೆ ತಡೆ ದುದ್ದನ್ನು ತಿಳಿಸುತ್ತೇವೆ ಎಂದು ಹೇಳಿದರು.

ದಲಿತರ ಮೀಸಲಾತಿಗೆ ಇಂದಿರಾ ಗಾಂಧಿ, ರಾಜೀವ್ ಗಾಂಧಿಯವರು ವಿರೋಧಿಸಿದ್ದನ್ನು ಜನರ ಮುಂದೆ ತೆರೆದಿಡುತ್ತೇವೆ. ಈಗಲೂ ಖರ್ಗೆಯವರಿಗೆ ಅವಮಾನ ಮಾಡಿದ್ದನ್ನೂ ತಿಳಿಸುತ್ತೇವೆ ಎಂದರು. ಬೆಳಗಾವಿ ಅಧಿವೇಶನದಲ್ಲಿ ನಮ್ಮ ಶಾಸಕಿ ಶಶಿಕಲಾ ಜೊಲ್ಲೆ ಅವರು ನಿಪ್ಪಾಣಿಗೆ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಬಂದು 100 ವರ್ಷವಾಗುತ್ತಿದೆ ಎಂದು ಸರ್ಕಾರದ ಗಮನ ಸೆಳೆದಿದ್ದಾರೆ.

ಬೆಳಗಾವಿಗೆ ಮಹಾತ್ಮ ಗಾಂಧಿಯವರು ಬಂದ ಕಾರ್ಯಕ್ರಮವನ್ನು ಅವರು ಮಾಡಿದ್ದಾರೆ. ಅದಕ್ಕೆ ನಮ್ಮ ಆಕ್ಷೇಪ ಇಲ್ಲ ಎಂದು ತಿಳಿಸಿದರು. ಅಂಬೇಡ್ಕರ್ ಅವರ ಭೇಟಿಯ 100 ವರ್ಷ ಯಾಕೆ ಮಾಡಿಲ್ಲ ಎಂದು ಪ್ರಶ್ನಿಸಿದರು. ಸರ್ಕಾರ ಈ ಕಾರ್ಯ ಕ್ರಮ ಮಾಡಿದ್ದರೆ ನಾವು ಮಾಡುತ್ತಿರಲಿಲ್ಲ. ಇದು ನಮ್ಮ ಬದ್ಧತೆ ಎಂದು ಹೇಳಿದರು.

## ಹಾಲಿನ ದರ ಹೆಚ್ಚಾದ ಬೆನ್ನಲ್ಲೇ ಹಾಲುಗಳ್ಳರ ಕಾಟ ಹೆಚ್ಚಳ

• ಉದಯವಾಹಿನಿ, ಬೆಂಗಳೂರು

ಕಳೆದ ಒಂದು ವರ್ಷದಲ್ಲಿ ನಂದಿನಿ ಹಾಲಿನ ದರ ಮೂರು ಬಾರಿ ಹೆಚ್ಚಾಗಿದ್ದು, ಇದರ ಬೆನ್ನಲ್ಲೇ ಹಾಲುಗಳ್ಳರ ಕಾಟ ಕೂಡ ಹೆಚ್ಚಾಗಿದೆ. ಪಾಕೆಟ್ ಗಟ್ಟಲೆ ನಂದಿನಿ ಹಾಲು ಕದಿಯುವುದನ್ನೇ ಬಿಸಿನೆಸ್ ಮಾಡಿಕೊಂಡಿರುವ ಕಳ್ಳರು ಬೆಳಗಿನ ಜಾವ ಸ್ಕೂಟರ್‌ನಲ್ಲಿ ಬಂದು ಹಾಲು ಕದ್ದು ಎಸ್ಕೇಪ್ ಆಗಿದ್ದಾರೆ.

ಕಾಮಾಕ್ಷಿಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯ ನಂದಿನಿ ಬೂತ್ ಒಂದರಲ್ಲಿ ಹಾಲಿನ ಪ್ಯಾಕೆಟ್‌ಗಳನ್ನು ಕಳ್ಳತನ ಮಾಡುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಹಾಲುಗಳ್ಳರ ಕಾಟಕ್ಕೆ ಅಂಗಡಿ ಮಾಲೀಕ ಗಿರಿಗೌಡ ಹೈರಾಣಾಗಿದ್ದಾರೆ.

ಬೆಳಗಿನ ಜಾವ ಹಾಲಿನ ಕ್ರೇಟ್ ಇಳಿಸಿದ ಬಳಿಕ ಎಂಟ್ರಿ ಕೊಡುವ ಕಳ್ಳರು ಬೆಳಗಿನ ಜಾವ 4 ಗಂಟೆಯಿಂದ 5 ಗಂಟೆ ಸಮಯದಲ್ಲಿ ಹಾಲು ಕದ್ದು ಎಸ್ಕೇಪ್ ಆಗುತ್ತಾರೆ. ಇದೇ ತಿಂಗಳ 4ರಂದು ಬೆಳಗಿನ ಜಾವ 4.11ಕ್ಕೆ 2 ಸ್ಕೂಟರ್‌ಗಳಲ್ಲಿ ಬಂದಿದ್ದ ಕಳ್ಳರು ನಾಲ್ಕೈದು ಲೀಟರ್ ಹಾಲು ಕದ್ದು ಪರಾರಿಯಾಗಿದ್ದರು.

ಉದಯವಾಹಿನಿ ಚಿತ್ರ



ಈ ಪ್ರದೇಶಗಳಲ್ಲಿ ಪೊಲೀಸರ ಬೀಟ್ ಹೆಚ್ಚಾದರೆ ಇಂಥ ಕಳ್ಳತನ ನಿಲ್ಲಬಹುದು ಎಂದು ಹಾಲುಗಳ್ಳರ ಕಾಟಕ್ಕೆ ಹೈರಾಣಾಗಿರುವ ಅಂಗಡಿ ಮಾಲೀಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

### ದಿನನಿತ್ಯ ಬಳಕೆಯ ಸರಕು, ಸೇವೆಗಳ ಸರಣಿ ಬೆಲೆ ಏರಿಕೆಯಿಂದ ಹೈರಾಣಾಗಿರುವ ನಾಗರಿಕರಿಗೆ ನೀರಿನ ದರ ಪರಿಷ್ಕರಣೆ ಬರೆ

## ನೀರಿನ ದರ ಏರಿಕೆಗೆ ಜನಸಾಮಾನ್ಯರು, ಕೈಗಾರಿಕೆಗಳಿಂದ ಆಕ್ರೋಶ

• ಉದಯವಾಹಿನಿ, ಬೆಂಗಳೂರು

ನೀರಿನ ದರ ಏರಿಕೆಯು ಜನಸಾಮಾನ್ಯರು, ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳಿಗೆ ಆಘಾತವನ್ನು ಉಂಟು ಮಾಡಿದ್ದು, ಬೆಂಗಳೂರು ಜಲಮಂಡಳಿಯ ಈ ನಿರ್ಧಾರಕ್ಕೆ ಸಾರ್ವಜನಿಕರು ಮತ್ತು ಕೈಗಾರಿಕೋದ್ಯಮಿಗಳಿಂದ ವಿರೋಧ ವ್ಯಕ್ತವಾಗಿದೆ. ಕೆಲವು ದಿನಗಳಿಂದ ದಿನನಿತ್ಯ ಬಳಕೆಯ ಸರಕು, ಸೇವೆಗಳ ಸರಣಿ ಬೆಲೆ ಏರಿಕೆಯಿಂದ ಹೈರಾಣಾಗಿರುವ ನಾಗರಿಕರಿಗೆ ನೀರಿನ ದರ ಪರಿಷ್ಕರಣೆ ಮಾಡುವ ಮೂಲಕ ಬೆಂಗಳೂರು ಜಲಮಂಡಳಿ ಮತ್ತೊಂದು ಬರೆ ಎಳೆದಿದೆ. ಬೆಲೆ ಏರಿಕೆಯಂತಹ ನಿರ್ಧಾರಗಳನ್ನು ಕೈಗೊಳ್ಳುವಾಗ ರಾಜ್ಯ ಸರಕಾರ ಜನಸಾಮಾನ್ಯರ ಜಾಗದಲ್ಲಿ ನಿಂತು ಒಮ್ಮೆ ಯೋಚಿಸಿ, ತೀರ್ಮಾನ ಕೈಗೊಳ್ಳುವ ಸೂಕ್ಷ್ಮತೆ ಬೆಳೆಸಿಕೊಳ್ಳಬೇಕು ಎಂದು ಜನಸಾಮಾನ್ಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಗೃಹ ಬಳಕೆದಾರರಿಗೆ 8 ಸಾವಿರ ಲೀ.ವರೆಗೆ ಪ್ರತಿ ಲೀ.ನೀರಿಗೆ 0.15 ಪೈಸೆ ಏರಿಕೆಯಾಗಿದೆ. ಈ ಸ್ಲಾಬ್ ಬಳಕೆದಾರರಿಗೆ ತಿಂಗಳಿಗೆ ನೀರಿನ ಶುಲ್ಕ 100 ರೂ. ಬರುತ್ತಿದ್ದರೆ, ದರ ಏರಿಕೆಯಿಂದ 32 ರೂ. ಹೆಚ್ಚಾಗುವ ಮೂಲಕ 132 ರೂ. ಬರಬಹುದು. 8001-25000 ಲೀ.ವರೆಗೆ 0.30 ಪೈಸೆ ಏರಿಕೆಯಾಗಿದ್ದು, ಈ ಸ್ಲಾಬ್ ಬಳಕೆದಾರರಿಗೆ 350 ರೂ. ಮಾಸಿಕ ಶುಲ್ಕ ಬರುತ್ತಿದ್ದರೆ, ದರ ಏರಿಕೆಯಿಂದ 509 ರೂ. ಮತ್ತು 5 ಮನೆಗಳಿರುವ ವಸತಿ ಸಮುಚ್ಚಯಗಳು 50,000 ಲೀ. ಬಳಕೆದಾರರಾಗಿದ್ದರೆ, 1,191 ರೂ. ಬಿಲ್ ಬರುತ್ತಿದ್ದರೆ, ಇನ್ನು 1,809 ರೂ. ಹಾಗೂ 10,000 ಲೀ. ಬಳಕೆ ಮಾಡುತ್ತಿದ್ದ ಗೃಹೇತರ ಬಳಕೆದಾರರಿಗೆ ಇದುವರೆಗೂ 675 ರೂ. ಬರುತ್ತಿದ್ದರೆ ದರ ಏರಿಕೆಯಿಂದ 950 ರೂ. ಬರುವ ಸಾಧ್ಯತೆ ಇದೆ ಎನ್ನುತ್ತವೆ ಮಂಡಳಿಯ ಮೂಲಗಳು. ಅತ್ಯವಶ್ಯಕವಾಗಿರುವ ಕುಡಿಯುವ ನೀರಿನ ಬೆಲೆಯನ್ನೂ ಈಗ ಹೆಚ್ಚಿಸಿರುವ ಸರಕಾರದ ನಡೆಯನ್ನು ಎಐಡಿಎಸ್‌ಒ ಖಂಡಿಸಿದೆ. ಬೆಲೆ ಏರಿಕೆಯನ್ನು ಪ್ರಶ್ನೆ ಮಾಡಿದರೆ, ಗ್ಯಾರಂಟಿ ಬಗ್ಗೆ ಹೇಳುತ್ತಾರೆ.

ಜನಕಲ್ಯಾಣದ ಯೋಜನೆಗಳನ್ನು ರೂಪಿಸುವ ಬದಲು, ಸರಕಾರ ಗಾಯದ ಮೇಲೆ ಬರೆ ಎಳೆಯುವಂತೆ ಸರಣಿ ಬೆಲೆ ಏರಿಕೆಗೆ ಮುಂದಾಗಿದೆ ಎಂದು ಎಐಡಿಎಸ್‌ಒನ ಅಪೂರ್ವ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಉಚಿತ ಯೋಜನೆಗಳ ಗ್ಯಾರಂಟಿ ನೀಡಿದ್ದೇವಲ್ಲ.

ಇನ್ನು ಹೇಗೆ ಬೇಕಾದರೂ, ಯಾವುದರ ಬೆಲೆ ಏರಿಕೆ ಮಾಡಿದರೂ, ಜನರು ಸುಮ್ಮನಿರುತ್ತಾರೆ ಎಂಬ ಮನಸ್ಥಿತಿ ಸರಕಾರದ್ದಾಗಿದೆ. ಕಡಿಮೆ ಸಂಬಳ ಪಡೆದು ಲೆಕ್ಕಾಚಾರದಲ್ಲಿ ಜೀವನ ಮಾಡುವ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ನೀರಿನ ದರ ಏರಿಕೆ ಮಾಡುವ ಮೂಲಕ ಸರಕಾರ ಮತ್ತೊಂದು ಬರೆ ಎಳೆದಿದೆ ಎಂದು ರಾಜಾಜಿನಗರ ನಿವಾಸಿ ಯಶೋಧಾ ಕಿಡಿಕಾರಿದ್ದಾರೆ. ನೀರಿನ ದರದಿಂದ ಜನ ಸಾಮಾನ್ಯರ ಜೀವನ ನಿರ್ವಹಣೆಗೆ ಹೊರೆಯಾಗಿದೆ. ಜನಪ್ರತಿನಿಧಿಗಳು ತಮ್ಮ ವೇತನ, ಭತ್ಯೆಗಳನ್ನು ಹೆಚ್ಚಳ ಮಾಡಿಕೊಂಡಾಗ ಸರಕಾರಕ್ಕೆ ನಷ್ಟವಾಗುವುದಿಲ್ಲ. ಆದರೆ, ಸಾರ್ವಜನಿಕರು ನಿತ್ಯ ಬಳಕೆ ಮಾಡುವ ವಸ್ತುಗಳ ಬೆಲೆ ಏರಿಕೆ ಮಾಡಲಿಲ್ಲ ಎಂದರೆ ಸರಕಾರಕ್ಕೆ ನಷ್ಟವಾಗುತ್ತದೆ. ಸರಕಾರ ಇಂತಹ ಜನವಿರೋಧಿ ಧೋರಣೆಗಳನ್ನು ಮೊದಲು ಬಿಡಬೇಕು ಎಂದು ಮಹಾಲಕ್ಷ್ಮೀ ಲೇಔಟ್ ನಿವಾಸಿ ಅಕ್ಷತಾ ಆಕ್ರೋಶ ವ್ಯಕ್ತಪಡಿಸಿದ್ದಾರೆ. ನೀರಿನ ದರ ಪರಿಷ್ಕರಣೆಯಿಂದ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳ ಚಟುವಟಿಕೆಗೆ ಹೊಡೆತ ಬಿದ್ದಿದೆ. ದರ ಹೆಚ್ಚಳಕ್ಕೂ ಮುಂಚೆ ಜಲಮಂಡಳಿಯ ಸೇವೆಯಲ್ಲಿ ಸುಧಾರಣೆ ಆಗಬೇಕು. ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಸರಿಯಾಗಿ ಸಮರ್ಪಕ ನೀರು ಪೂರೈಸುವುದಿಲ್ಲ. ಅಲ್ಲದೆ, ಅನ್ಯ ಬಳಕೆಗೆ ಸಂಸ್ಕರಿಸಿದ ನೀರು ನೀಡುತ್ತೇವೆ ಎನ್ನುವ ಜಲಮಂಡಳಿ ಮಾತು ಹೇಳಿಕೆಗಷ್ಟೇ ಸೀಮಿತವಾಗಿದೆ ಎಂದು ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಶಿವ ಕುಮಾರ್ ದೂರಿದ್ದಾರೆ.

ಜನಸಾಮಾನ್ಯರಿಗೆ ಮಾತ್ರವಲ್ಲದೆ, ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಅಗತ್ಯವಿರುವ ಎಲ್ಲ ಸರಕು, ಸೇವೆಗಳ ಬೆಲೆ ಏರಿಕೆ ಮಾಡುತ್ತಿರುವುದು ಖಂಡನೀಯ. ಡೀಸೆಲ್, ವಿದ್ಯುತ್, ಸ್ಟಾಂಪ್ ಶುಲ್ಕ, ಈಗ ಅಂತಿಮವಾಗಿ ನೀರಿನ ದರವನ್ನೂ ಏರಿಕೆ ಮಾಡಿದೆ. ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳನ್ನು ಉತ್ತೇಜಿಸಬೇಕಾದವರೇ ಹೊರೆ ಹಾಕುತ್ತಿದ್ದಾರೆ ಎಂದು ಕಾಸಿಯಾ ಅಧ್ಯಕ್ಷ ಎಂ.ಜಿ. ರಾಜಗೋಪಾಲ್ ಬೇಸರ ವ್ಯಕ್ತಪಡಿಸಿದ್ದಾರೆ.


ಉದಯವಾಹಿನಿ ಚಿತ್ರ




### ಬೇಸರ ಜತೆಗೆ ಗೊಂದಲ

**ಮೇ ತಿಂಗಳ ಬಿಲ್‌ನಲ್ಲಿಯೇ ದರ ಏರಿಕೆ ಅನ್ವಯವಾಗಲಿದ್ದು, ಈ ಹಿಂದೆ ಪಾವತಿಸುತ್ತಿದ್ದ ಶುಲ್ಕವು ಏರಿಕೆಯಾದ ಬಳಿಕ ಎಷ್ಟು ಬರಬಹುದು ಎಂಬ ಗೊಂದಲ ಜನಸಾಮಾನ್ಯರಲ್ಲಿ ಉಂಟಾಗಿದ್ದು, ಈ ಗೊಂದಲವನ್ನು ಪರಿಹರಿಸುವ ನಿಟ್ಟಿನಲ್ಲಿ ಜಲಮಂಡಳಿ ಸಮಗ್ರ ಮಾಹಿತಿಯನ್ನೂ ನೀಡಬೇಕು ಎಂದು ಒತ್ತಾಯಿಸಿದ್ದಾರೆ.**

**ಜನಸಾಮಾನ್ಯರ ಜಾಗದಲ್ಲಿ ನಿಂತು ಒಮ್ಮೆ ಯೋಚಿಸಬೇಕು**



ಸರಕಾರಕ್ಕೆ ಹಿಡಿಶಾಪ

### ಜಲಮಂಡಳಿ ಸಮರ್ಥನೆ, ಬಳಕೆದಾರರಿಂದ ಖಂಡನೆ

**ಮಂಡಳಿಗಾಗುತ್ತಿರುವ ನಷ್ಟ ತಪ್ಪಿಸಿ, ನಿರ್ವಹಣೆ ಮಾಡಲು, ಜನರಿಗೆ ನೀರಿನ ಮೌಲ್ಯವನ್ನು ತಿಳಿಸುವ ಮೂಲಕ ಮಿತ ಬಳಕೆ, ಜಲಸಂರಕ್ಷಣೆ ಉತ್ತೇಜಿಸುವ ದೃಷ್ಟಿಯಿಂದ ನೀರಿನ ದರ ಪರಿಷ್ಕರಣೆ ಅಗತ್ಯವೆಂದು ಸಮರ್ಥಿಸಿಕೊಂಡರೆ, ಇದು ಜನಸಾಮಾನ್ಯರ ಆದಾಯ, ಜೀವನ ನಿರ್ವಹಣೆ ಮತ್ತು ಪರಿಸ್ಥಿತಿಯನ್ನು ಅರ್ಥೈಸಿಕೊಳ್ಳದೇ ಮಾಡಿರುವ ನಿರ್ಧಾರ ಎಂದು ಜನಸಾಮಾನ್ಯರು, ಕೈಗಾರಿಕೋದ್ಯಮಿಗಳು, ವಿವಿಧ ಸಂಘಟನೆಗಳು ವಿರೋಧಿಸಿವೆ.**

## ಶ್ರೀ ಚನ್ನಬಸವ ಸ್ವಾಮಿಗಳಿಗೆ ರಾಣಿಚನ್ನಮ್ಮ ವಿವಿ ಪಿಎಚ್‌ಡಿ ಪ್ರದಾನ

• ಉದಯವಾಹಿನಿ, ಕನಕಪುರ


ಉದಯವಾಹಿನಿ ಚಿತ್ರ

ಬೆಳಗಾವಿಯ ರಾಣಿಚನ್ನಮ್ಮ ವಿಶ್ವವಿದ್ಯಾಲಯದ 13ನೇ ಘಟಿಕೋತ್ಸವದಲ್ಲಿ ಕನಕಪುರ ದೇಗುಲ ಮಠದ ಶ್ರೀ ಚನ್ನಬಸವ ಸ್ವಾಮಿಗಳಿಗೆ ಪಿಎಚ್‌ಡಿ ಪದವಿಯನ್ನು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಪ್ರದಾನ ಮಾಡಿದರು.

ಪೂಜ್ಯರು ಬಾಲ್ಯದಿಂದಲೂ ವಿದ್ಯಾಭ್ಯಾಸದಲ್ಲಿ ಉನ್ನತ ಶ್ರೇಣಿಯನ್ನು ಗಳಿಸಿಕೊಂಡವರಾಗಿದ್ದು, ಸ್ನಾತಕೋತ್ತರ ಪದವಿಯಲ್ಲಿ ಆರು ಚಿನ್ನದ ಪದಕ ಮತ್ತು ಎರಡು ಪಾರಿತೋಷಕದೊಂದಿಗೆ ವಿಶ್ವವಿದ್ಯಾಲಯಕ್ಕೆ ಮೊದಲಿಗರಾಗಿದ್ದರು.

ಶ್ರೀಗಳು ಬೆಳಗಾವಿಯ ರಾಣಿಚನ್ನಮ್ಮ ವಿಶ್ವವಿದ್ಯಾಲಯದ ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕ ಪ್ರೊ. ಎಸ್.ಎಂ.ಗಂಗಾಧರಯ್ಯ ಅವರ ಮಾರ್ಗದರ್ಶನದಲ್ಲಿ ಸಲ್ಲಿಸಿದ್ದ 'ಏಕೋತ್ತರ ಶತಸ್ಥಲಗಳ ಪರಾಮರ್ಶೆ' ಎಂಬ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿಗೆ ಭಾಜನರಾಗಿದ್ದಾರೆ.

ವಚನ ಸಾಹಿತ್ಯದ ನೂತನ ಸಂಶೋಧನೆ ವಚನ ತತ್ತ್ವ ಶಾಸ್ತ್ರದ ಪ್ರಧಾನ ಭೂಮಿಕೆಯಂತಿರುವ ಏಕೋತ್ತರ ಶತಸ್ಥಲಗಳ ಕುರಿತು ಆಮೂಲಾಗ್ರವಾಗಿ ಪರಾಮರ್ಶಿಸಿ, ಬಹುಮುಖಿ ನೆಲೆಯಲ್ಲಿ ಶ್ರೀಗಳು ಸಂಶೋಧನೆಯನ್ನು ಪೂರೈಸಿದ್ದಾರೆ. ಈ ಮಹಾಪ್ರಬಂಧವು ಸಂಶೋಧನಾಕ್ಷೇತ್ರಕ್ಕೆ ಒಂದು ಮೌಲಿಕ ಕೊಡುಗೆಯಾಗಿದೆ.

ವೈಜ್ಞಾನಿಕ, ವಿದ್ವತ್ ಪೂರ್ಣವಾದ ಒಳನೋಟಗಳಿರುವ ತಮ್ಮ ಅಧ್ಯಯನದಲ್ಲಿ ಶ್ರೀಗಳ ಹೊಸ ಬಗೆಯ ಸಂಶೋಧನಾ ಮಾದರಿ ಹೊರಹೊಮ್ಮಿದೆ. ಭಾರತೀಯ ಮತ್ತು ಪಾಶ್ಚಾತ್ಯ ತತ್ತ್ವಶಾಸ್ತ್ರದ ಹಿನ್ನೆಲೆಯಲ್ಲಿ ವಚನಕಾರರ ತತ್ವಜ್ಞಾನವನ್ನು ಪರಾಮರ್ಶಿಸುವಲ್ಲಿ ಪ್ರಬಂಧವು ಮಹತ್ವ ಪಡೆದುಕೊಂಡಿದೆ.

ಬಸವಾದಿ ಶರಣರ ಚಿಂತನೆಗಳಿಗೆ ಶಾಸ್ತ್ರೀಯವಾದ ವ್ಯಾಖ್ಯಾನಗಳನ್ನು ನೀಡುವಲ್ಲಿ ಬಹುತೇಕ ಇದು ಮೊದಲನೇ ಪ್ರಯತ್ನ ಎಂದು ಮಾರ್ಗದರ್ಶಕರಾದ ಪ್ರೊ. ಎಸ್. ಎಂ. ಗಂಗಾಧರಯ್ಯ ಶ್ರೀಗಳನ್ನು ಅಭಿನಂದಿಸಿದ್ದಾರೆ. ಶ್ರೀಗಳ ಶೈಕ್ಷಣಿಕ ಸಾಧನೆಗೆ ದೇಗುಲಮಠದ ಹಿರಿಯ ಶ್ರೀ ಡಾ. ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರು ಹರ್ಷ ವ್ಯಕ್ತಪಡಿಸಿದ್ದಾರೆ.

ಸಮಾರಂಭದಲ್ಲಿ ಉನ್ನತ ಶಿಕ್ಷಣ ಸಚಿವ ಡಾ. ಎಂ. ಸಿ. ಸುಧಾಕರ್, ಕುಲಪತಿ ಪ್ರೊ.ಸಿ.ಎಂ.ತ್ಯಾಗರಾಜ, ಕುಲಸಚಿವ ಸಂತೋಷ ಕಾಮಗೌಡ ಮತ್ತಿತರರಿದ್ದರು.

## ಅಂಬೇಡ್ಕರ್ ಉದ್ಯಾನ ಅಭಿವೃದ್ಧಿಗೆ ಮನವಿ

• ಉದಯವಾಹಿನಿ, ಕೆಜಿಎಫ್


ಉದಯವಾಹಿನಿ ಚಿತ್ರ

ಅಂಬೇಡ್ಕರ್ ಹೆಜ್ಜೆ ಇಟ್ಟ ಸ್ಥಳದ ಗುರುತಾಗಿ ನಿರ್ಮಿಸಲಾಗಿರುವ ಅವರ ಪುತ್ಥಳಿಗೆ ಗೌರವ ಕೊಡುವ ಕೆಲಸವನ್ನು ನಗರಸಭೆ ಮಾಡಿಲ್ಲ ಎಂದು ಸೇವ್ ಕೆಜಿಎಫ್ ಸಮಿತಿ ಸದಸ್ಯರು ಆರೋಪಿಸಿದ್ದಾರೆ. ನಗರ ಸಭೆಯ ಮುಂದೆ ಶುಕ್ರವಾರ ಸಾಂಕೇತಿಕ ಪ್ರತಿಭಟನೆ ಮಾಡಿ, ನಂತರ ಮಾತನಾಡಿದ ಸಮಿತಿ ಅಧ್ಯಕ್ಷ ಜ್ಯೋತಿಬಸು, 1964ರಲ್ಲಿ ನಗರಸಭೆ ಅಸ್ತಿತ್ವಕ್ಕೆ ಬಂದಾಗ, ಅಂಬೇಡ್ಕರ್ ಪ್ರತಿಮೆಯನ್ನು ನಗರಸಭೆಯಲ್ಲಿ ಸ್ಥಾಪಿಸಲಾಯಿತು. ಸಿಮೆಂಟಿನಿಂದ ಮಾಡಿದ್ದ ಅಂಬೇಡ್ಕರ್ ಪ್ರತಿಮೆ ಬಿರುಕು ಬಿಟ್ಟಿದೆ. ಜಿಲ್ಲೆಯಲ್ಲಿಯೇ ಪ್ರಥಮ ಅಂಬೇಡ್ಕರ್ ಪ್ರತಿಮೆಯನ್ನು ನ್ಯಾಯಾಲಯದ ಪಕ್ಕದಲ್ಲಿರುವ ಉದ್ಯಾನದಲ್ಲಿ ಸ್ಥಾಪಿಸಲಾಗಿದೆ. ನಗರದಲ್ಲಿ ನಡೆಯುವ ಎಲ್ಲಾ ಅಧಿಕೃತ ಕಾರ್ಯಕ್ರಮಗಳಲ್ಲಿಯೂ ಅಲ್ಲಿಯೇ ಬಾಬಾ ಸಾಹೇಬರಿಗೆ ಹೂಮಾಲೆ ಅರ್ಪಿಸಿ ಕಾರ್ಯಕ್ರಮ ಶುರು ಮಾಡುವ ಪರಿಪಾಠ ಇದೆ.

ಅಲ್ಲಿರುವ ಉದ್ಯಾನಕ್ಕೆ ಕೋಟಿಗಟ್ಟಲೆ ಹಣ ವ್ಯಯ ಮಾಡಲಾಗಿದೆ. ಆದರೆ ಅಭಿವೃದ್ಧಿಯೇ ಆಗಿಲ್ಲ. ಉದ್ಯಾನ ಸ್ಮಶಾನದ ರೀತಿಯಲ್ಲಿದೆ. ಇದು ಅಂಬೇಡ್ಕರ್ ಅವರಿಗೆ ಮಾಡಿದ ಅವಮಾನ ಎಂದು ಆರೋಪಿಸಿದರು.

ಅಂಬೇಡ್ಕರ್ ಕೆಜಿಎಫ್‌ಗೆ ಭೇಟಿ ನೀಡಿದ ಕ್ಷಣ ಐತಿಹಾಸಿಕವಾದುದು. ಅವರ ನೆನಪಿನಲ್ಲಿ ಸ್ಥಾಪಿಸಿದ ಉದ್ಯಾನ ಇದೀಗ ತ್ಯಾಜ್ಯ ಸಂಗ್ರಹ ಮಾಡುವ ಸ್ಥಳವಾಗಿ ಮಾರ್ಪಟ್ಟಿದೆ. ನ್ಯಾಯಾಲಯದಲ್ಲಿ ಪ್ರಕರಣ ಇದೆ ಎಂಬ ನೆಪ ಹೇಳಿ, ಉದ್ಯಾನ ಅಭಿವೃದ್ಧಿ ಮಾಡುತ್ತಿಲ್ಲ. ಉದ್ಯಾನವನ್ನು ಅಭಿವೃದ್ಧಿ ಮಾಡಲು ಯಾವುದೇ ಕೋರ್ಟಿನಿಂದ ತಡೆಯಾಜ್ಞೆ ಇಲ್ಲ. ಕೂಡಲೇ ಉದ್ಯಾನವನ್ನು ಪುನರುಜ್ಜೀವನಗೊಳಿಸಬೇಕು.

ನಗರಸಭೆ ಮುಂಭಾಗದಲ್ಲಿರುವ ಅಂಬೇಡ್ಕರ್ ಪ್ರತಿಮೆಯನ್ನು ಕೂಡ ಬದಲಾಯಿಸಬೇಕು. ಇಲ್ಲವಾದಲ್ಲಿ ನಗರಸಭೆ ವಿರುದ್ಧ ದೊಡ್ಡ ಹೋರಾಟ ನಡೆಸಲಾಗುವುದು ಎಂದು ಜ್ಯೋತಿಬಸು ಎಚ್ಚರಿಕೆ ನೀಡಿದರು.

ಅಂಬೇಡ್ಕರ್ ಬಗ್ಗೆ ಮಾತನಾಡುವ ನಮ್ಮ ನಾಯಕರು, ಅಧಿಕಾರಿಗಳು ಅಂಬೇಡ್ಕರ್ ಅವರಿಗೆ ಅವಮಾನ ಆಗುತ್ತಿರುವುದನ್ನು ನೋಡಿಯೂ ಸುಮ್ಮನಿದ್ದಾರೆ. ಎಲ್ಲಾ ಜಾತಿ ಯವರಿಗೂ ದೇವರಾಗಿರುವ ಅಂಬೇಡ್ಕರ್ ರವರಿಗೆ ಗೌರವ ಸಲ್ಲಬೇಕು ಎಂದು ಮುಖಂಡ ಮೋಹನಕೃಷ್ಣ ತಿಳಿಸಿದರು.

ಅಂಬೇಡ್ಕರ್ ಪುತ್ಥಳಿಯನ್ನು ಬದಲಾಯಿಸಬೇಕು, ಅಂಬೇಡ್ಕರ್ ಉದ್ಯಾನವನ್ನು ಅಭಿವೃದ್ಧಿಪಡಿಸಬೇಕು ಎಂದು ಬಾಯಿಸಿ ನಗರಸಭೆ ವ್ಯವಸ್ಥಾಪಕರಿಗೆ ಮನವಿ ನೀಡಲಾಯಿತು.

## ಮಿನಿ ನ್ಯೂಸ್

### ಕೆರೆ ಪುನಃಶ್ಚೇತನಕ್ಕೆ ಚಾಲನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಗೌರಿಬಿದನೂರು

ಗೌರಿಬಿದನೂರು ಸೇವಾ ಪ್ರತಿಷ್ಠಾನದಿಂದ ಶುಕ್ರವಾರ ಗೊಟಕನಾಪುರ ಕೆರೆಯ ಪುನಃಶ್ಚೇತನ ಕಾರ್ಯಕ್ಕೆ ಚಾಲನೆ ನೀಡಲಾಯಿತು. ಪ್ರತಿಷ್ಠಾನದ ಅಧ್ಯಕ್ಷ ವೇಣುಗೋಪಾಲ್ ಮಾತನಾಡಿ, ತಾಲ್ಲೂಕಿನ ಗತವೈಭವವನ್ನು ಮರುಕಳಿಸುವಂತೆ ಮಾಡಲು ಸೇವಾ ಪ್ರತಿಷ್ಠಾನವು ತಾಲ್ಲೂಕಿನ ಕೆರೆಗಳ ಅಭಿವೃದ್ಧಿಗೆ ಸಂಕಲ್ಪ ತೊಟ್ಟಿದೆ. 11 ಕೆರೆಗಳನ್ನು ಈಗಾಗಲೇ ಪುನಃಶ್ಚೇತನ ಗೊಳಿಸಲಾಗಿದೆ ಎಂದರು.

ತಾಲ್ಲೂಕಿನಲ್ಲಿ ವರ್ಷ ಶೇ 60ರಷ್ಟು ಮಳೆ ಬೀಳುತ್ತದೆ. ಉತ್ತರ ಪಿನಾಕಿನಿ ಮತ್ತು ಕುಮುದ್ವತಿ ನದಿ ಸೇರಿದಂತೆ ಹಲವು ತೊರೆ, ಕೆರೆಗಳು, ಜಲ ಮೂಲಗಳನ್ನು ಹೊಂದಿದ್ದರೂ ಅವುಗಳ ಸಮರ್ಪಕ ನಿರ್ವಹಣೆ ಇಲ್ಲದೇ ಬರಗಾಲ ಎದುರಾಗಿದೆ. ತಾಲ್ಲೂಕನ್ನು ಮಲೆನಾಡನ್ನಾಗಿ ಪರಿವರ್ತಿಸಲು ಜನರಲ್ಲಿ ನಮ್ಮ ಗ್ರಾಮ ನಮ್ಮ ಹೆಮ್ಮೆ ಎಂಬ ಭಾವನೆ ಮೂಡಿಸಿ, ನಗರಕ್ಕೆ ಗುಳೆ ಹೋಗುವುದನ್ನು ತಪ್ಪಿಸ ಬೇಕಾಗಿದೆ ಎಂದರು. ಸಂಜೀವ ರೆಡ್ಡಿ ಮಾತನಾಡಿ, ಗೊಟಕನಾಪುರ ಕೆರೆಯ ಪುನಃಶ್ವೇತನ ಕಾರ್ಯವು ಎರಡು ತಿಂಗಳು ನಡೆಯಲಿದೆ. ಈ ಕೆರೆಯಲ್ಲಿ ಲಭ್ಯವಿರುವ ಫಲವತ್ತಾದ ಮಣ್ಣನ್ನು ರೈತರು ತಮ್ಮ ಜಮೀನುಗಳಿಗೆ ಬಳಸಿಕೊಳ್ಳಬಹುದು ಎಂದರು.

### ಅಕ್ರಮವಾಗಿ ಸಾಗಿಸುತ್ತಿದ್ದ 20 ಹಸುಗಳ ರಕ್ಷಣೆ

• ಉದಯವಾಹಿನಿ, ಗುಡಿಬಂಡೆ

ಚಿಕ್ಕಬಳ್ಳಾಪುರದ ಕಡೆಗೆ ಎರಡು ಗೂಡ್ಸ್ ವಾಹನಗಳಲ್ಲಿ ಸಾಗಿಸುತ್ತಿದ್ದ 20 ಹಸುಗಳನ್ನು ವಿಶ್ವ ಹಿಂದೂ ಪರಿಷತ್, ಬಜರಂಗದಳದ ಕಾರ್ಯಕರ್ತರು ರಕ್ಷಿಸಿದ್ದಾರೆ. ಆಂಧ್ರಪ್ರದೇಶದ ಗೋರೆಂಟ್ಲ ಸೇರಿದಂತೆ ವಿವಿಧ ಕಡೆ ಹಸುಗಳನ್ನು ಖರೀದಿಸಲಾಗಿದೆ. ಕರ್ನಾಟಕಕ್ಕೆ ತಂದು ಗೋಮಾಂಸಕ್ಕೆ ಮಾರಾಟ ಮಾಡಲು ಮುಂದಾಗಿದ್ದರು. ಈ ಬಗ್ಗೆ ವಿಶ್ವ ಹಿಂದೂ ಪರಿಷತ್, ಬಜರಂಗದಳದ ಕಾರ್ಯಕರ್ತರಿಗೆ ಮಾಹಿತಿ ದೊರೆತಿತ್ತು. ಪೆರೇಸಂದ್ರ ಬಳಿ ಕಾರ್ಯಕರ್ತರು ಗೋವುಗಳನ್ನು ರಕ್ಷಿಸಿ ಪೊಲೀಸರಿಗೆ ಒಪ್ಪಿಸಿದರು.

ಪೆರೇಸಂದ್ರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಿಶ್ವಹಿಂದೂ ಪರಿಷತ್ ಮುಖಂಡ ವರ್ಲಕೊಂಡ ಸಂತೋಷ್, ತಾಲ್ಲೂಕು ಸಂಚಾಲಕ ಗಗನ್, ನಗರ ಕಾರ್ಯದರ್ಶಿ ರಾಹುಲ್, ಮುಖಂಡರಾದ ಪೇರೆಸಂದ್ರ ವಿನಯ್, ಕಾರ್ತಿಕ್ ಕಾರ್ಯಕರ್ತರು ಪಾಲ್ಗೊಂಡಿದ್ದರು.


### ಶಾಸಕ ಸುಬ್ಬಾರೆಡ್ಡಿ ವಿರುದ್ಧ ನಿಂದನೆ ಯುವ ಬ್ರಿಗ್ರೇಡ್ ಮುಖಂಡನ ಬಂಧನ

• ಉದಯವಾಹಿನಿ, ಬಾಗೇಪಲ್ಲಿ

ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಅವರನ್ನು ನಿಂದಿಸಿದ ಆರೋಪದ ಮೇಲೆ ಜೆಡಿಎಸ್ ಯುವ ಬ್ರಿಗ್ರೇಡ್ ರಾಜ್ಯ ಸಂಘಟನಾ ಕಾರ್ಯದರ್ಶಿ ಮುದ್ದಲಪಲ್ಲಿ ಎಂ.ಎನ್.ರಾಜಾರೆಡ್ಡಿಯನ್ನು ಬಾಗೇಪಲ್ಲಿ ಪೊಲೀಸರು ಬಂಧಿಸಿದ್ದಾರೆ. ಸುಬ್ಬಾರೆಡ್ಡಿ ವಿರುದ್ಧ ಮುದ್ದಲಪಲ್ಲಿಎಂ.ಎನ್.ರಾಜಾರೆಡ್ಡಿ, ಕಡೇಹಳ್ಳಿ ಆನಂದ್, ನಾರೇಪಲ್ಲಿ ಶ್ರೀನಿವಾಸ್ ಅವಾಚ್ಯ ಶಬ್ದಗಳನ್ನು ಬಳಸಿರುವ ವಿಡಿಯೋಗಳು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು.

ಈ ಸಂಬಂಧ ಶಾಸಕರ ಆಪ್ತಸಹಾಯ ಬಾಗೇಪಲ್ಲಿ ಠಾಣೆಗೆ ದೂರು ನೀಡಿದ್ದರು. ಪ್ರಕರಣ ಸಂಬಂಧ ಬಾಗೇಪಲ್ಲಿ ಸಿವಿಲ್ ನ್ಯಾಯಾಲಯದಿಂದ ಮೂರು ಬಾರಿ ಜಾಮೀನು ರಹಿತ ವಾರೆಂಟ್ ಜಾರಿ ಆಗಿತ್ತು. ಆದರೂ ಅವರು ನ್ಯಾಯಾಲಯಕ್ಕೆ ಹಾಜರಾಗಿರಲಿಲ್ಲ. ಆದ್ದರಿಂದ ಪೊಲೀಸರು ರಾಜಾರೆಡ್ಡಿಯನ್ನು ಬಂಧಿಸಿದ್ದಾರೆ.

### ಸಾಗುವಳಿ ಜಮೀನು ಮಾರಾಟ ಯತ್ನ ಆರೋಪ: ದೂರು


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೊಡಿಗೇನಹಳ್ಳಿ

ಹೋಬಳಿಯ ದೊಡ್ಡಮಾಲ್ಲೂರು ಗ್ರಾಮದಲ್ಲಿ 30 ವರ್ಷದಿಂದ ಸಾಗುವಳಿ ಮಾಡುತ್ತಿದ್ದ ರೈತರಿಗೆ ಕಂದಾಯ ಇಲಾಖೆ ಅಧಿಕಾರಿಗಳು, ಗ್ರಾಮದ ಕೆಲವರಿಂದ ವಂಚನೆಯಾಗಿದೆ ಎಂದು ಆರೋಪಿಸಿ ದೊಡ್ಡ ಮಾಲೂರಿನ ಕೆಲವು ರೈತರು ಶುಕ್ರವಾರ ಜಿಲ್ಲಾಧಿಕಾರಿ ಕಾರ್ಯಾಲಯಕ್ಕೆ ದೂರು ಸಲ್ಲಿಸಿದರು. ರೈತ ಪಟೇಲ್ ಸಂಜೀವ್ ಗೌಡ ಮಾತನಾಡಿ, ದೊಡ್ಡಮಾಲ್ಲೂರು ಗ್ರಾಮದ ಹೊರವಲಯದಲ್ಲಿರುವ ಸರ್ಕಾರಿ ಗೋಮಾಳದಲ್ಲಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದ ಹಲವು ರೈತರ ಜಮೀನಿಗೆ ಕೆಲವರು ನಕಲಿ ದಾಖಲೆ ಸೃಷ್ಟಿಸಿಕೊಂಡು 16 ಎಕರೆ ಜಮೀನು ಮಾರಾಟಕ್ಕೆ ಯತ್ನಿಸಿದ್ದಾರೆ ಎಂದು ಆರೋಪಿಸಿದ್ದಾರೆ.

ರೈತ ನಟರಾಜು ಮಾತನಾಡಿ, ಈ ಭಾಗದ 500 ಎಕರೆ ಜಾಗದ ದಾಖಲೆ ಇಲ್ಲವೆಂದು ಕಂದಾಯ ಇಲಾಖೆ ಅಧಿಕಾರಿಗಳು ಕೆಲ ಸರ್ವೆ ನಂಬರ್‌ಗಳಿಗೆ ನಕಲಿ ದಾಖಲೆಗಳು ಸೃಷ್ಟಿಸಿ ಖಾತೆ ಪಹಣಿ ಮಾಡಿದ್ದಾರೆ. ಅಂತಹವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

### ರಸ್ತೆ ಬದಿ ಆಲದ ಮರಕ್ಕೆ ಬೆಂಕಿ ಹಚ್ಚಿದ ಕಿಡಿಗೇಡಿಗಳು

• ಉದಯವಾಹಿನಿ, ತಿಪಟೂರು

ತಾಲ್ಲೂಕಿನ ಹೊನ್ನವಳ್ಳಿ ಹೋಬಳಿ ತಿಪಟೂರು–ಹಾಲ್ಕುರಿಕೆ ರಸ್ತೆಯ ಮಣಕಿಕೆರೆ ಗೇಟ್ ಬಳಿ ಕೆಲದಿನಗಳ ಹಿಂದೆ ರಸ್ತೆ ಬದಿಯ ಆಲದ ಮರವೊಂದರ ಕೊಂಬೆ ಮುರಿದು ಬಿದ್ದಿತ್ತು. ಕೊಂಬೆಗಳನ್ನು ಕಡಿದ ಪರಿಣಾಮ ಇಡೀ ಮರವೇ ಒಣಗಿ ಹೋಗಿತ್ತು.

ಕಿಡಿಗೇಡಿಗಳು 20 ಅಡಿ ಎತ್ತರದ ಮರದ ಬುಡಕ್ಕೆ ಬೆಂಕಿ ಹಚ್ಚಿದ್ದು, ಬೆಂಕಿಯ ಕೆನ್ನಾಲಿಗೆ ಇಡೀ ಮರದ ಬುಡವನ್ನೇ ದಹಿಸುತ್ತಿದೆ. ಬೆಂಕಿಗೆ ಬೆಂದ ಮರ ರಸ್ತೆಗೆ ಬೀಳುತ್ತದೆ. ಇದರಿಂದ ವಾಹನ ಸವಾರರು, ದಾರಿಹೋಕರಿಗೆ ಪ್ರಾಣಾಪಾಯ ಎದುರಾಗುವ ಅಪಾಯವಿದೆ. ಅರಣ್ಯ ಇಲಾಖೆ, ಲೋಕಪಯೋಗಿ ಇಲಾಖೆ ತುರ್ತಾಗಿ ಕಾರ್ಯಪ್ರವೃತ್ತರಾಗಬೇಕಿದೆ ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

## ಅಕ್ರಮ ಅಂಗಡಿ ತೆರವು, ಫುಟ್‌ಪಾತ್ ವ್ಯಾಪಾರಿಗಳ ಎತ್ತಂಗಡಿ

### ಯಾವುದೇ ಮುನ್ಸೂಚನೆ ನೀಡದ ಕಾರ್ಯಾಚರಣೆಯನ್ನು ಬೀದಿಬದಿ ವ್ಯಾಪಾರಿಗಳು ವಿರೋಧಿಸಿದರು

• ಉದಯವಾಹಿನಿ, ರಾಮನಗರ


ಉದಯವಾಹಿನಿ ಚಿತ್ರ

ತಾಲ್ಲೂಕಿನ ಬಿಡದಿ ಪುರಸಭೆ ಸಿಬ್ಬಂದಿ ಸರ್ಕಾರಿ ಜಾಗ ಒತ್ತುವರಿ ಮಾಡಿಕೊಂಡು ನಿರ್ಮಾಣ ಮಾಡಿದ್ದ ಅನಧಿಕೃತ ಅಂಗಡಿ ಹಾಗೂ ಪಾದಚಾರಿ ಮಾರ್ಗದ ವ್ಯಾಪಾರಿಗಳನ್ನು ತೆರವುಗೊಳಿಸಿದರು.


ಬೆಳಗ್ಗೆ 6ಕ್ಕೆ ಬೃಹತ್ ನಿರ್ಮಾಣ ಯಂತ್ರಗಳ ಮೂಲಕ ಒತ್ತುವರಿ ತೆರವು ಕಾರ್ಯಾಚರಣೆ ಪುರಸಭೆ ಅಧಿಕಾರಿಗಳು, ಸಿಬ್ಬಂದಿ ಮುಂದಾದರು. ಯಾವುದೇ ಮುನ್ಸೂಚನೆ ನೀಡದೆ ಏಕಾಏಕಿ ಆರಂಭವಾದ ಕಾರ್ಯಾಚರಣೆಯನ್ನು ಬೀದಿಬದಿ ವ್ಯಾಪಾರಿಗಳು ವಿರೋಧಿಸಿದರು. ಸ್ಥಳದಲ್ಲಿದ್ದ ಅಧಿಕಾರಿಗಳು ಹಾಗೂ ಪುರಸಭೆ ಸದಸ್ಯರನ್ನು ತರಾಟೆಗೆ ತೆಗೆದುಕೊಂಡರು. ಯಾವುದೇ ಸೂಚನೆ ನೀಡದೆ ದೌರ್ಜನ್ಯ ಮಾಡಲಾಗುತ್ತಿದೆ. ಇದು ಕಾನೂನುಬಾಹಿರ. ನ್ಯಾಯಸಮ್ಮತವಲ್ಲದ ನಡೆ ಎಂದು ಆರೋಪಿಸಿದರು. ಇದಕ್ಕೆ ಕಿವಿಗೊಡದ ಸಿಬ್ಬಂದಿ ತೆರವು ಕಾರ್ಯಾಚರಣೆ ಮುಂದುವರೆಸಿದರು. ಪುರಸಭೆ ಅಧ್ಯಕ್ಷ ಎಂ.ಎನ್. ಹರಿಪ್ರಸಾದ್, ಮುಖ್ಯಾಧಿಕಾರಿ ಕೆ.ಜಿ.ರಮೇಶ್, ಬಿಡದಿ ಇನ್‌ಸ್ಪೆಕ್ಟರ್ ಶಂಕರ್ ನಾಯಕ್ ನೇತೃತ್ವದಲ್ಲಿ ಅಧಿಕಾರಿಗಳ ತಂಡ ಕಾರ್ಯಾಚರಣೆಯಲ್ಲಿ ತೊಡಗಿತ್ತು.

> ಏಕಾಏಕಿ ಒತ್ತುವರಿ ತೆರವು ಕಾರ್ಯಾಚರಣೆ ಮಾಡಿಲ್ಲ. ಸಾಮಾನ್ಯ ಸಭೆಯಲ್ಲಿ ನಿರ್ಣಯ ಕೈಗೊಂಡು ಒಂದು ತಿಂಗಳ ಹಿಂದೆಯೇ ಎಲ್ಲರಿಗೂ ನೋಟಿಸ್ ನೀಡಲಾಗಿತ್ತು. ಸುಂದರ ಪಟ್ಟಣ ನಿರ್ಮಿಸುವುದು ಪುರಸಭೆಯ ಉದ್ದೇಶ ಎಂದರು.

ಮೊದಲಿಗೆ ಬಿಜಿಎಸ್ ವೃತ್ತದ ಬಳಿ ಹಾಗೂ ಪುರಸಭೆ ಮುಖ್ಯರಸ್ತೆಯಲ್ಲಿ ಫುಟ್‌ಪಾತ್ ತೆರವು ಕಾರ್ಯಾಚರಣೆ ನಡೆಸಿದರು. ಬಿಡದಿ ಬೆಳೆಯುತ್ತಿದ್ದು, ಸರ್ಕಾರಿ ಜಾಗ, ಪಾದಚಾರಿ ಮಾರ್ಗ ಒತ್ತುವರಿಯಿಂದ ಸಾರ್ವಜನಿಕರು, ವಾಹನಗಳ ಓಡಾಟಕ್ಕೆ ಬಹಳ ತೊಂದರೆಯಾಗುತ್ತಿತ್ತು. ಈ ಬಗ್ಗೆ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ತೆರವು ಕಾರ್ಯಾಚರಣೆ ನಡೆಸಲಾಗುತ್ತಿದೆ. ಬಸ್ ನಿಲ್ದಾಣದಿಂದ ರೈಲ್ವೆ ನಿಲ್ದಾಣದವರೆಗೆ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಇದರಿಂದ ಯಾವುದೇ ನಾಗರಿಕರಿಗೆ ತೊಂದರೆಯಾಗಿಲ್ಲ ಎಂದು ಸ್ಥಳದಲ್ಲಿದ್ದ ಪುರಸಭೆ ಅಧ್ಯಕ್ಷ ಎಂ.ಎನ್. ಹರಿಪ್ರಸಾದ್ ಸ್ಪಷ್ಟಪಡಿಸಿದರು.

ಬಿಡದಿ ಪ್ರವೇಶಿಸಲು ಮತ್ತು ಹೊರ ಬರಲು ಒಂದೇ ಮುಖ್ಯರಸ್ತೆಯಿದೆ. ಪೇಟೆಗೆ ಬರುವವರು, ಪುರಸಭೆಗೆ ಬರುವ ವಾಹನಗಳ ಸಂಚಾರದಿಂದ ವಾಹನ ದಟ್ಟನೆ ಸಮಸ್ಯೆ ಎದುರಾಗುತ್ತಿದೆ. ವಾಹನಗಳ ಪಾರ್ಕಿಂಗ್ ಸಮಸ್ಯೆ ಉಲ್ಬಣವಾಗಿದೆ. ಹೀಗಾಗಿ ಒತ್ತುವರಿ ತೆರವು ಅನಿವಾರ್ಯವಾಗಿದೆ ಎಂದು ಕಾರ್ಯಾಚರಣೆಯನ್ನು ಸಮರ್ಥಿಸಿಕೊಂಡರು. ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಬಿ.ಜಿ.ಲೋಹಿತ್ ಕುಮಾರ್, ಉಪಾಧ್ಯಕ್ಷೆ ಮಂಜುಳಾ, ಸದಸ್ಯರಾದ ಸಿ. ಉಮೇಶ್, ಎನ್. ಕುಮಾರ್, ಶ್ರೀನಿವಾಸ್, ರೇಣುಕಯ್ಯ, ಶಿವರಾಮ್, ಶಶಿಕುಮಾರ್, ಮಹೇಶ್, ನಾಗೇಶ್, ಅಧಿಕಾರಿಗಳಾದ ನಂಜುಂಡಸ್ವಾಮಿ, ಶ್ಯಾಮ್, ಶೃತಿ, ಶಿಲ್ಪ ಹಾಜರಿದ್ದರು.

### ಬಡವರ ಹೊಟ್ಟೆ ಮೇಲೆ ಹೊಡೆಯುವ ಕೆಲಸ


ಉದಯವಾಹಿನಿ ಚಿತ್ರ

ಬಿಡದಿಯಲ್ಲಿ ಏಕಾಏಕಿ ಬೀದಿಬದಿ ವ್ಯಾಪಾರಿಗಳನ್ನು ತೆರವು ಮಾಡುವ ಮೂಲಕ ಶಾಸಕ ಬಾಲಕೃಷ್ಣ ಬಡವರನ್ನು ಬೀದಿಗೆ ತಂದಿದ್ದಾರೆ. ನೊಂದವರ ಪರ ಜೆಡಿಎಸ್ ಹೋರಾಟ ಮಾಡುತ್ತದೆ ಎಂದು ಮಾಜಿ ಶಾಸಕ ಎ.ಮಂಜುನಾಥ್ ತಿಳಿಸಿದರು. ತೆರವು ಕಾರ್ಯಾಚರಣೆ ಸ್ಥಳಕ್ಕೆ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಬಡವರು ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡದೆ ಮಾಲ್‌ಗಳಲ್ಲಿ ವ್ಯಾಪಾರ ಮಾಡುತ್ತಾರಾ. ಇದನ್ನು ರಾಜಕಾರಣಿಗಳು ಅರ್ಥಮಾಡಿಕೊಳ್ಳಬೇಕು ಎಂದು ಹರಿಹಾಯ್ದರು.

## ಅನಿಲ ದರ ಏರಿಕೆ: ಕೇಂದ್ರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

• ಉದಯವಾಹಿನಿ, ಚಿಕ್ಕಬಳ್ಳಾಪುರ


ಉದಯವಾಹಿನಿ ಚಿತ್ರ

ಕೇಂದ್ರ ಸರ್ಕಾರವು ಇಂಧನ ಬೆಲೆ ಹೆಚ್ಚಿಸಿರುವುದನ್ನು ಖಂಡಿಸಿ ನಗರದಲ್ಲಿ ಶುಕ್ರವಾರ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಯುವ ಕಾಂಗ್ರೆಸ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯು ಜಿಲ್ಲಾ ಕಾಂಗ್ರೆಸ್ ಕಚೇರಿಯಿಂದ ಆರಂಭವಾಯಿತು. ಬಿಬಿ ರಸ್ತೆಯಲ್ಲಿ ರ‍್ಯಾಲಿ ನಡೆಸಿದ ಪಕ್ಷದ ಕಾರ್ಯಕರ್ತರು ಶಿಡ್ಲಘಟ್ಟ ವೃತ್ತದಲ್ಲಿ ಸಮಾವೇಶ ಗೊಂಡರು. ಮಾನವ ಸರಪಳಿ ನಿರ್ಮಿಸಿದರು.

ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು 50 ಹೆಚ್ಚಿಸುವ ಕೇಂದ್ರ ಸರ್ಕಾರದ ಜನವಿರೋಧಿ ನಿರ್ಧಾರವನ್ನು ಕಾಂಗ್ರೆಸ್ ಖಂಡಿಸುತ್ತದೆ. ಈ ಬೆಲೆ ಏರಿಕೆಗಳು ಈಗಾಗಲೇ ಹಣದುಬ್ಬರ, ನಿರುದ್ಯೋಗದಿಂದ ಬಳಲುತ್ತಿರುವ ಸಾಮಾನ್ಯ ಜನರು, ರೈತರು, ದಿನಗೂಲಿ ಕಾರ್ಮಿಕರು, ಮಧ್ಯಮ ವರ್ಗದ ಕುಟುಂಬಗಳ ಮೇಲೆ ಭಾರಿ ಹೊರೆಯಾಗಿದೆ ಎಂದು ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು. ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಕುಬೇರ್ ಅಚ್ಚು ಮಾತನಾಡಿ, ಕಾಂಗ್ರೆಸ್ ಪಕ್ಷವು ಕೇಂದ್ರದಲ್ಲಿ ಅಧಿಕಾರದಲ್ಲಿ ಇದ್ದ ವೇಳೆ ಅಡುಗೆ ಅನಿಲ ಸಿಲಿಂಡರ್ ಬೆಲೆ ? 550 ಇತ್ತು. ಆದರೆ ಈಗ ಬೆಲೆ ಹೆಚ್ಚಿಸಿದ್ದಾರೆ. ಪೆಟ್ರೋಲ್, ಡೀಸೆಲ್ ಹೊರೆಯೂ ಕೇಂದ್ರ ಸರ್ಕಾರದಿಂದಲೇ ಆಗುತ್ತಿದೆ ಎಂದರು.

ರಾಜ್ಯ ಕಾಂಗ್ರೆಸ್ ವಿರುದ್ಧ ಬೆರಳು ತೋರುವ ನೈತಿಕತೆಯೇ ಬಿಜೆಪಿಗೆ ಇಲ್ಲ. ಗ್ಯಾರಂಟಿ ನಿಲ್ಲಿಸುತ್ತಾರೆ ಎಂದು ಸುಳ್ಳು ಹೇಳುತ್ತಿದ್ದರು. ಆದರೆ ಯಾವ ಯೋಜನೆಗಳೂ ನಿಲ್ಲದ ಕಾರಣ ಬಿಜೆಪಿಗೆ ದಿಕ್ಕು ತೋಚದಂತೆ ಆಗಿದೆ ಎಂದು ಟೀಕಿಸಿದರು. ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ ಕೇಶವರೆಡ್ಡಿ ಮಾತನಾಡಿ, ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳಿಂದ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಯಾವ ಭರಸವೆಗಳನ್ನೂ ಈಡೇರಿಸಿಲ್ಲ ಎಂದು ಕಿಡಿಕಾರಿದರು. ರಾಜ್ಯ ಬಿಜೆಪಿ ಜನಾಕ್ರೋಶ ಯಾತ್ರೆ ನಡೆಸುತ್ತಿದೆ. ಮತ್ತೊಂದು ಕಡೆ ಕೇಂದ್ರ ಸರ್ಕಾರ ಅಡುಗೆ ಅನಿಲ ದರ ಹೆಚ್ಚು ಮಾಡುತ್ತದೆ. ನಾವು ನೀಡುತ್ತಿರುವ ಜಿಎಸ್‌ಟಿ ಪಾಲನ್ನೂ ಕೇಂದ್ರ ಸರ್ಕಾರವು ಸರಿಯಾಗಿ ನೀಡುತ್ತಿಲ್ಲ ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಯಲುವಳ್ಳಿ ರಮೇಶ್, ಜಿ.ಪಂ ಮಾಜಿ ಸದಸ್ಯ ಕೆ.ಎಂ.ಮುನೇಗೌಡ, ಯುವ ಕಾಂಗ್ರೆಸ್ ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

> ಬೆಲೆ ಏರಿಕೆ ವಿರುದ್ಧ ರಾಜ್ಯ ಬಿಜೆಪಿ ಜನಾಕ್ರೋಶ ಕಾರ್ಯಕ್ರಮ ಹಮ್ಮಿಕೊಂಡಿದೆ. ಆದರೆ ಅವರು ಕೇಂದ್ರ ಬಿಜೆಪಿ ವಿರುದ್ಧ ಜನಾಕ್ರೋಶ ವ್ಯಕ್ತಪಡಿಸಬೇಕಾಗಿದೆ. ಬಿಜೆಪಿಯಲ್ಲಿ ನಾನೇ ದೊಡ್ಡ ನಾಯಕ ಎಂದು ವಿಜಯೇಂದ್ರ ಬಿಂಬಿಸಿಕೊಳ್ಳಬೇಕಾಗಿದೆ. ಆ ಕಾರಣದಿಂದ ಅವರ ತಂಡವು ಜನಾಕ್ರೋಶ ಸಭೆ ನಡೆಸುತ್ತಿದೆ. ಅವರ ಅಸ್ತಿತ್ವ ಉಳಿಸಿಕೊಳ್ಳಲು ಯಾತ್ರೆ ಮಾಡುತ್ತಿದ್ದಾರೆ ಎಂದರು.

## ಬೆಲೆ ಏರಿಕೆ ಖಂಡಿಸಿ ರೈಲ್ವೆ ನಿಲ್ದಾಣಕ್ಕೆ ಮುತ್ತಿಗೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬಂಗಾರಪೇಟೆ

ಪಟ್ಟಣದ ಅಗತ್ಯ ವಸ್ತುಗಳ ಬೆಲೆ ಏರಿಕೆ ನಿಯಂತ್ರಣ ಮತ್ತು ನಬಾರ್ಡ್ ಕೃಷಿ ಸಾಲ ಯೋಜನೆಯನ್ನು ಮುಂದುವರಿಸಲು ಆಗ್ರಹಿಸಿ ಸೌದೆ, ಕುಂಬಳಕಾಯಿ ಸಮೇತ ರೈಲ್ವೇ ಇಲಾಖೆಗೆ ಮುತ್ತಿಗೆ ಹಾಕುವುದಾಗಿ ರೈತಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಎಚ್ಚರಿಕೆಯನ್ನು ನೀಡಿದರು.

ಪಟ್ಟಣದ ಅರಣ್ಯ ಇಲಾಖೆ ಇಂದಿರಾ ಗಾಂಧಿ ಉದ್ಯಾನವನದಲ್ಲಿ ರೈತ ಸಂಘದ ಸದಸ್ಯರ ಸಭೆಯಲ್ಲಿ ಶುಕ್ರವಾರ ಭಾಗವಹಿಸಿ ಮಾತನಾಡಿದ ಅವರು ಬ್ರಿಟೀಷರ ಆಳ್ವಿಕೆ ಕಾಲದಲ್ಲಿ ದುಡಿ ಯುವ ಕೈಗೆ ಕೆಲಸ ನೀಡಿ ಹೊಟ್ಟೆ ತುಂಬ ಊಟ ಹಾಕಿ ಹಸಿವು ಮುಕ್ತ ದೇಶವನ್ನಾಗಿ ಮಾಡಿದ್ದರು.

ಆದರೆ, ಬ್ರಿಟೀಷರ ನಂತರ ಸಿಕ್ಕಿದ ಸ್ವಾತಂತ್ರ್ಯದಲ್ಲಿ ದೇಶವನ್ನು ಕೊಳ್ಳೆ ಹೊಡೆದು ಬಡವರ ಹಸಿವಿನ ಮೇಲೆ ಶ್ರೀಮಂತ ಎಂಬ ಸಾಮ್ರಾಜ್ಯವನ್ನು ಕಟ್ಟುತ್ತಿರುವ ಜನ ವಿರೋಧಿ, ರೈತ ವಿರೋಧಿ ಸರಕಾರದ ವಿರುದ್ಧ ವ್ಯಕ್ತಪಡಿಸಿದರು. ಪೆಟ್ರೋಲ್, ಡೀಸೆಲ್ ಅಡುಗೆ ಅನಿಲದಿಂದ ಹಿಡಿದು ದಿನನಿತ್ಯದ ಎಲ್ಲಾ ಬೇಳೆ ಪದಾರ್ಥಗಳ ಜೊತೆಗೆ ಮುದ್ರಾಂಕ ಶಿಕ್ಷಣ ಆರೋಗ್ಯ ಮತ್ತಿತರ ಬಡವರಿಗೆ ಹೊರೆಯಾಗುವ ವಸ್ತುಗಳ ಮೇಲೆ ಬೆಲೆ ಏರಿಕೆ ಮಾಡಿ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುತ್ತಿರುವ ಸರ್ಕಾರಗಳಿಗೆ ಜನರೇ ಉತ್ತರ ಕೊಡುವ ಕಾಲ ದೂರವಿಲ್ಲವೆಂದು ಎಚ್ಚರಿಸಿದರು. ಉಜ್ವಲ ಯೋಜನೆ ಅಡಿ ಯಲ್ಲಿ ಉಚಿತವಾಗಿ ಪದೇ ಪದೇ ಅಡುಗೆ ಅನಿಲ ಬೆಲೆ ಏರಿಕೆ ಮಾಡಿ ಗ್ರಾಮೀಣ ಪ್ರದೇಶದ ಬಡವರಿಗೆ ದುಬಾರಿ ವೆಚ್ಚ ನೀಡಲಾಗದೆ ಮತ್ತೆ ಸೌದೆಯನ್ನು ಹುಡುಕಿಕೊಂಡು ಕಾಡಿಗೆ ಅಲೆದಾಡಿ, ಕಾಡನ್ನು ನಾಶ ಮಾಡಿ ಸೌದೆ ಒಲೆ ಅವಲಂಭಿಸುವ ಮೂಲಕ ಹೊಗೆಯಿಂದ ನಾನಾ ಕಾಯಿಲೆಗಳಿಗೆ ತುತ್ತಾಗಿ ಖಾಸಗಿ ಆಸ್ಪತ್ರೆ ಸೇರಬೇಕಾದ ಪರಿಸ್ಥಿತಿಯಲ್ಲಿ ಉಚಿತ 6ನೇ ಗ್ಯಾರಂಟಿ ನೀಡುತ್ತಿದ್ದಾರೆಂದು ಆರೋಪಿಸಿದರು.

## ಸರ್ಕಾರಿ ಶಾಲೆ ನೂತನ ಕಟ್ಟಡ ಉದ್ಘಾಟನೆ

• ಉದಯವಾಹಿನಿ, ನಾಗಮಂಗಲ


ಉದಯವಾಹಿನಿ ಚಿತ್ರ

ವಡೇರಪುರ ಸರ್ಕಾರಿ ಶಾಲೆಯ ಶಿಕ್ಷಕರ ಕಾಳಜಿಯಿಂದ ಸರ್ಕಾರದ ಯಾವುದೇ ಅನುದಾನ ಪಡೆಯದೆ, ಸಮುದಾಯದ ಸಹಕಾರದಿಂದ ಖಾಸಗಿ ಶಾಲೆ ಮೀರಿಸುವಂತೆ ಕಟ್ಟಡ ನಿರ್ಮಿಸಿ ರಾಜ್ಯಕ್ಕೆ ಮಾದರಿಯಾಗಿದೆ.

ಶಾಲೆಗೆ ಅಗತ್ಯವಾದ ಕಟ್ಟಡ, ಕಾಂಪೌಂಡ್ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಲು ಕ್ರಮವಹಿಸುತ್ತೇನೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ತಾಲ್ಲೂಕಿನ ವಡೇರಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನೂತನವಾಗಿ ನಿರ್ಮಾಣ ಮಾಡಲಾಗಿದ್ದ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು. 15 ವಿದ್ಯಾರ್ಥಿಗಳಿದ್ದ ಶಾಲೆಯಲ್ಲಿ ಪ್ರಸ್ತುತ 90 ಮಕ್ಕಳು ಅಧ್ಯಯನ ಮಾಡುತ್ತಿರುವುದನ್ನು ಗಮನಿಸಿದರೆ ಆಶ್ಚರ್ಯವಾಗುತ್ತದೆ. ಈ ಶಾಲೆಯ ಮುಖ್ಯ ಶಿಕ್ಷಕ ಮುರಳೀಧರ, ಶಿಕ್ಷಕರ ಶಿಕ್ಷಣ ಮೇಲಿರುವ ಕಾಳಜಿ, ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವ ಹಂಬಲವು ನಿಜವಾಗಿಯೂ ಪ್ರಶಂಸನೀಯವಾಗಿದೆ ಎಂದರು.

ಅಲ್ಲದೆ, ಶಾಲೆಗೆ ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಸುಮಾರು 12 ಗ್ರಾಮಗಳ ಮಕ್ಕಳು ದಾಖಲಾಗಿ ಕಲಿಯುತ್ತಿದ್ದಾರೆ. ವಡೇರಪುರ ಶಾಲೆಯ ಶಿಕ್ಷಕರ ಕಾಳಜಿ, ಆಸಕ್ತಿ, ಶ್ರದ್ಧೆ, ಪಾಠ ಪ್ರವಚನಗಳು ಶಾಲೆಯ ವ್ಯಾಪ್ತಿಯ ಪೋಷಕರಲ್ಲದೇ ದೂರದ ಊರಿನ ಪೋಷಕರನ್ನು ಸೆಳೆಯುತ್ತಿವೆ ಎಂದು ತಿಳಿಸಿದರು.

## ಸೌದೆ ಒಲೆ ಉರಿಸಿ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

• ಉದಯವಾಹಿನಿ, ಮಂಡ್ಯ


ಉದಯವಾಹಿನಿ ಚಿತ್ರ

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಬೆಲೆ ಹೆಚ್ಚಳ ಮಾಡಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ತಲೆ ಮೇಲೆ ಗ್ಯಾಸ್ ಸಿಲಿಂಡರ್ ಹೊತ್ತು, ಹೆದ್ದಾರಿಯಲ್ಲಿ ಸೌದೆ ಒಲೆ ಉರಿಸಿ ಶುಕ್ರವಾರ ನಗರದ ಜೆ.ಸಿ.ವೃತ್ತದಲ್ಲಿ ವಿನೂತನವಾಗಿ ಪ್ರತಿಭಟನೆ ನಡೆಸಿದರು. ನಗರದ ಜೆ.ಸಿ.ವೃತ್ತದಲ್ಲಿ ಕೆಲಕಾಲ ರಸ್ತೆ ಸಂಚಾರಕ್ಕೆ ಅಡ್ಡಿಪಡಿಸಿದರು. ನಂತರ ಸೌದೆ ಒಲೆ ಹೊತ್ತಿಸಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಕರ್ನಾಟಕ ರಾಜ್ಯಕ್ಕೆ ಯಾವುದೇ ಯೋಜನೆ ಘೋಷಣೆ ಮಾಡಿಲ್ಲ. ನಮ್ಮ ತೆರಿಗೆ ಪಾಲನ್ನು ಕೂಡ ನೀಡುತ್ತಿಲ್ಲ. ಇಂತಹ ಅದೆಷ್ಟೋ ಲೋಪಗಳನ್ನು ಇಟ್ಟುಕೊಂಡಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಜನರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಾ ವಂಚಿಸಿದೆ' ಎಂದು ದೂರಿದರು.

ಜನರ ಬದುಕು ಮೂರಾಬಟ್ಟೆ ಆಗಿದೆ. ಇಂತಹ ಸನ್ನಿವೇಶದಲ್ಲಿ ಬೆಲೆ ಏರಿಕೆ ಮಾಡುವ ಮೂಲಕ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಬಡವರ ಹಾಗೂ ಮಧ್ಯಮ ವರ್ಗದವರ ರಕ್ತ ಹೀರುತ್ತಿದೆ. ಇದರ ಬಗ್ಗೆ ಹೋರಾಟ ಮಾಡಬೇಕಿದ್ದ ರಾಜ್ಯ ಬಿಜೆಪಿಯು, ಕಾಂಗ್ರೆಸ್ ವಿರುದ್ಧ ಜನಾಕ್ರೋಶ ಯಾತ್ರೆ ಮಾಡುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಕೇಂದ್ರ ಸರ್ಕಾರವು ಪೆಟ್ರೋಲ್, ಡೀಸೆಲ್ ಬೆಲೆಯಲ್ಲಿ 2 ಹಾಗೂ ಅಡುಗೆ ಅನಿಲದ ದರವನ್ನು 50 ಬೆಲೆ ಹೆಚ್ಚಳ ಮಾಡಿದೆ. ಬಜೆಟ್‌ನಲ್ಲಿ ರಾಜ್ಯಕ್ಕೆ ಯಾವುದೇ ಯೋಜನೆ ರೂಪಿಸಿಲ್ಲ. ನಮ್ಮ ತೆರಿಗೆ ಪಾಲನ್ನು ನೀಡದೆ ದ್ವೇಷದ ರಾಜಕಾರಣ ಮಾಡುತ್ತಿರುವ ಕೇಂದ್ರ ಸರ್ಕಾರದ ನಡೆಯನ್ನು ನಮ್ಮ ರಾಜ್ಯದ ಜನ ನೋಡುತ್ತಿದ್ದು, ಮುಂದಿನ ಸ್ಥಳೀಯ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸುತ್ತಾರೆ ಎಂದು ಎಚ್ಚರಿಕೆ ನೀಡಿದರು.

## ಗ್ಯಾರಂಟಿಯಿಂದ ಅಭಿವೃದ್ಧಿ ಕುಂಠಿತವಾಗಿಲ್ಲ

### ಐದು ಗ್ಯಾರಂಟಿ ಯೋಜನೆಗಳು ಬಡವರು ಬದುಕು ಕಟ್ಟಿಕೊಳ್ಳಲು ನೆರವು

• ಉದಯವಾಹಿನಿ, ನಂಜನಗೂಡು


ಉದಯವಾಹಿನಿ ಚಿತ್ರ

ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಬಡವರು ಬದುಕು ಕಟ್ಟಿಕೊಳ್ಳಲು ನೆರವಾಗಿವೆ, ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತವಾಗಿಲ್ಲ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ತಾಲ್ಲೂಕಿನ ಹುಲ್ಲಹಳ್ಳಿ ಗ್ರಾಮದಲ್ಲಿ ಶುಕ್ರವಾರ ಗ್ಯಾರಂಟಿ ಅನುಷ್ಠಾನ ಸಮಿತಿ ಏರ್ಪಡಿಸಿದ್ದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಕುಂದು ಕೊರತೆ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪಕ್ಷದ ಗ್ಯಾರಂಟಿ ಯೋಜನೆ ಗಳಿಂದ ಅಭಿವೃದ್ಧಿ ಕುಂಠಿತವಾಗಿದೆ, ಅಲ್ಲದೆ ಗ್ಯಾರಂಟಿ ಯೋಜನೆಗಳು ಯಾರಿಗೂ ಸರಿಯಾಗಿ ತಲುಪುತ್ತಿಲ್ಲ ಎಂದು ವಿಪಕ್ಷಗಳು ಅಪಪ್ರಚಾರ ನಡೆಸುತ್ತಿವೆ. ಆದರೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರ 5 ಗ್ಯಾರಂಟಿ ಯೋಜನೆಗಳಿಗೆ ಬಜೆಟ್‌ನಲ್ಲಿ ಅನುದಾನ ಮೀಸಲಿಟ್ಟು, ಸಂವಿಧಾನಾತ್ಮಕವಾಗಿ ಗ್ಯಾರಂಟಿ ಅನುಷ್ಠಾನ ಸಮಿತಿಯನ್ನು ರಚಿಸಿದೆ.

ಅರ್ಹ ಫಲಾನುಭವಿಗಳಿಗೆ ಯೋಜನೆ ತಲುಪಿಸುವ ಕಾರ್ಯದ ಜೊತೆಗೆ ಎಲ್ಲಾ ಕ್ಷೇತ್ರಗಳಿಗೂ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ನೀಡುತ್ತಿದೆ ಎಂದು ಹೇಳಿದರು. ಹುಲ್ಲಹಳ್ಳಿ ಗ್ರಾಮದಲ್ಲಿ 1.5 ಕೋಟಿ ವೆಚ್ಚದಲ್ಲಿ ಸೋಪಾನಕಟ್ಟೆ ನಿರ್ಮಾಣ, 20 ಕೋಟಿ ವೆಚ್ಚದಲ್ಲಿ ಹುಲ್ಲಹಳ್ಳಿಯಿಂದ ದುಗ್ಗಹಳ್ಳಿವರೆಗೆ ರಸ್ತೆ ಅಭಿವೃದ್ಧಿ, 6 ಕೋಟಿ ವೆಚ್ಚದಲ್ಲಿ ಹುಲ್ಲಹಳ್ಳಿಯ ವಿವಿಧ ಗ್ರಾಮಗಳಲ್ಲಿ ಸಿಸಿ ರಸ್ತೆ, ಚರಂಡಿ ನಿರ್ಮಾಣ, ಸೇರಿದಂತೆ ಸುಮಾರು 26 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕೆಲಸಗಳು ನಡೆದಿವೆ. ಕ್ಷೇತ್ರಕ್ಕೆ ಸುಮಾರು 243 ಕೋಟಿ ಅನುದಾನ ಬಿಡುಗಡೆಯಾಗಿ ಕೆಲಸಗಳು ಪ್ರಗತಿಯಲ್ಲಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿವೃದ್ಧಿ ಕೆಲಸಗಳ ಮೂಲಕವೇ ವಿಪಕ್ಷಗಳ ಅಪಪ್ರಚಾರಕ್ಕೆ ತಕ್ಕ ಉತ್ತರವನ್ನು ನೀಡಿದ್ದಾರೆ ಎಂದರು. ಈ ಸಂದರ್ಭದಲ್ಲಿ ಹುಲ್ಲಹಳ್ಳಿ ಪಡಿತರ ವಿತರಣ ಕೇಂದ್ರದಲ್ಲಿ ಫಲಾನುಭವಿಗಳಿಗೆ 10 ಕೆಜಿ ಅಕ್ಕಿ ವಿತರಣೆ ಮಾಡಿದರು. ಹುಲ್ಲಹಳ್ಳಿಯಿಂದ ಮಡಕೆಹುಂಡಿ–ಬಸಾ ಪುರ– ಲಂಕೆ ಮಾರ್ಗ, ಹುಲ್ಲಹಳ್ಳಿಯಿಂದ ಹುರ ಮಾರ್ಗವಾಗಿ ಮಲ್ಲಹಳ್ಳಿ ಮಾರ್ಗದ ಬಸ್ ಸಂಚಾರಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಕಳಲೆ ಕೇಶವಮೂರ್ತಿ, ಶ್ರೀಕಂಠ ನಾಯಕ, ಎಂ. ಮಾದಪ್ಪ, ಗ್ರಾ.ಪಂ ಉಪಾಧ್ಯಕ್ಷ ಲೋಕೇಶ್ ಇನ್ನಿತರರಿದ್ದರು.

> ತಾಲ್ಲೂಕಿಗೆ ಯುವನಿಧಿ ಯೋಜನೆಯಿಂದ 901 ವಿದ್ಯಾರ್ಥಿಗಳಿಗೆ 26.82 ಲಕ್ಷ ಅನುದಾನ ಬಂದಿದೆ, ಶಕ್ತಿ ಯೋಜನೆಗೆ 77 ಕೋಟಿ, ಗೃಹ ಜ್ಯೋತಿ ಯೋಜನೆಗೆ 9.84 ಕೋಟಿ, ಅನ್ನಭಾಗ್ಯ ಯೋಜನೆಗೆ 1.66 ಕೋಟಿ ಅನುದಾನ ನೀಡಲಾಗಿದೆ. ಕ್ಷೇತ್ರಕ್ಕೆ ಒಟ್ಟಾಗಿ 160 ಕೋಟಿ ಅನುದಾನ ಬಂದಿದೆ. ಕ್ಷೇತ್ರಕ್ಕೆ ಕಳೆದ ಎರಡು ವರ್ಷಗಳಲ್ಲಿ 243 ಕೋಟಿ ಅನುದಾನ ಬಂದಿದೆ
> –ದರ್ಶನ್ ಧ್ರುವನಾರಾಯಣ, ಶಾಸಕ

> ಗ್ರಾಮಸ್ಥರ ಬೇಡಿಕೆಯಂತೆ ಹೊಸದಾಗಿ ಹುಲ್ಲಹಳ್ಳಿಯಿಂದ ಮೂರು ಮಾರ್ಗದಲ್ಲಿ ಬಸ್ ಸಂಚಾರವನ್ನು ಆರಂಭಿಸಲಾಗಿದೆ. ಮುಂದಿನ ದಿನಗಳಲ್ಲಿ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಭೆಗಳನ್ನು ನಡೆಸಿ ಅರ್ಹ ಫಲಾನುಭವಿಗಳಿಗೆ ಸೌಲಭ್ಯಗಳನ್ನು ತಲುಪಿಸಲಾಗುವುದು
> – ಕೆ.ಮಾರುತಿ, ಅಧ್ಯಕ್ಷ

## ವೀರಶೈವರು ಅನ್ಯ ಧರ್ಮ ಅನುಸರಣೆ ಬೇಡ

• ಉದಯವಾಹಿನಿ, ತುಮಕೂರು


ಉದಯವಾಹಿನಿ ಚಿತ್ರ

ವೀರಶೈವರು ಮತ್ತೊಂದು ಧರ್ಮದ ಅನುಸರಣೆ ಮಾಡುವುದು ಸರಿಯಲ್ಲ. ಸತ್ಯನಾರಾಯಣ ಪೂಜೆಗೂ ಲಿಂಗಾಯತ ವೀರಶೈವರಿಗೂ ಏನು ಸಂಬಂಧ ಎಂದು ಸಿದ್ಧಗಂಗಾ ಮಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ಇಲ್ಲಿ ಶುಕ್ರವಾರ ಪ್ರಶ್ನಿಸಿದರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕ ಹಮ್ಮಿಕೊಂಡಿದ್ದ ಸೇವಾದೀಕ್ಷೆ, ಸಾಧಕರಿಗೆ ಸನ್ಮಾನ ಹಾಗೂ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಪರಧರ್ಮ ಸಹಿಷ್ಣುತೆ ಇರಲಿ. ಆದರೆ ನಮ್ಮ ಧರ್ಮದ ಆಚರಣೆ ಬಿಡಬಾರದು. ವೀರಶೈವ ಲಿಂಗಾಯತ ಧರ್ಮದ ಆಚರಣೆ ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿದ್ದು, ಅಂಗೈಯಲ್ಲಿ ಲಿಂಗ ಧರಿಸಿ ನಿತ್ಯವೂ ಪೂಜೆ ಸಲ್ಲಿಸುವ ಸಂಪ್ರದಾಯ ಮರೆಯಾಗುತ್ತಿದೆ. ಲಿಂಗ ಧಾರಣೆ ಮಾಡಿಕೊಳ್ಳದವರಿಗೆ ಸೇವಾ ದೀಕ್ಷೆ ನೀಡುವುದರಲ್ಲಿ ಅರ್ಥವಿಲ್ಲ ಎಂದು ಹೇಳಿದರು. ನಮ್ಮೊಳಗಿನ ಭಿನ್ನಾಭಿಪ್ರಾಯ ಮರೆತು ಒಗ್ಗೂಡಬೇಕಿದೆ. ರಾಜಕೀಯ ಅಧಿಕಾರಕ್ಕಾಗಿ ಒಟ್ಟಾಗುವುದಲ್ಲ.

ಎಲ್ಲಾ ರಂಗದಲ್ಲೂ ಮುಂದೆ ಬರಬೇಕು. ಮಹಾಸಭಾ ಪದಾಧಿಕಾರಿಗಳ ಸ್ಥಾನಕ್ಕೆ ಚುನಾವಣೆ ನಡೆಸುವ ಬದಲು ಅವಿರೋಧ ಆಯ್ಕೆಗೆ ಮುಂದಾಗಬೇಕು ಎಂದು ಸಲಹೆ ಮಾಡಿದರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ, ಭಾರತದಲ್ಲಿ ವೀರಶೈವ ಲಿಂಗಾಯತರು ಬಹುಸಂಖ್ಯೆಯಲ್ಲಿದ್ದಾರೆ. ದೇಶದ ಒಟ್ಟಾರೆ ಜನಸಂಖ್ಯೆಯ ಶೇ 3ರಷ್ಟಿರುವ ಬ್ರಾಹ್ಮಣರೇ ದೇಶವನ್ನು ಮುನ್ನಡೆಸುತ್ತಿದ್ದಾರೆ. ಕೇಂದ್ರ ಸಚಿವ ಸಂಪುಟದಲ್ಲಿ ನಮ್ಮ ಸಮುದಾಯಕ್ಕೆ ಕ್ಯಾಬಿನೆಟ್ ದರ್ಜೆ ಸಚಿವ ಸ್ಥಾನ ಸಿಕ್ಕಿಲ್ಲ.

ಒಗ್ಗಟ್ಟಿಲ್ಲದೆ ಹಿಂದುಳಿದಿದ್ದೇವೆ ಎಂದು ವಿಷಾದಿಸಿದರು.

ವೀರಶೈವ– ಲಿಂಗಾಯತ ಎಂಬ ಒಡಕು ಹೋಗಬೇಕು. ಶಿವಕುಮಾರ ಸ್ವಾಮೀಜಿ ಹೇಳಿದಂತೆ ಇಬ್ಬರೂ ಒಂದೇ. ಒಳಜಗಳ, ದ್ವೇಷ ಬಿಟ್ಟು ಒಗ್ಗೂಡಬೇಕಿದೆ.

ಇದಕ್ಕಾಗಿಯೇ ಬಸವ ಜಯಂತಿ ದಿನದೊಂದಿಗೆ ರೇಣುಕಾಚಾರ್ಯ, ಎಲ್ಲಾ ಶಿವಶರಣರ ಜಯಂತಿಗಳನ್ನು ಆಚರಿಸಲು ಮಹಾಸಭಾ ಮುಂದಾಗಿದೆ ಎಂದು ತಿಳಿಸಿದರು.

ಶಾಸಕ ಜಿ.ಬಿ.ಜ್ಯೋತಿಗಣೇಶ್, ನಮ್ಮಲ್ಲಿಯೇ ಸಣ್ಣ–ಪುಟ್ಟ ಸಂಘಟನೆಗಳು ಹುಟ್ಟಿಕೊಂಡು ಶಕ್ತಿ ಕುಂದಿದೆ.

ಮಹಾಸಭಾದ ಅಡಿಯಲ್ಲಿ ನಾವೆಲ್ಲರ ಒಗ್ಗೂಡಿ ಕೆಲಸ ಮಾಡಬೇಕು. ರಾಜಕೀಯ ಕ್ಷೇತ್ರ ಬಿಟ್ಟು, ಉಳಿದೆಡೆಗಳಲ್ಲಿ ಪ್ರಗತಿ ಸಾಧಿಸಲು ಒಗ್ಗಟ್ಟು ಅನಿವಾರ್ಯ ಎಂದು ಹೇಳಿದರು. ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ಡಾ.ಎಸ್. ಪರಮೇಶ್, ಜಿಲ್ಲೆಯಲ್ಲಿ ವೀರಶೈವ ಲಿಂಗಾಯತರು 7ರಿಂದ 8 ಲಕ್ಷ ಇದ್ದಾರೆ.

ಆದರೆ ಮಹಾಸಭಾದಲ್ಲಿ ಸದಸ್ಯರಾಗಿರುವುದು ಕೇವಲ 2 ಸಾವಿರ ಮಾತ್ರ. ಮುಂದಿನ ಒಂದು ವರ್ಷದಲ್ಲಿ ಪ್ರತಿ ಮನೆಯಿಂದ ಒಬ್ಬರನ್ನು ಸದಸ್ಯರನ್ನಾಗಿ ನೋಂದಾಯಿಸಲಾಗುವುದು ಎಂದು ಭರವಸೆ ನೀಡಿದರು.


ಅಂತರಾಳದಿಂದ...
EDITORIAL

# ರೆಪೊ ದರ ಕಡಿತ: ಅನಿಶ್ಚಿತತೆ ಎದುರಿಸುವತ್ತ ಆರ್‌ಬಿಐ ಚಿತ್ತ

ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ನಿರೀಕ್ಷೆಯಂತೆ ರೆಪೊ ದರವನ್ನು ಶೇಕಡ 0.25ರಷ್ಟು ಕಡಿತ ಮಾಡಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ನಡೆದ ಎಂಪಿಸಿಯ ಮೊದಲ ಸಭೆಯಲ್ಲಿಯೇ ರೆಪೊ ದರ ಇಳಿಕೆಗೆ ಸರ್ವಾನುಮತದ ಒಪ್ಪಿಗೆ ನೀಡಲಾಗಿದೆ. ತಟಸ್ಥ ನಿಲುವನ್ನು ಬಿಟ್ಟುಕೊಟ್ಟಿರುವ ಆರ್‌ಬಿಐ, ಅದಕ್ಕೆ ಬದಲಾಗಿ ಹೊಂದಾಣಿಕೆಗೆ ಇರುವ ಅವಕಾಶಗಳನ್ನು ಬಳಸಿಕೊಳ್ಳಲು ನಿರ್ಧರಿಸಿರುವುದು ಕೂಡ ಮಹತ್ವದ ವಿದ್ಯಮಾನ. ಸದ್ಯದ ಭವಿಷ್ಯದಲ್ಲಿ ರೆಪೊ ದರ ಮತ್ತೆ ಏರಿಕೆ ಆಗುವುದಿಲ್ಲ ಎಂಬುದರ ಸ್ಪಷ್ಟ ಸಂದೇಶವೂ ಇದಾಗಿದೆ. ಆರ್‌ಬಿಐ ನಿಲುವಿನಲ್ಲಿ ಆಗಿರುವ ಈ ಬದಲಾವಣೆಯು ಆರ್ಥಿಕ ಪ್ರಗತಿಯ ದಾರಿಗಳತ್ತ ಅದು ಕಣ್ಣು ನೆಟ್ಟಿರುವುದಕ್ಕೆ ದ್ಯೋತಕ. ಸತತ ಎರಡನೇ ಅವಧಿಗೆ ರೆಪೊ ದರವನ್ನು ಕಡಿತ ಮಾಡಲಾಗಿದೆ. ಈ ವರ್ಷದ ಫೆಬ್ರುವರಿಯಲ್ಲೂ ದರ ಕಡಿತ ಮಾಡಲಾಗಿತ್ತು. ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ, ಆಡಿರುವ ಮಾತು, ಮುಂದಿನ ದಿನಗಳಲ್ಲೂ ಕೇಂದ್ರೀಯ ಬ್ಯಾಂಕ್ ದರ ಕಡಿತ ಮಾಡಲು ಹಿಂಜರಿಯುವುದಿಲ್ಲ ಎಂಬ ಮುನ್ಸೂಚನೆಯನ್ನು ನೀಡುತ್ತದೆ. ರೆಪೊ ದರ ಕಡಿತದಿಂದ ಸಾಲ ಮರುಪಾವತಿ ಕಂತಿನ ಪ್ರಮಾಣವೂ ಕಡಿಮೆ ಆಗಲಿದ್ದು,



ಹಣಕಾಸು ಸಂಸ್ಥೆಗಳು ಆರ್‌ಬಿಐನಿಂದ ಸಾಲ ಪಡೆಯುವ ಪ್ರಮಾಣವು ಹೆಚ್ಚಲಿದೆ. ಸಾಲದ ಮೇಲಿನ ಬಡ್ಡಿಯ ಹೊರೆ ಕಡಿಮೆ ಆಗುವುದರಿಂದ ಆರ್ಥಿಕ ಚಟುವಟಿಕೆಗಳು ಗರಿಗೆದರಲಿದ್ದು, ಪ್ರಗತಿಯ ಚಕ್ರ, ವೇಗ ಪಡೆದು ಕೊಳ್ಳಲಿದೆ ಎಂದು ನಿರೀಕ್ಷಿಸಲಾಗಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಾರಿರುವ ಪ್ರತಿಸುಂಕ ಸಮರದಿಂದಾಗಿ ಜಾಗತಿಕ ಅರ್ಥವ್ಯವಸ್ಥೆ ಹಾಗೂ ಭಾರತದ ಆರ್ಥಿಕತೆಯ ಬೆಳವಣಿಗೆ ಮೇಲೆ ಬೀರಬಹುದಾದ ಪರಿಣಾಮಗಳೇ ಆರ್‌ಬಿಐನ ಬದಲಾದ ನಿಲುವಿಗೆ ಕಾರಣ. 2025–26ನೇ ಸಾಲಿನ ದೇಶದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಬೆಳವಣಿಗೆ ದರವನ್ನೂ ಎಂಪಿಸಿ ಪರಿಷ್ಕರಿಸಿದೆ. ಫೆಬ್ರುವರಿಯಲ್ಲಿ ನಡೆದ ಸಭೆಯಲ್ಲಿ ಜಿಡಿಪಿ ಬೆಳವಣಿಗೆ ದರ ಶೇ 6.7ರಷ್ಟು ಇರಲಿದೆ ಎಂದು ಅಂದಾಜಿಸಲಾಗಿತ್ತು. ಈಗ ಅದರ ಪ್ರಮಾಣವನ್ನು ಶೇ 6.5ಕ್ಕೆ ಪರಿಷ್ಕರಿಸಲಾಗಿದೆ. ವ್ಯಾಪಾರ ಸಂಘರ್ಷ ಮತ್ತು ಅದು ಬಂಡವಾಳ ಹೂಡಿಕೆ ಹಾಗೂ ಹಣ ವ್ಯಯ ಮಾಡುವ ನಿರ್ಧಾರದ ಮೇಲೆ ಬೀರಬಹುದಾದ ಪ್ರಭಾವವೇ ಇದಕ್ಕೆ ಕಾರಣ. ಪರಿಷ್ಕೃತ ಬೆಳವಣಿಗೆ ದರ ಕೂಡ ಹೆಚ್ಚಿನ ಆಶಾವಾದದಿಂದ ಕೂಡಿದ್ದು, ಈ ಗುರಿಯನ್ನು ಮುಟ್ಟುವುದೂ ಸದ್ಯದ ಸನ್ನಿವೇಶದಲ್ಲಿ ಸವಾಲಾಗಿದೆ. ಅಮೆರಿಕದೊಂದಿಗೆ ನಡೆದಿರುವ ವ್ಯಾಪಾರ ವಹಿವಾಟಿನ ಸ್ವರೂಪದ ಚರ್ಚೆ, ಪ್ರತಿಸುಂಕದಿಂದ ರಫ್ತು ಕ್ಷೇತ್ರದಲ್ಲಾಗುವ ಬದಲಾವಣೆ ಮತ್ತು ಬೆಲೆ ಸಮರಕ್ಕೆ ಭಾರತೀಯ ರಫ್ತು ಉದ್ಯಮ ಕ್ಷೇತ್ರದ ಹೊಂದಿಕೊಳ್ಳುವ ಶಕ್ತಿ– ಈ ಅಂಶಗಳು ಭವಿಷ್ಯದ ಆರ್ಥಿಕ ಬೆಳವಣಿಗೆ ದರದ ಮೇಲೆ ದೊಡ್ಡ ಪ್ರಭಾವವನ್ನು ಬೀರಲಿವೆ ಎಂಬುದು ಆರ್‌ಬಿಐ ಗವರ್ನರ್ ಹೇಳಿಕೆಯಲ್ಲಿ ಢಾಳಾಗಿ ಪ್ರತಿಬಿಂಬಿತವಾಗಿದೆ. ಮೇಲಿನ ಮೂರೂ ಅಂಶಗಳು ಯಾವ ರೀತಿಯಲ್ಲಿ ಪರಿಣಾಮ ಬೀರಬಹುದು ಎಂಬುದನ್ನು ಈಗಲೇ ಊಹಿಸುವುದು ಅವಸರದ ಕ್ರಮ ಆಗುತ್ತದೆ. ಮುಂದೆ ಎದುರಾಗಬಹುದಾದ ಕೆಟ್ಟ ಸನ್ನಿವೇಶಗಳ ಸವಾಲನ್ನು ಮೆಟ್ಟಿ ನಿಲ್ಲಬಲ್ಲ ಸುರಕ್ಷಿತ ನೀತಿಗಳು ಇಂದಿನ ಅಗತ್ಯವಾಗಿವೆ. ಚೀನಾ ಹೊರತುಪಡಿಸಿ ಉಳಿದ ದೇಶಗಳಿಂದ ಆಮದು ಆಗುವ ಸರಕುಗಳ ಮೇಲೆ ಪ್ರತಿಸುಂಕ ಆಕರಣೆಯನ್ನು ಟ್ರಂಪ್ ಅವರು 90 ದಿನಗಳವರೆಗೆ ತಡೆಹಿಡಿದಿರುವುದು ನಿಜವಾದರೂ ಪ್ರತಿಸುಂಕದ ಹಿಡಿತದಿಂದ ಜಗತ್ತು ಇನ್ನೂ ಹೊರಬಂದಿಲ್ಲ. ಎಲ್ಲಾ ರಾಷ್ಟ್ರಗಳ ಹಣಕಾಸು ನಿರ್ಧಾರಗಳ ಮೇಲೆ ಈ ಅನಿಶ್ಚಿತತೆ ಪ್ರಭಾವ ಬೀರಲಿದೆ. ಅಮೆರಿಕ–ಚೀನಾ ಪ್ರತಿಸುಂಕ ಸಮರ ಕೂಡ ಜಗತ್ತಿನ ಅರ್ಥವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ. ಚಿಲ್ಲರೆ ಹಣದುಬ್ಬರ ಪ್ರಮಾಣವು ಈಗಾಗಲೇ ತಗ್ಗಿದ್ದು, ಪ್ರಸಕ್ತ ಹಣಕಾಸು ವರ್ಷದಲ್ಲಿ ಅದು ಶೇ 4.2ರಿಂದ ಶೇ 4ಕ್ಕೆ ಇಳಿಯಲಿದೆ ಎಂದೂ ಅಂದಾಜಿಸಲಾಗಿದೆ. ಮುಂದಿನ ದಿನಗಳಲ್ಲಿ ರೆಪೊ ದರವನ್ನು ಇನ್ನಷ್ಟು ಕಡಿತಗೊಳಿಸಲು ಇದರಿಂದ ಸಾಧ್ಯವಾಗಬಹುದು. ಆದರೆ, ಆರ್‌ಬಿಐನ ಭವಿಷ್ಯದ ನಿರ್ಧಾರಗಳು ಜಾಗತಿಕ ವಿದ್ಯಮಾನವನ್ನೇ ಅವಲಂಬಿಸಿವೆ.





# ರಾಮಾಯಣ

## ಸಿದ್ಧಾರ್ಥನು ಕೈಕೇಯಾದೇವಿಗೆ ಹೇಳಿದ ನೀತಿ

• ಹಿಂದಿನ ಸಂಚಿಕೆಯಿಂದ **78ನೆಯ ಅಧ್ಯಾಯ**

ಆಮೇಲೆ ದಶರಥರಾಯನು ತನ್ನ ಮನಸ್ಸಿನಲ್ಲಿದ್ದ ದುಃಖವನ್ನು ಸಹಿಸಿಕೊಂಡು ಕೈಕೇಯಾದೇವಿಗೆ ಕೊಟ್ಟ ಮಾತಿಗೆ ತಪ್ಪಬಾರದೆಂದು ಸುಮಂತ್ರನನ್ನು ಕುರಿತು ಹೇಳಿದನು: ಎಲೈ ಸುಮಂತ್ರ, ಶ್ರೀರಾಮನು ವನಕ್ಕೆ ತೆರಳುತ್ತಿದ್ದಾನೆ. ಆತನ ಜೊತೆಯಲ್ಲಿ ರಥ ಗಜ ತುರಗ ಪದಾತಿಗಳೆಂಬ ಚತುರಂಗಬಲವನ್ನು ಕಳುಹಿಸು. ಶ್ರೀರಾಮನ ಊಳಿಗದವರು, ಆಶ್ರಿತಜನರು, ಆತನಲ್ಲಿ ಭಕ್ತಿಯುಳ್ಳ ಜನರು ಮೊದಲಾದವರಿಗೆ ಬೇಕಾದ ವಸ್ತುಗಳನ್ನು ಕೊಟ್ಟು ಅವರನ್ನು ಆತನ ಹಿಂದೆ ಕಳುಹಿಸು. ಪುರಜನಗಳು ತಮ್ಮ ರಥಗಳನ್ನು ಸಜ್ಜುಮಾಡಿಕೊಂಡು ಆತನ ಹಿಂದೆ ಹೋಗಲಿ. ಅರಣ್ಯದಲ್ಲಿ ಸಂಚರಿಸುವ ಬೇಟೆಗಾರರಾದ ಕಿರಾತರನ್ನು ವನದಲ್ಲಿ ಮಾರ್ಗಗಳನ್ನು ತೋರಿಸುವುದಕ್ಕೆ ಆತನ ಹಿಂದೆ ಕಳುಹಿಸು. ನನ್ನ ಅರಮನೆಯಲ್ಲಿರುವ ಉತ್ತಮವಾದ ಆಯುಧಗಳನ್ನು ಶ್ರೀರಾಮನ ವಶಕ್ಕೆ ತರಿಸಿಕೊಡು. ಆತನು ವನದಲ್ಲಿರುವ ದುಷ್ಟಮೃಗಗಳನ್ನೂ ಕಾಡಾನೆಗಳನ್ನೂ ನಿವಾರಿಸಿಕೊಂಡು ವನದಲ್ಲಿರುವ ಹಣ್ಣುಹಂಪಲು ಜೇನುತುಪ್ಪ ಮೊದಲಾದ ಭೋಜ್ಯವಸ್ತುಗಳನ್ನು ಆಹಾರ ಮಾಡಿಕೊಂಡು ಪುಣ್ಯನದಿಗಳನ್ನು . – ನೋಡಿಕೊಂಡು ಸುಖವಾಗಿರಲಿ. ಭಂಡಾರಗಳೆಲ್ಲಿರುವ, ನಮ್ಮ ಅರಮನೆಯ ಧಾನ್ಯಗಳನ್ನು ಕಳುಹಿಸು. ಶ್ರೀರಾಮನು ವನದಲ್ಲಿ ಪ್ರಯಾಣಮಾಡುವಾಗ ದೇವತಾರ್ಚನೆ ಅತಿಥಿಸತ್ಕಾರ ಯಾಗಾದಿಗಳನ್ನು ಮಾಡಿಕೊಂಡು ಯಥೇಷ್ಟವಾದ ದಕ್ಷಿಣೆಗಳನ್ನು ಕೊಟ್ಟು ಋಷಿಗಳೊಡನೆ ಸುಖವಾಗಿರುವಹಾಗೆಯೂ ಅಯೋಧ್ಯಾಪಟ್ಟಣವನ್ನು ನೆನೆಯದ ಹಾಗೆಯೂ ಬೇಕಾದ ವಸ್ತುಗಳನ್ನು ಕಳುಹಿಸು. ಭರತನು ಅಯೋಧ್ಯಾಪಟ್ಟಣವನ್ನು ಪರಿಪಾಲಿಸಲಿ.

ಶ್ರೀರಾಮನು ಯಾವ ವಸ್ತುವಿನ ಕೊರತೆಯೂ ಇಲ್ಲದಂತೆ ವನವಾಸವನ್ನು ಹದಿನಾಲ್ಕು ವರುಷಗಳು ನೆರವೇರಿಸಲಿ! ಎಂದು ಹೇಳಿದನು. ಆ ಮಾತನ್ನು ಕೇಳಿ ಕೈಕೇಯಾದೇವಿಯು ಮನಸ್ಸಿನಲ್ಲಿ ಅತ್ಯಂತ ಭಯಪಟ್ಟು ಮುಖಕಾಂತಿ ಗುಂದಿ ಸ್ವರತಗ್ಗಿ ಅತಿಕೋಪದಿಂದ ದಶರಥರಾಯನನ್ನು ಕುರಿತು ಎಲೈ ರಾಜನೆ, ಅಮೃತರಸವಿಲ್ಲದ ಶೂನ್ಯಭಾಂಡದಂತೆ ಸಮಸ್ತಜನರಹಿತವಾದ ಈ ಅಯೋಧ್ಯಾಪಟ್ಟಣವನ್ನು ಭರತನು ಆಳಿ ಪ್ರಯೋಜನವೇನು!'' ಎಂದು ಲಜ್ಜೆಯನ್ನು ತೊರೆದು ಕರ್ಣಕಠೋರವಾದ ಅನೇಕ ಮಾತುಗಳನ್ನು ನುಡಿದಳು. ದಶರಥರಾಯನು '' ದುಷ್ಟೆ, ನನಗೆ ಅತ್ಯಂತ ದುಃಖಭಾರವನ್ನು ಹೊರಿಸಿ ಶ್ರೀರಾಮನಿಗೆ ಪಟ್ಟಾಭಿಷೇಕಮಾಡುವ ಕಾರ್ಯವನ್ನು ನಿಲ್ಲಿಸಿದೆಯಲ್ಲ! ಎಂದು ಅತ್ಯಂತ ಕೋಪದಿಂದ ನುಡಿದನು. ಆಗ ಕೈಕೇಯಾದೇವಿಯು ಎರಡರಷ್ಟು ಕೋಪಯುಕ್ತಳಾಗಿ ಮಹಾರಾಜ, ಇದೇನು ವ್ಯತ್ಯಾಸವಾಗಿ ಮುಡಿಯುತ್ತಿರುವೆ? ನಿನ್ನ ವಂಶದಲ್ಲಿ ಸಗರಚಕ್ರವರ್ತಿಯು ತನ್ನ ಜ್ಯೇಷ್ಠಪುತ್ರನಾದ ಅಸಮಂಜನನ್ನು ತೊರೆದು ಕಿರಿಯ ಕುಮಾರನಿಗೆ ಪಟ್ಟವನ್ನು ಕಟ್ಟಲಿಲ್ಲವೆ? ಈ ಪದ್ಧತಿ ನಿನ್ನಲ್ಲಿಯೇ ಉಂಟಾಯಿತೆ ? ಎಂದಳು. ಆ ಬಳಿಕ ದಶರಥರಾಯನು ಅತಿಕೋಪದಿಂದ ನಿನಗೆ ಧಿಕ್ಕಾರ'' ಎಂದು ನುಡಿದು ಸುಮ್ಮನಾದನು. ಅಲ್ಲಿದ್ದ ಪರಿಜನರೆಲ್ಲರೂ ಲಜ್ಜೆ ಪಡುತ್ತಿದ್ದರು.

ಆ ಸಮಯದಲ್ಲಿ ದಶರಥರಾಯನ ವಂಶಪರಂಪರೆಯಿಂದ ಬಂದ ಸಿದ್ಧಾರ್ಥನೆಂಬ ಪ್ರಧಾನಿಯು ಕೈಕೇಯಾದೇವಿಯನ್ನು ಕುರಿತು ಎಲೈ ದೇವಿಯ್ಕೆ ನೀನು ಸಗರಚಕ್ರವರ್ತಿಯ ದೃಷ್ಟಾಂತವನ್ನು ಹೇಳಿ ಶ್ರೀರಾಮನನ್ನು ವನಕ್ಕೆ ಕಳುಹಿಸಬಹುದೆಂದು ಹೇಳುತ್ತೀಯಲ್ಲ! ಸಗರಚಕ್ರವರ್ತಿಯ ಜ್ಯೇಷ್ಠಪುತ್ರನಾದ ಅಸಮಂಜನಂತೆ ರಾಮನು ದುರುಳನಲ್ಲ. ಅಸಮಂಜನು ಆಡುವ ಮಕ್ಕಳನ್ನು ಹಿಡಿತಂದು ಸರಯೂನದಿ ತೀರದಲ್ಲಿ ಕಾಲುಗಳನ್ನು ಹಿಡಿದು ತಿರುಗಿಸಿ ನದಿಯಲ್ಲಿ ಹಾಕಿ ನಗುತ್ತಿದ್ದನು.

ಅಂಥ ದುರುಳತನವನ್ನು ಕಂಡು ಪಟ್ಟಣದಲ್ಲಿದ್ದ ಸಮಸ್ತ ಪ್ರಜೆಗಳೂ ಸಗರಚಕ್ರವರ್ತಿಗೆ ಮೊರೆಯಿಟ್ಟು ನಿನಗೆ ಪ್ರಜೆಗಳುಬೇಕೋ ಅಥವಾ ಆ ದುಷ್ಟಮಗನಿರಬೇಕೊ? ಎಂದು ಕೇಳಿದರು. ಆಗ ಆತನು ತನ್ನ ಮಗನಾದ ಅಸಮಂಜನಿಂದ ಬಂದ ಉಪದ್ರವವೇನೆಂದು ಕೇಳಿದನು. ಅವರು ಅಸಮಂಜನು ನಮ್ಮ ಮಕ್ಕಳ ಕಾಲುಗಳನ್ನು ಹಿಡಿದು ತಿರುಗಿಸಿ ಕಂಗೆಡಿಸಿ ಸರಯೂನದಿಯಲ್ಲಿ ಹಾಕಿ ಅವರು ಮುಳುಗಿಹೋದರೆ ತಡಿಯಲ್ಲಿ ನಿಂತುಕೊಂಡು ನಗುತ್ತಾನೆ. ಈ ರೀತಿಯಲ್ಲಿ ಅನೇಕ ಶಿಶುಗಳನ್ನು ಸರಿಯೂನದಿಯಲ್ಲಿ ಹಾಕಿ ಕೊಂದನು. ನಾವು ಹೇಗೆ ಈ ದುಃಖವನ್ನು ಸಹಿಸುವುದು? ಎಂದು ನುಡಿದರು.

**ಮುಂದುವರಿಯುವುದು...**

# ದವನದ ಹುಣ್ಣಿಮೆಯ ಮಹತ್ವ

• **ಗಿರಿಜಾ.ಎಸ್.ದೇಶಪಾಂಡೆ**

**ಪೂರ್ಣಿಮಾ ಸರ್ವದೇವಾನಾಂ**
**ಶ್ರೇಷ್ಟಾ ದವನ ಕಾರ್ಪಣೇ**

ಎನ್ನುವಂತೆ ಪೌರ್ಣಿಮೆಯಂದು ಸಮಸ್ತದೇವತೆಗಳಿಗೂ ದವನದಿಂದ ಪೂಜಿಸುವದು ಅತಿಪ್ರಿಯವಾಗಿದೆ. ಈ ಹುಣ್ಣಿಮೆಯನ್ನು ಅಕ್ಕನ ಹುಣ್ಣಿಮೆ, ಚಿತ್ತಾ ಪೌರ್ಣಿಮೆಯಂದು ಕರೆಯುತ್ತಾರೆ. ಹಿಂದೂ ಪಂಚಾಂಗದ ಪ್ರಕಾರ ಹುಣ್ಣಿಮೆಯ ದಿನ ಇರುವ ನಕ್ಷತ್ರದ ಹೆಸರನ್ನು ಆಯಾಮಾಸದ ಹೆಸರುಗಳನ್ನಾಗಿ ಕರೆಯುತ್ತಾರೆ. ಚಿತ್ತಾ ನಕ್ಷತ್ರ ಇರುವ ಹುಣ್ಣಿಮೆಯ ಹಿಂದಿನ ಹದಿನೈದು ದಿನ ಮುಂದಿನ 15 ದಿನ ಸೇರಿ ಚೈತ್ರ ಮಾಸವೆಂದು ಕರೆಯಲಾಗುತ್ತದೆ. ಬೆಂಗಳೂರಿನಲ್ಲಿ ಆ ದಿನದಂದು ಕರಗ ಉತ್ಸವವನ್ನು ಪ್ರತಿಯೊಬ್ಬ ಮನುಜನ ಮನಸ್ಸಿನಲ್ಲಿ ಅಚ್ಚಳಿಯದೇ ಆ ಉತ್ಸವದ ನೆನಪುಗಳು ಕರಗದೇ ಇರಲಿ ಎಂದು ಬಹು ವಿಜೃಂಭಣೆಯಿಂದ ಉತ್ಸವವನ್ನು ಆಚರಿಸಲಾಗುತ್ತದೆ.

ಈ ದಿನದಂದೇ ಭಗವಾನ್ ಶ್ರೀ ಹನುಮನು ಅಂಜನಾದೇವಿಯಲ್ಲಿ ಅವತರಿಸಿದ ದಿನವಾಗಿದ್ದು ಆ ದಿನದಂದು ಹನುಮಜಯಂತಿ ಆಚರಿಸಿ ವಿಶೇಷ ಪೂಜೆಗಳಿಂದ ಹನುಮನನ್ನು ಆರಾಧಿಸುತ್ತಾರೆ.

**ದವನದ ಹುಣ್ಣಿಮೆಯ ವಿಶೇಷ:** ಕೈಲಾಸದಲ್ಲಿ ಪರಮೇಶ್ವರನು ತನ್ನ ಸತಿಯನ್ನು ಕಳೆದುಕೊಂಡು ದುಃಖತಪ್ತನಾಗಿ ಹಿಮಾಲಯ ಪರ್ವತದಲ್ಲಿ ತಪಸ್ಸು ಮಾಡುತ್ತಿ ರುವ ಸಂದರ್ಭದಲ್ಲಿ ಲೋಕದಲ್ಲಿ ಹಾಹಾಕಾರ ಉಂಟಾಯಿತು.

ಆಗ ಮನ್ಮಥನು ಇತರ ದೇವತೆಗಳಿಂದ ಅಜ್ಞಪ್ತನಾಗಿ ತನ್ನ ಪಂಚ ಭಾಣಗಳನ್ನು ಈಶ್ವರನ ಮೇಲೆ ಬಿಡಲಾಗಿ ಅದರಿಂದ ತಪೋಭಂಗವಾಗಿ ಮೂರನೇಯ ಕಣ್ಣಿನಿಂದ ಶಿವನು ಮನ್ಮಥನನ್ನು ಸುಟ್ಟುಹಾಕಿದನು. ಪತಿ ಮನ್ಮಥನ ದಮನದಿಂದ ಉಂಟಾದ ಶೋಕದಿಂದ ರತಿದೇವಿಯು ಪತಿಯ ಚಿತಾಭಸ್ಮದ ಹತ್ತಿರ ರೋಧಿಸತೊಡಗಿದಳು. ಹಾಗೆಯೇ ಪರಮೇಶ್ವರನನ್ನು ಪರಿಪರಿಯಾಗಿ ಪ್ರಾರ್ಥಿಸಿದಳು.ಆಗ ಪರಮೇಶ್ವರನು ಆಕೆಯನ್ನು ಸಂತೈಸಿ ಮುಂದೆ ಪ್ರದ್ಯುಮ್ನನನ್ನು ನಿನ್ನ ಪತಿಯನ್ನಾಗಿ ಸೃಷ್ಟಿಸುವೆನು ನೀನು ಅದುವರೆಗೂ ಧ್ಯಾನದಲ್ಲಿರು ಎಂದು ಅಭಯನೀಡಿದನು. ರತಿದೇವಿಯು ಪತಿಯ ಭಸ್ಮದ



ಮುಂದೆ ಕಣ್ಣೀರು ಹಾಕಿದಾಗ ಒಂದು ಗಿಡ ಪ್ರತ್ಯಕ್ಷವಾಯಿತು. ಅದುವೇ ದಮನ. ದಮನವೇ ಆಡುಭಾಷೆಯಲ್ಲಿ ದವನ ವೆಂದಾಯಿತು. ಪರಮೇಶ್ವರನಿಂದ ದಮನ ಹೊಂದಿದ ಕಾಮನ ಭಸ್ಮದಿಂದ ಜನ್ಮತಾಳಿ ರತಿಯ ಕಣ್ಣೀರಿನಿಂದ ಬೆಳೆದದ್ದು ದವನ. ಈ ದವನದಿಂದ ಪಾಲ್ಗುಣ ಮಾಸದಿಂದ ಆರಂಭಿಸಿ ಚೈತ್ರಮಾಸ ಪೌರ್ಣಿಮೆ ತಿಥಿಯವರೆಗೂ ದೇವತೆಗಳನ್ನು ದವನದಿಂದ ಪೂಜಿಸುವದರಿಂದ ಪರಮೇಶ್ವರನು ಸಂತುಷ್ಟನಾಗುವನೆಂಬ ವರವಿದೆ. ಅಂದಿನ ದಿನದಂದು ಬ್ರಾಹ್ಮಣರಿಗೆ ಚಿತ್ರಾನ್ನ ಪ್ರಧಾನವಾಗಿರುವದರಿಂದ ಭೋಜನ ಮಾಡಿಸಿ ಬಣ್ಣಬಣ್ಣದ ವಸ್ತ್ರಗಳನ್ನು ದಾನ ಮಾಡಬೇಕು.

ಇದರಿಂದ ಸೌಭಾಗ್ಯ ಉಂಟಾಗುವದು ಎಂಬ ಪ್ರತೀತಿಯಿದೆ ಅದಲ್ಲದೇ ದಾರಿದ್ರ್ಯ ನಾಶ ವಾಗುವದು. ಚೈತ್ರಮಾಸದಲ್ಲಿ ಬಿಸಿಲಿನ ಧಗೆಯಿರುವುದರಿಂದ ಉಯ್ಯಾಲೆ ಗೌರಿಗೆ ಕೋಸಂಬರಿ, ಪಾನಕ ನೇವ್ಯದ್ಯ ಮಾಡುವ ಪದ್ಧತಿಯಿದೆ ಅಲ್ಲದೇ ಮೊಸರನ್ನಕ್ಕೆ ಅಷ್ಟೇ ಪ್ರಾಧಾನ್ಯತೆ ಇದೆ.

ಅಂದಿನ ದಿನ ಮಾಡುವ ಪೂಜೆ, ದಾನ, ಸ್ನಾನಾದಿಗಳು ಅತ್ಯಂತ ಫಲಪ್ರದವಾಗಿದ್ದು ಫಲವು ಹತ್ತುಪಟ್ಟು ಹೆಚ್ಚಿನದಾಗಿರುತ್ತದೆ. ಫಾಲ್ಗುಣಮಾಸ ಪೌರ್ಣಿಮೆಯಿಂದ ಚೈತ್ರಮಾಸದ ಪೌರ್ಣಿಮೆಯವರೆಗೂ ಮಾಸಪೂರ್ತಿ ನದಿಸ್ನಾನ ಶ್ರೇಷ್ಟ.ಇಲ್ಲವಾದರೆ ಪುಷ್ಕರಣಿಯಲ್ಲಾದರೂ 3 ದಿನಗಳ ಸ್ನಾನ ಮಹತ್ವದ್ದು ಎಂದು ಹೇಳಲಾಗುತ್ತದೆ. ಈ ಮಾಸದಲ್ಲಿ ಬಿಸಿಲಿನ ಧಗೆ ಹೆಚ್ಚಿರಲು ಬಾಯಾರಿಕೆ ಹೋಗಲಾಡಿಸಲು ಯಾತ್ರಿಕರಿಗೆ ನೀರು ಕೊಡುವದು ಪ್ರಾಣಿ ಪಕ್ಷಿಗಳಿಗೆ ನೀರುಣಿಸುವದು ಪುಣ್ಯ ಸಂಚಯ ಮಾಡಿಕೊಳ್ಳಬಹುದಾಗಿದೆ.

ದವನವು ಒಳ್ಳೆಯ ಸುವಾಸನೆ ಹೊಂದಿದ್ದು ಸೇವಂತಿಗೆ ಕುಟುಂಬಕ್ಕೆ ಸೇರಿದೆ. ನಾವೂ ಭಗವಂತನಿಗೆ ದವನವನ್ನು ಏರಿಸಿ, ಹನುಮಂತ ದೇವರಿಗೆ ನಮಸ್ಕರಿಸಿ ಆಶೀರ್ವಾದ ಪಡೆಯೋಣ.

**ಸರ್ವೇ ಜನೋ ಸುಖಿನೋ ಭವಂತು.**

# ಸರ್. ಎಂ. ವಿಶ್ವೇಶ್ವರಯ್ಯರವರ 63ನೇ ಪುಣ್ಯಸ್ಮರಣೆ



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಸರ್ ಎಂ. ವಿಶ್ವೇಶ್ವರಯ್ಯನವರು 1861 ಸೆಪ್ಟೆಂಬರ್ 15ರಂದು ಕೋಲಾರ ಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೂಕಿನ ಮುದ್ದೇನ ಹಳ್ಳಿಯಲ್ಲಿ ಜನಿಸಿದರು.ತಂದೆ ಶ್ರೀನಿವಾಸಶಾಸ್ತ್ರಿಗಳು ತಾಯಿ ವೆಂಕಟಲಕ್ಷ್ಮಮ್ಮ. ಸಂಸ್ಕೃತ ವಿದ್ವಾಂಸರಾಗಿದ್ದ ತಂದೆಯವರ ಶಿಸ್ತನ್ನು ಬಾಲ್ಯದಿಂದಲೇ ಸಂಸ್ಕಾರ, ಸದ್ಬುದ್ಧಿ, ಸನ್ಮಾರ್ಗ, ಶಿಸ್ತನ್ನು ಮೈಗೂಡಿಸಿಕೊಂಡ ವಿಶ್ವೇಶ್ವರಯ್ಯನವರು ಪ್ರಾಥಮಿಕದಿಂದ ಹಿಡಿದು ಕಾಲೇಜು ಮಟ್ಟದವರೆಗೂ ಉತ್ತಮ ಗುಣಮಟ್ಟದ ಶಿಕ್ಷಣ ಪಡೆದು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು.

ಸರ್ ಎಂವಿ ಎಂದೊಡನೆ ಅವರು ಮೈಸೂರು ರಾಜ್ಯದಲ್ಲಿ ದೇಶ–ವಿದೇಶಗಳಲ್ಲಿ ಮಾಡಿದ ಮಹಾನ್ ಕಾರ್ಯಗಳು ಸಾಲು– ಸಾಲಾಗಿ ನೆನಪಿಗೆ ಬರುತ್ತವೆ. ಕನ್ನಂಬಾಡಿ ಕಟ್ಟೆ, ಹಿಂದುಸ್ತಾನ್ ಏರ್ ಕ್ರಾಫ್ಟ್ ಫ್ಯಾಕ್ಟರಿ,ಭದ್ರಾವತಿ ಕಬ್ಬಿಣ, ಉಕ್ಕು ಕಾರ್ಖಾನೆ, ಸರ್ಕಾರಿ ಸಾಬೂನು ಕಾರ್ಖಾನೆ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್, ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ವಿಶ್ವವಿದ್ಯಾಲಯ, ಶಿವನಸಮುದ್ರ, ಜೋಗ್ ಜಲಪಾತ ವಿದ್ಯುತ್ ಯೋಜನೆಗಳು, ಮೈಸೂರು ಸಕ್ಕರೆ ಕಾರ್ಖಾನೆ, ಮೈಸೂರು ಸ್ಯಾಂಡಲ್ ಸೋಪ್, ಭಟ್ಕಳ ಬಂದರು, ಬೆಂಗಳೂರು ವಿವಿ ಇಂಜಿನಿಯರಿಂಗ್ ಕಾಲೇಜ್, ಜಯ ಚಾಮರಾಜೇಂದ್ರ ವೃತ್ತಿ ತರಬೇತಿ ಸಂಸ್ಥೆ, ಗ್ವಾಲಿಯರ್ ಟೈಗರ್ ಡ್ಯಾಮ್, ಪುಣೆಯ ಖಡಕ್ ವಾಸ್ಲಾ ಜಲಾಶಯ ಇನ್ನೂ ಹತ್ತು ಹಲವು ಯೋಜನೆಗಳನ್ನು ರೂಪಿಸಿ ಜಾರಿಗೆ ತಂದರು. ಇವರ ಕಾರ್ಯದಕ್ಷತೆ, ದೂರದೃಷ್ಟಿ ಯೋಜನೆಗಳನ್ನು ಬ್ರಿಟೀಷ್ ಸರ್ಕಾರ ಗುರುತಿಸಿ ಕೈಸರ್–ಇ–ಹಿಂದ್ ಎಂಬ ಪ್ರಶಸ್ತಿ ನೀಡಿ ಗೌರವಿಸಿತು. ವಿಶ್ವೇಶ್ವರಯ್ಯನವರು ಸಮಯಕ್ಕೆ ಅತಿ ಹೆಚ್ಚಿನ ಮಹತ್ವ ನೀಡಿದ್ದರು. ನಿರಾಶೆ, ನಕಾರಾತ್ಮಕ ಯೋಚನೆಗಳಿಂದ ದೇಶಕ್ಕೆ ಅಪಾರ ಹಾನಿ ಎಂದು ಅವರು ತಿಳಿದಿದ್ದರು. ಯಾವುದೇ ಕೆಲಸವನ್ನು ಶ್ರದ್ಧೆ, ನಿಷ್ಠೆ, ಪರಿಷ್ಕಾರಗಳಿಂದ ಮಾಡಬೇಕೆನ್ನುವುದು ಅವರ ಅಭಿಮತವಾಗಿತ್ತು. ಪ್ರಾಮಾಣಿಕತೆ, ಆತ್ಮಗೌರವ,ಕಾಯಕ ಶ್ರದ್ಧೆ ಅವರ ಜೀವನದ ಬಹುಮುಖ್ಯ ಸೂತ್ರ ಗಳಾಗಿದ್ದವು.ಮೈಸೂರಿನ ದಿವಾನರಾಗಿ 1918 ರಲ್ಲಿ ತಾವಾಗಿಯೇ ರಾಜೀನಾಮೆ ನೀಡಿ ಸರ್ಕಾರಿ ಕಾರನ್ನು ಉಪಯೋಗಿಸದೇ ಸ್ವಂತ ಕಾರಿನಲ್ಲಿ ಹಿಂದಿರುಗಿದರು. ಸರ್ಕಾರದ ಉದ್ಯೋಗದಿಂದ ನಿವೃತ್ತರಾದ ಮೇಲೆ ಸರ್ಕಾರದ ವಾಹನವನ್ನು ಉಪಯೋಗಿಸುವ ಹಕ್ಕು ನನಗಿಲ್ಲ ಎಂಬುದು ಅವರ ಅಭಿಪ್ರಾಯವಾಗಿತ್ತು.



ಪ್ರತಿಭಾವಂತ ಇಂಜಿನಿಯರ್, ದೂರದೃಷ್ಟಿಯ ರಾಜತಂತ್ರಜ್ಞ, ರಾಷ್ಟ್ರದ ಏಳಿಗೆಗೆ ನಿರಂತರ ಶ್ರಮಿಸಿದ ಶುದ್ಧ ಚೇತನ ವಿಶ್ವೇಶ್ವರಯ್ಯರವರಿಗೆ 1955 ರಲ್ಲಿ ಭಾರತ ಸರ್ಕಾರ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು.

ಇಂತಹ ಮಹಾನ್ ಚೇತನ, ಮಹಾನ್ ಮಾನವತಾವಾದಿ, ಕಾರ್ಯದಕ್ಷತೆಉಳ್ಳ ಸರ್ ಎಂ.ವಿಶ್ವೇಶ್ವರಯ್ಯ ರವರು 1962 ಏಪ್ರಿಲ್ 12ರಂದು ತನ್ನ 101ನೇ ವಯಸ್ಸಿನಲ್ಲಿ ದೇಹತ್ಯಾಗ ಮಾಡಿದರು. ಆದರೆ ಅವರ ಕೊಡುಗೆ ಚಿರಸ್ಮರಣೀಯವಾಗಿವೆ.

ಸರ್ ಎಂ ವಿಶ್ವೇಶ್ವರಯ್ಯರವರನ್ನು ಭಾರತೀಯರಾದ ನಾವುಗಳೆಲ್ಲರೂ ಅವರ 63ನೇ ವರ್ಷದ ಪುಣ್ಯದಿನವಾದ ಇಂದು ಸನ್ಮಾನ್ಯರನ್ನು ನೆನೆಯುತ್ತಾ ಕನಿಷ್ಠಪಕ್ಷ ಅವರ ಕಾರ್ಯದಕ್ಷತೆ, ಆದರ್ಶಗಳನ್ನು ಪಾಲಿಸಿದ್ದೇ ಆದರೆ ಅವರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರಕುತ್ತದೆ, ದೊರೆಯಲೆಂದು ಆ ಭಗವಂತನಲ್ಲಿ ಪ್ರಾರ್ಥಿಸೋಣ.

# ಪ್ರತಿ ಐವರು ಭಾರತೀಯರಲ್ಲಿ ಒಬ್ಬರು ವಿಟಮಿನ್ ಡಿ ಕೊರತೆಯಿಂದ ಬಳಲುತ್ತಿದ್ದಾರೆ

ಭಾರತೀಯರು ಗುಪ್ತ ಆರೋಗ್ಯ ಸಮಸ್ಯೆಯ ಸಂಕಷ್ಟದಲ್ಲಿ ಸಿಲುಕಿಹಾಕಿಕೊಂಡಿದ್ದಾರೆಯೇ? ಇತ್ತೀಚಿನ ಅಧ್ಯಯನವೊಂದರ ಪ್ರಕಾರ, ಪ್ರತಿ ಐದು ಭಾರತೀಯರಲ್ಲಿ ಒಬ್ಬರು ವಿಟಮಿನ್ ಡಿ. ಕೊರತೆಯಿಂದ ಬಳಲುತ್ತಿದ್ದಾರೆ ಎಂದು ತಿಳಿದುಬಂದಿದೆ. ಜನರ ಜೀವನಶೈಲಿ, ಆಹಾರ ಪದ್ಧತಿ ಮತ್ತು ನೀತಿ ನಿರೂಪಣೆಯಲ್ಲಿನ ನ್ಯೂನತೆಗಳಿಂದಾಗಿ ಆರೋಗ್ಯ ಸಮಸ್ಯೆಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿ ಕಾಡುತ್ತಿವೆ ಎಂಬ ಆತಂಕಕಾರಿ ಅಂಕಿಅಂಶಗಳನ್ನು ಅಧ್ಯಯನವು ತೋರಿಸಿದೆ. ಭಾರತೀಯ ಅಂತಾರಾಷ್ಟ್ರೀಯ ಆರ್ಥಿಕ ಸಂಬಂಧಗಳ ಸಂಶೋಧನಾ ಮಂಡಳಿ, ಫೌಂಡೇಶನ್ ನಡೆಸಿದ ಸಂಶೋಧನೆ ಪ್ರಕಾರ, ದೇಶದ ನೀತಿ ನಿರೂಪಕರು, ಆರೋಗ್ಯ ವೃತ್ತಿಪರರು ಮತ್ತು ಶಿಕ್ಷಣ ತಜ್ಞರು ಸೇರಿದಂತೆ 300ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಈ ವಿಷಯ ಬಹಿರಂಗವಾಗಿದೆ.


ಭಾರತ ದೇಶದ ಪೂರ್ವ ಪ್ರದೇಶದಲ್ಲಿ ವಿಟಮಿನ್ ಡಿ ಕೊರತೆಯು ಹೆಚ್ಚಾಗಿದೆ. ಹದಿಹರೆಯದವರು, ಶಿಶುಗಳು, ವೃದ್ಧರು ಮತ್ತು ಎಲ್ಲಾ ವಯೋಮಾನದ ಮಹಿಳೆಯರು ವಿಟಮಿನ್ ಡಿ ಕೊರತೆಯಿಂದ ಹೆಚ್ಚು ಬಳಲುತ್ತಿದ್ದಾರೆ. ನಗರ ಪ್ರದೇಶದ ಜನರ ಜೀವನಶೈಲಿ ಮತ್ತು ಸೂರ್ಯನ ಬೆಳಕಿಗೆ ಸೀಮಿತ ಒಡ್ಡಿಕೊಳ್ಳುವಿಕೆಯಿಂದಾಗಿ, ಗ್ರಾಮೀಣ ಪ್ರದೇಶದವರಿಗಿಂತ ಕಾಯಿಲೆಗಳಿಗೆ ಹೆಚ್ಚಾಗಿ ಒಳಗಾಗುತ್ತಿದ್ದಾರೆ.

ವಿಟಮಿನ್ ಡಿ. ಕೊರತೆಯು ರಿಕೆಟ್ಸ್, ಆಸ್ಟಿಯೋಮಲೇಶಿಯಾದಂತಹ ಅಸ್ಥಿಪಂಜರದ ಅಸ್ವಸ್ಥತೆಗಳನ್ನು ಮೀರಿ ಬೆಳೆಯುತ್ತದೆ ಎಂದು ತಜ್ಞರು ಎಚ್ಚರಿಸಿದ್ದಾರೆ. ಇದು ಸ್ನಾಯು ದೌರ್ಬಲ್ಯ, ಖಿನ್ನತೆ, ಹೃದಯ ಸಂಬಂಧಿ ಕಾಯಿಲೆಗಳು, ಟೈಪ್ 2 ಮಧುಮೇಹ ಮತ್ತು ಕೆಲವು ಕ್ಯಾನ್ಸರ್‌ಗೆ ಕಾರಣವಾಗುತ್ತದೆ.

**ರಾಜ್ಯದಲ್ಲಿ ತಾಪಮಾನ ಹೆಚ್ಚಳ:** ಜನರಲ್ಲಿ ಹೆಚ್ಚುತ್ತಿದೆ ಅಲರ್ಜಿ, ವಿಟಮಿನ್ ಡಿ ಕೊರತೆ ಸಮಸ್ಯೆ

ವಿಟಮಿನ್ ಡಿ ಕೊರತೆಯು ಲಕ್ಷಾಂತರ ಜನರನ್ನು ಬಾಧಿಸುವ ಮೌನ ಸಾಂಕ್ರಾಮಿಕ ರೋಗವಾಗಿದೆ, ಆದರೆ ಹೆಚ್ಚಾಗಿ ಜನರು ಇದನ್ನು ಕಡೆಗಣಿಸುತ್ತಾರೆ. ಇದರ ಪರಿಣಾಮಗಳು ದುರ್ಬಲ ಮೂಳೆಗಳನ್ನು ಮೀರಿ ವಿಸ್ತರಿಸುತ್ತವೆ. ಆರೋಗ್ಯ ವ್ಯವಸ್ಥೆಯನ್ನು ಒತ್ತಡಕ್ಕೆ ಒಳಪಡಿಸುತ್ತದೆ.

ನಮ್ಮ ರಾಷ್ಟ್ರೀಯ ಆರೋಗ್ಯ ಗುರಿಗಳನ್ನು ದುರ್ಬಲಗೊಳಿಸುತ್ತದೆ ಎಂದು ಆಕಾಶ್ ಹೆಲ್ತ್‌ಕೇರ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಅಧ್ಯಯನದ ಸಹ–ಲೇಖಕ ಡಾ. ಆಶಿಶ್ ಚೌಧರಿ ಹೇಳುತ್ತಾರೆ. ಬಿಕ್ಕಟ್ಟನ್ನು ಪರಿಹರಿಸಲು ಹಲವಾರು ವ್ಯವಸ್ಥಿತ ಅಡೆತಡೆಗಳನ್ನು ವರದಿಯು ಗುರುತಿಸುತ್ತದೆ. ಆರೋಗ್ಯ ಕೇಂದ್ರಗಳು, ಆಸ್ಪತ್ರೆಗಳಲ್ಲಿ ಹೆಚ್ಚಿನ ಪರೀಕ್ಷಾ ವೆಚ್ಚಗಳು, ಆರೋಗ್ಯ ಪೂರಕಗಳ ಮೇಲಿನ ಶೇಕಡಾ 18 ರಷ್ಟು ಜಿಎಸ್‌ಟಿಯು ರೋಗನಿರ್ಣಯ, ಚಿಕಿತ್ಸೆಯನ್ನು ಅನೇಕರಿಗೆ ಭರಿಸಲಾಗದಂತೆ ಮಾಡುತ್ತದೆ.




# ರುಚಿಕರವಾದ ಬೇಬಿ ಕಾರ್ನ್ ಫ್ರೈ ಮಾಡುವ ವಿಧಾನ

**ಬೇಕಾಗುವ ಪದಾರ್ಥಗಳು**

- ಬೇಬಿ ಕಾರ್ನ್- 1 ಬಟ್ಟಲು
- ಕಡಲೆ ಹಿಟ್ಟು- 1 ಬಟ್ಟಲು
- ಈರುಳ್ಳಿ- 1
- ಬ್ರೆಡ್ ಪೌಡರ್- 1 ಬಟ್ಟಲು
- ಅಕ್ಕಿ ಹಿಟ್ಟು- 1 ಚಮಚ
- ಕ್ಯಾಪ್ಸಿಕಂ- 1



- ಅಚ್ಚ ಖಾರದ ಪುಡಿ- 1 ಚಮಚ
- ಕಾಳುಮೆಣಸಿನ ಪುಡಿ- ಅರ್ಧ ಚಮಚ
- ಉಪ್ಪು-ರುಚಿಗೆ ತಕ್ಕಷ್ಟು

**ಮಾಡುವ ವಿಧಾನ:** ಒಂದು ಪಾತ್ರೆಯಲ್ಲಿ ಎಣ್ಣೆಯನ್ನು ಬಿಸಿ ಮಾಡಲು ಇಡಿ. ಮತ್ತೊಂದು ಪಾತ್ರೆಯಲ್ಲಿ ಕಡಲೆ ಹಿಟ್ಟು, ಕಾಳು ಮೆಣಸಿನ ಪುಡಿ, ಖಾರದ ಪುಡಿ, ಅಕ್ಕಿ ಹಿಟ್ಟು, ಉಪ್ಪು ಹಾಗೂ ಸ್ವಲ್ಪ ನೀರು ಹಾಕಿ ದಪ್ಪ ಮಿಶ್ರಣ ಮಾಡಿಕೊಳ್ಳಿ. ಒಲೆಯ ಮೇಲೆ ಬಾಣಲೆ ಇಟ್ಟು, ಎಣ್ಣೆ ಹಾಕಿ. ಬಿಸಿಯಾದ ಮೇಲೆ ಕತ್ತರಿಸಿದ ಕ್ಯಾಪ್ಸಿಕಂ ಹಾಗೂ ಕತ್ತರಿಸಿದ ಈರುಳ್ಳಿಯನ್ನು ಎಣ್ಣೆಗೆ ಹಾಕಿ ಫ್ರೈ ಮಾಡಿ. ಬದಿಗಿಟ್ಟುಕೊಳ್ಳಿ. ನಂತರ ಬೇಬಿ ಕಾರ್ನ್ ಪೀಸ್ ಗಳನ್ನು ಕಡಲೆ ಹಿಟ್ಟಿನ ಮಿಶ್ರಣದಲ್ಲಿ ಅದ್ದಿ.

ನಂತರ ಬ್ರೆಡ್ ಪೌಡರ್‌ನಲ್ಲಿ ಹೊರಳಿಸಿ ಎಣ್ಣೆಯಲ್ಲಿ ಬಿಡಿ. ಬೇಬಿ ಕಾರ್ನ್ ಗೋಲ್ಡನ್ ಬಣ್ಣಕ್ಕೆ ಬರ್ತಿದ್ದಂತೆ ತೆಗೆದು, ಕರಿದ ಈರುಳ್ಳಿ, ಕ್ಯಾಪ್ಸಿಕಂ ಮೇಲೆ ಉದುರಿಸಿದರೆ ರುಚಿಕರಾದ ಬೇಬಿ ಕಾರ್ನ್ ಫ್ರೈ ಸವಿಯಲು ಸಿದ್ಧ.

# ಬ್ಲಡ್ ಕ್ಯಾನ್ಸರ್‌ಗಿಂತಲೂ ಡೇಂಜರಸ್ ಈ ಕ್ಯಾನ್ಸರ್

## ನಿಮ್ಗೆ ಗೊತ್ತಾಗುವಾಗ್ಲೇ 3ನೇ ಸ್ಟೇಜ್ ತಲುಪಿರುತ್ತೆ

ಕ್ಯಾನ್ಸರ್ ಹೆಸರು ಕೇಳಿದರೆ ಸಾಕು ಪ್ರತಿಯೊಬ್ಬರೂ ಭಯ ಬೀತರಾಗುತ್ತಾರೆ. ಅಂತಹ ಮಾರಕ ಕಾಯಿಲೆಯಾಗಿದೆ. ಪ್ರತಿ ವರ್ಷ ಪ್ರಪಂಚದಲ್ಲಿ ಹೆಚ್ಚಿನ ಸಂಖ್ಯೆಯ ಜನರು ಕ್ಯಾನ್ಸರ್ ನಿಂದಾಗಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಕ್ಯಾನ್ಸರ್‌ನಲ್ಲಿ ಹಲವಾರು ವಿಧಗಳಿವೆ. ಹೆಚ್ಚಿನ ಜನರು ಅತ್ಯಂತ ಅಪಾಯಕಾರಿ ಕ್ಯಾನ್ಸರ್‌ಗಳೆಂದರೆ ರಕ್ತದ ಕ್ಯಾನ್ಸರ್, ಮೆದುಳಿನ ಗೆಡ್ಡೆ ಅಥವಾ ಶ್ವಾಸಕೋಶದ ಕ್ಯಾನ್ಸರ್ ಎಂದು ಭಾವಿಸುತ್ತಾರೆ. ಆದರೆ ಅದಕ್ಕಿಂತಲೂ ಅತ್ಯಂತ ಮಾರಕವೆಂದು ಪರಿಗಣಿಸಲಾಗುವ ಕ್ಯಾನ್ಸರ್



ಎಂದರೆ ಮೇದೋಜ್ಜೀ ರಕ್ತ ಗ್ರಂಥಿಯ ಕ್ಯಾನ್ಸರ್. ಈ ಕ್ಯಾನ್ಸರ್‌ನ ಲಕ್ಷಣಗಳು ಆರಂಭಿಕ ಹಂತಗಳಲ್ಲಿ ಗೋಚರಿ ಸದಿರುವುದು ದೊಡ್ಡ ಕಳವಳಕಾರಿ ಸಂಗತಿಯಾಗಿದೆ.

**ಅತ್ಯಂತ ಅಪಾಯಕಾರಿ ಕ್ಯಾನ್ಸರ್ ಯಾವುದು?:** ಅತ್ಯಂತ ಅಪಾಯಕಾರಿ ಮೇದೋಜ್ಜೀರಕ ಗ್ರಂಥಿಯ ಕ್ಯಾನ್ಸರ್. ಇದನ್ನು ಪ್ಯಾಂಕ್ರಿಯಾಟಿಕ್ ಕ್ಯಾನ್ಸರ್ ಎಂದೂ ಕರೆಯುತ್ತಾರೆ.


ಇದರ ಆರಂಭಿಕ ಲಕ್ಷಣಗಳು ಕಾಣಿಸದಿರುವುದರಿಂದ ಇದನ್ನು ಅತ್ಯಂತ ಅಪಾಯಕಾರಿ ಎಂದು ಪರಿಗಣಿಸಲಾಗಿದೆ. ಇದರಲ್ಲಿ, ರೋಗಿಯು ಹೊಟ್ಟೆ ನೋವು, ಅಜೀರ್ಣ, ಸೌಮ್ಯ ಆಯಾಸವನ್ನು ಅನುಭವಿಸುತ್ತಾನೆ. ಬಹುತೇಕರು ಇದನ್ನು ಸಾಮಾನ್ಯ ಹೊಟ್ಟೆ ಸಂಬಂಧಿತ ಸಮಸ್ಯೆ ಎಂದು ಪರಿಗಣಿಸಲಾಗುತ್ತದೆ.

**ಮೇದೋಜ್ಜೀರಕ ಗ್ರಂಥಿಯ ಕ್ಯಾನ್ಸರ್ ಬರುವ ಅಪಾಯ ಯಾರಿಗೆ ಇದೆ?**

- ಮಧುಮೇಹ ರೋಗಿಗಳು
- ಧೂಮಪಾನಿಗಳು
- ಕೊಬ್ಬಿನಂಶವಿರುವ ಆಹಾರ ಸೇವಿಸುವವರು
- ಕುಟುಂಬದ ಇತಿಹಾಸದಲ್ಲಿ ಕ್ಯಾನ್ಸರ್ ಇರುವವರು
- ಬೊಜ್ಜು ಮತ್ತು ಕಡಿಮೆ ದೈಹಿಕ ಚಟುವಟಿಕೆ ಹೊಂದಿರುವವರಲ್ಲಿ ಈ ಕಾಯಿಲೆ ಅಪಾಯ ಹೆಚ್ಚು

**ಹೆಚ್ಚಾಗಿ ಕಡೆಗಣಿಸಲ್ಪಡುವ ಮೇದೋಜ್ಜೀರಕ ಗ್ರಂಥಿಯ ಕ್ಯಾನ್ಸರ್ ಲಕ್ಷಣಗಳು**

- ಹೊಟ್ಟೆಯ ಮೇಲ್ಭಾಗದಲ್ಲಿ ನಿರಂತರ ನೋವು
- ಹಸಿವಿನ ಕೊರತೆ ಮತ್ತು ಹಠಾತ್ ತೂಕ ನಷ್ಟ.
- ಕಾಮಾಲೆ
- ಸೌಮ್ಯ ಜ್ವರ ಅಥವಾ ಆಯಾಸ
- ಹಸಿವಾದರೂ ತಿನ್ನಲು ಮನಸ್ಸಾಗದಿರುವುದು
- ಗಾಢವಾದ ಮೂತ್ರ ಮತ್ತು ತಿಳಿ ಬಣ್ಣದ ಮಲ



**ಮೇದೋಜ್ಜೀರಕ ಗ್ರಂಥಿಯ ಕ್ಯಾನ್ಸರ್ ನಿಂದ ಬದುಕುಳಿಯುವ ಸಾಧ್ಯತೆ ಎಷ್ಟು?:** ಈ ಕ್ಯಾನ್ಸರ್ ಬಹಳ ತಡವಾಗಿ ಪತ್ತೆಯಾಗುತ್ತದೆ. ಕ್ಯಾನ್ಸರ್ ಪತ್ತೆಯಾಗುವ ಹೊತ್ತಿಗೆ, ಅದು ಈಗಾಗಲೇ 3 ಅಥವಾ 4 ನೇ ಹಂತವನ್ನು ತಲುಪಿರುತ್ತದೆ.

ಇದು ದೇಹದ ಇತರ ಭಾಗಗಳಿಗೆ, ವಿಶೇ ಷವಾಗಿ ಯಕೃತ್ತು, ಶ್ವಾಸಕೋಶಗಳು ಮತ್ತು ಹೊಟ್ಟೆಯ ಸುತ್ತಲೂ ಬಹಳ ವೇಗವಾಗಿ ಹರಡುತ್ತದೆ. ಇತರ ಕ್ಯಾನ್ಸರ್‌ಗಳಿಗೆ ಹೋಲಿಸಿದರೆ, ಬದುಕುಳಿಯುವ ಸಾಧ್ಯತೆ ಕೇವಲ 5 ವರ್ಷಗಳು, ಇದು 10% ಕ್ಕಿಂತ ಕಡಿಮೆ.

**ನಿಮ್ಮನ್ನು ಹೇಗೆ ರಕ್ಷಿಸಿಕೊಳ್ಳಬಹುದು:** ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಿ.

ಫೈಬರ್, ಉತ್ಕರ್ಷಣ ನಿರೋಧಕಗಳಲ್ಲಿ ಸಮೃದ್ಧವಾಗಿರುವ ಆರೋಗ್ಯಕರ ಆಹಾರವನ್ನು ಸೇವಿಸಿ

ಸಂಸ್ಕರಿಸಿದ ಸಕ್ಕರೆ, ಟ್ರಾನ್ಸ್ ಕೊಬ್ಬಿನಿಂದ ದೂರವಿರಿ. ಧೂಮಪಾನ ಮತ್ತು ಮದ್ಯಪಾನವನ್ನು ತ್ಯಜಿಸಿ.

ನಿಮಗೆ ಹೊಟ್ಟೆ ಅಥವಾ ಜೀರ್ಣಕ್ರಿಯೆಗೆ ಸಂಬಂಧಿಸಿದ ಯಾವುದೇ ಸಮಸ್ಯೆ ಇದ್ದರೆ ನಿರ್ಲಕ್ಷಿಸದಿರಿ.

**ಕಡೆಗಣಿಸುವ ತಪ್ಪು ಮಾಡದಿರಿ**

**ಮೇದೋಜ್ಜೀರಕ ಗ್ರಂಥಿಯ ಕ್ಯಾನ್ಸರ್ ಅತ್ಯಂತ ಅಪಾಯಕಾರಿ ಕ್ಯಾನ್ಸರ್ ಆಗಿದ್ದು, ಅದು ನಿಮಗಿದೆ ಅಂತ ಗೊತ್ತಾಗುವ ಮೊದಲೇ ಅಂದು ಮೂರು ನಾಲ್ಕನೇ ಹಂತಕ್ಕೆ ತಲುಪಿರುತ್ತದೆ ಹಾಗಾಗಿ ಮುನ್ನೆಚ್ಚರಿಕೆ ವಹಿಸೋದು ಬಹಳ ಮುಖ್ಯ. ದೇಹದಲ್ಲಾಗುವ ಯಾವುದೇ ಸಣ್ಣ ಬದಲಾವಣೆಯನ್ನೂ ಕಡೆಗಣಿಸುವ ತಪ್ಪು ಮಾಡದಿರಿ.**

# ಮಳೆರಾಯನ ಆರ್ಭಟಕ್ಕೆ ರೈತ ಕಂಗಾಲು: ಲಕ್ಷಾಂತರ ರೂ. ನಷ್ಟ

• ಉದಯವಾಹಿನಿ, ಕರಜಗಿ

ಸಂಜೆ ಸುರಿದ ಗಾಳಿ ಸಹಿತ ಮಳೆಯಿಂದ ಕಲಬುರ್ಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಕರಜಗಿ ಗ್ರಾಮದಲ್ಲಿ ಬೆಳೆದು ನಿಂತಿದ್ದ, ಪಪ್ಪಾಯಿ ಮರಗಳು ಮುರಿದು ಬಿದ್ದಿದ್ದು ರೈತರಿಗೆ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಸಂಜೆ ಸುರಿದ ಅಕಾಲಿಕವಾಗಿ ಸುರಿದ ಗಾಳಿ, ಮಳೆಗೆ ಸಾಲಾ ಶೂಲ ಮಾಡಿ ಲಕ್ಷಾಂತರ ಖರ್ಚು ಮಾಡಿದ್ದ ಬೆಳೆದಿದ್ದ ಬಂಗಾರದಂತಹ ಬೆಳೆ ನೆಲಸಮವಾಗಿವೆ.

ಕರಜಗಿಯ ಮೌಲಾಸಾಬ ಎಂಬ ರೈತ ತನ್ನ 2 ಎಕರೆ ಜಮೀನನಲ್ಲಿ ಸುಮಾರು 2 ಲಕ್ಷ ರೂಪಾಯಿ ಖರ್ಚು ಮಾಡಿ 2000 ಪಪ್ಪಾಯ ಗಿಡಗಳನ್ನು ನೆಟ್ಟಿದ್ದರು. ಹಗಲು ರಾತ್ರಿ ಕಷ್ಟಪಟ್ಟು ವ್ಯವಸಾಯ ಮಾಡಿದ್ದರಿಂದ ಉತ್ತಮ ಫಸಲು ಕೂಡ ಬಂದಿತ್ತು. ಆದರೆ ಮಳೆರಾಯ ಕೈಗೆ ಬಂದ ತುತ್ತು ಬಾಯಿಗೆ ಬರದಂತೆ ಮಾಡಿದ್ದು, ರೈತ ಕಣ್ಣೀರಲ್ಲಿ ಕೈತೊಳೆಯುವಂತಾಗಿದೆ.

ದಿಢೀರ್ ಮಳೆಗೆ 2 ಸಾವಿರ ಪಪ್ಪಾಯಿ ಗಿಡಗಳಲ್ಲಿ



ಉದಯವಾಹಿನಿ ಚಿತ್ರ

ಸುಮಾರು 1500–1000 ವರೆಗೂ ಗಿಡಗಳು ನೆಲಸಮವಾಗಿವೆ. ಇನ್ನು ಭಾರೀ ಗಾಳಿ ಹಿನ್ನೆಲೆ ನೆಲಕ್ಕೆ ಬಾಗಿರುವ ಕೆಲವೊಂದಿಷ್ಟು ಪಪ್ಪಾಯ ಗಿಡಗಳಿಗೆ ಕಂಬದ ಆಸರೆ ಕೊಟ್ಟು ನಿಲ್ಲಿಸಲಾಗಿದೆಯಾದರೂ , ಪಪ್ಪಾಯ ನಾಶದಿಂದ ಕಂಗಲಾಗಿ ದಿಕ್ಕು ತೋಚದಂತಾಗಿರುವ ರೈತ ಮೌಲಾಸಾಬ ಪರಿಹಾರಕ್ಕಾಗಿ ಮೊರೆ ಇಟ್ಟಿದ್ದಾರೆ ಸುರಿದ ಭಾರೀ ಮಳೆ ಗಾಳಿಗೆ ನೆಲಕಚ್ಚಿವೆ. ಕಣ್ಣಿಗೆ ಕುಕ್ಕುವಂತಿದ್ದ ಪಪಾಯಿ ತೋಟಕ್ಕೆ ಮಳೆರಾಯನ ವಕ್ರದೃಷ್ಟಿ ಬಿದ್ದು ನಾಶವಾಗಿವೆ.

**ರೈತನ ಬದುಕೇ ನೆಲಕ್ಕೊರಗಿದೆ**

**ಒಂದು ಗಿಡಕ್ಕೆ ಅಂದಾಜು 70–80 ಕೆಜಿ ಹಣ್ಣು ಬರುತ್ತಿತ್ತು. ಆದರೀಗ ಭಾರೀ ಗಾಳಿ ಮಳೆಯಿಂದಾಗಿ 20–25 ಟನ್ ದಷ್ಟು ಪಪ್ಪಾಯಿ ಹಣ್ಣು ನಷ್ಟವಾಗಿದೆ. ಸದ್ಯ ಕಟಾವಿಗೆ ಬಂದಿದ್ದ ಗಿಡದಲ್ಲಿದ್ದ 15 ಟನ್‌ದಷ್ಟು ಪಪ್ಪಾಯ ಗಾಳಿ ಮಳೆಗೆ ನೆಲಕ್ಕೆ ಉರುಳಿ ಬಿದ್ದಿವೆ. ಹೀಗಾಗಿ ತುಂಬಾ ಕಷ್ಟಪಟ್ಟು ಸಾಲ ಮಾಡಿ, 2 ಲಕ್ಷ ಖರ್ಚು ಮಾಡಿ ಬೆಳೆದಿದ್ದ ಪಪ್ಪಾಯಿ ಬೆಳೆಯ ಸ್ಥಿತಿ ನೋಡ್ತಿದರೆ ಒಂದುಕ್ಷಣ ರೈತನ ಬದುಕೇ ನೆಲಕ್ಕೊರಗಿದ ಹಾಗಿದೆ**

# ಗರ್ಭಕೋಶ ಕ್ಯಾನ್ಸರ್ ಚಿಕಿತ್ಸೆಗಿಂತ ಮುನ್ನೆಚ್ಚರಿಕೆ ಉತ್ತಮ

• ಉದಯವಾಹಿನಿ, ಹೊಸಪೇಟೆ

ಲೆಕ್ಕಕ್ಕೆ ಸಿಗದಂತೆ ಕ್ಯಾನ್ಸರ್ ಪ್ರಕರಣಗಳು ದಿನದಿಂದ ದಿನಕ್ಕೆ ಏರಿಕೆಯಾಗುತ್ತಿವೆ ಇತ್ತೀಚಿಗೆ ಗರ್ಭಕೋಶ ಕ್ಯಾನ್ಸರ್ ಹೆಚ್ಚಿನ ಪಾಲು, ಗರ್ಭಕೋಶ ಕ್ಯಾನ್ಸರ್‌ಗೆ ಚಿಕಿತ್ಸೆಗಿಂತ ಮುನ್ನೆಚ್ಚರಿಕೆ ಉತ್ತಮ ಮಾರ್ಗ ಎಂದು ಖ್ಯಾತ ಸ್ತ್ರೀರೋಗ ತಜ್ಞ ಡಾ.ಸುಮಂಗಲಾದೇವಿ ಹೇಳಿದರು.

ಸ್ಥಳೀಯ ಶ್ರೀಮತಿ ಉಗಮದೇವಿ ಭವರ್ಲಾಲ್ ನಾಹರ್ ಥಿಯೋಸಾಫಿಕಲ್ ಮಹಿಳಾ ಕಾಲೇಜುನಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಗರ್ಭಕೋಶ ಕ್ಯಾನ್ಸರ್ ಹೆಚ್‌ಪಿವಿ ವ್ಯಾಕ್ಸಿನೇಷನ್ ವಿಶೇಷ ಉಪನ್ಯಾಸದಲ್ಲಿ ವಿದ್ಯಾರ್ಥಿನಿಯರಿಗೆ ಜಾಗೃತಿ ಮೂಡಿಸಿದರು.

ಹ್ಯೂಮನ್ ಪ್ಯಾಪಿಲೋ ವೈರಸ್ ಅಂಡ್ ರಿಲೇಟೆಡ್ ಡಿಸೀಸಸ್ 2015 ರ ಮಾಹಿತಿ ಪ್ರಕಾರ ಭಾರತದಲ್ಲಿ ಪ್ರತಿವರ್ಷ ಸುಮಾರು 12 ಲಕ್ಷ ಮಹಿಳೆಯರು ಗರ್ಭಕೋಶದ ಕ್ಯಾನ್ಸರ್ ಗೆ ತುತ್ತಾಗುತ್ತಿದ್ದಾರೆ. ಇದರಲ್ಲಿ ಸುಮಾರು 67,000 ಮಹಿಳೆಯರು ಸಾವನ್ನಪ್ಪುತ್ತಿದ್ದಾರೆ. ಮಹಿಳೆಯರನ್ನು ಅತಿಯಾಗಿ ಕಾಡುತ್ತಿರುವ ಎರಡನೇ



ಉದಯವಾಹಿನಿ ಚಿತ್ರ

ವಿಧದ ಕ್ಯಾನ್ಸರ್ ಎಂದೂ ಗುರುತಿಸಲಾಗಿದೆ. ಕ್ಯಾನ್ಸರನ್ನು ತಡೆಗಟ್ಟಲು ಆಗಾಗಿ ತಪಾಸಣೆ ಅತ್ಯಗತ್ಯ. ಪ್ರತಿ ಮಹಿಳೆಯರು ಮೂರು ವರ್ಷಕ್ಕೊಮ್ಮೆ ಪ್ಯಾಪ್ ಪರೀಕ್ಷೆ ನಡೆಸಬೇಕು' ಎಂದು ವಿದ್ಯಾರ್ಥಿನಿಯರ ಆರೋಗ್ಯ ಮತ್ತು ವೈಯಕ್ತಿಕ ಕಾಳಜಿ ಕುರಿತು ಉಪನ್ಯಾಸ ನೀಡಿದರು.

ರಿಯಾಯಿತಿ ದರದಲ್ಲಿ ಲಭ್ಯವಿರುವ ಲಸಿಕೆಯನ್ನು 9 ರಿಂದ 30 ವರ್ಷದೊಳಗಿನ ಮಹಿಳೆಯರು ಅತ್ಯವಶ್ಯವಾಗಿ ಪಡೆದುಕೊಳ್ಳಬೇಕೆಂದು ತಿಳಿಸಿದರು. ಪ್ರಾಚಾರ್ಯ ಡಾ. ಅನಸುಯಾ ಅಂಗಡಿ ಮಾತನಾಡಿದ ಅವರು ಸದುಪಯೋಗವನ್ನು ಪಡೆದು ವಿದ್ಯಾರ್ಥಿನಿಯರಿಗೆ ಚಿಕಿತ್ಸೆಗಿಂತ ಮುನ್ನೆಚ್ಚರಿಕೆ ಉತ್ತಮ ಎಂದು ಮನದಟ್ಟುಪಡಿಸಿದರು.

## ಮಿನಿ ನ್ಯೂಸ್

### ಮೃತ ಶ್ರೀಧರ್ ಕುಟುಂಬಕ್ಕೆ 10 ಲಕ್ಷ ಪರಿಹಾರ: ಯಾಗಾಪೂರ

• ಉದಯವಾಹಿನಿ, ಚಿತ್ತಾಪುರ

ತಾಲ್ಲೂಕಿನ ಬೆಳಗುಂಪಾ ಗ್ರಾಮದ ಮರಳು ಗುಂಡಿಯಲ್ಲಿ ಆಕಸ್ಮಿಕವಾಗಿ ಮೃತಪಟ್ಟ ಶ್ರೀಧರ್ ನವಲಕರ್ ಕುಟುಂಬಕ್ಕೆ ಮರುಳು ದಕ್ಕಾದವರಿಂದ ರೂ.10 ಲಕ್ಷ ಪರಿಹಾರ ಕೊಡಿಸಲಾಗಿದೆ ಎಂದು ಕೋಲಿ ಸಮಾಜದ ತಾಲ್ಲೂಕು ಅಧ್ಯಕ್ಷ ಶಿವುಕುಮಾರ ಯಾಗಾಪೂರ ತಿಳಿಸಿದ್ದಾರೆ. ಮೃತ ಶ್ರೀಧರ್ ನವಲಕರ್ ಮನೆಗೆ ಭೇಟಿ ನೀಡಿ ಕುಟುಂಬದ ವರಿಗೆ ಸಾಂತ್ವನ ಹೇಳಿ ನಂತರ ಮಾತನಾಡಿದ ಅವರು, ಬೆಳಗುಂಪಾ ಘಟನೆಯನ್ನು ಕೆಲವರು ರಾಜಕೀಯವಾಗಿ ಬಳಸಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ ಇದು ಸರಿಯಲ್ಲ, ಯಾವುದೇ ಕಾರಣಕ್ಕೂ ಈ ಕುಟುಂಬವನ್ನು ರಾಜಕೀಯ ವಿಷಯಕ್ಕೆ ಎಳೆ ತರಬಾರದು ಈಗಾಗಲೇ ಇದೊಂದು ಮುಗಿದ ಅಧ್ಯಾಯವಾಗಿದೆ ಎಂದು ಹೇಳಿದರು.

### ಸಿಡಿಲಿಗೆ 16 ವರ್ಷದ ಬಾಲಕ ಬಲಿ ತಹಶೀಲ್ದಾರ್ ಭೇಟಿ ಪರಿಶೀಲನೆ

• ಉದಯವಾಹಿನಿ, ಕೂಡ್ಲಿಗಿ

ಮಳೆ ಬರುತ್ತದೆ ಎಂದು ಮನೆಯ ಮೇಲೆ ಒಣಗಿ ಹಾಕಿದ್ದ ಬೆಡ್ ಶೀಟ್‌ನ್ನು ತೆಗೆದುಕೊಂಡು ಮನೆಯೊಳಗೇ ಹೋಗುವಷ್ಟರಲ್ಲಿ ಪ್ರಕೃತಿಯ ವಿಧಿಯಾಟದ ಸಿಡಿಲಿಗೆ 16 ವರ್ಷದ ಬಾಲಕನೋರ್ವ ಬಲಿಯಾದ ಘಟನೆ ತಾಲ್ಲೂಕಿನ ಬಂಡೆಬಸಾಪುರ ತಾಂಡಾದಲ್ಲಿ ಗುರುವಾರ ಸಂಜೆ 6–15 ಗಂಟೆಗೆ ಜರುಗಿದ್ದು ಕೂಡ್ಲಿಗಿ ತಹಶೀಲ್ದಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬಂಡೆ ಬಸಾಪುರ ತಾಂಡದ ಪಾಂಡುನಾಯ್ಕ್ (16) ಪ್ರಕೃತಿ ವಿಕೋಪದ ಸಿಡಿಲಿಗೆ ಬಲಿಯಾದ ದುರ್ದೈವಿ ಬಾಲಕನಾಗಿದ್ದಾನೆ ಎಂದು ಹೇಳಬಹುದಾಗಿದೆ. ಈತನು ಗುರುವಾರ ಸಂಜೆ ಮಳೆ ಬೀಳುತ್ತಿರುವುದರಿಂದ ಮನೆಯ ಮೇಲೆ ಒಣಗಿ ಹಾಕಿದ್ದ ಬೆಡ್ ಶೀಟ್‌ನ್ನು ತೆಗೆದುಕೊಂಡು ಬಂದು ಇನ್ನೇನು ಒಂದೆರಡು ಹೆಜ್ಜೆಯಲ್ಲಿ ಮನೆಯೊಳಗೇ ಹೋಗುವಷ್ಟರಲ್ಲಿ ಪ್ರಕೃತಿಯ ವಿಧಿಯಾಟದ ಸಿಡಿಲಿಗೆ ತೀವ್ರಗಾಯಗೊಂಡಿದ್ದು ತಕ್ಷಣ ಆಟೋದಲ್ಲಿ ಕೂಡ್ಲಿಗಿ ಸರ್ಕಾರಿ ಆಸ್ಪತ್ರೆಗೆ ಕರೆತರಲಾಗಿ ಪರೀಕ್ಷೆ ಮಾಡಿದ ವೈದ್ಯರು ಮೃತಪಟ್ಟ ಬಗ್ಗೆ ತಿಳಿಸಿದ್ದಾರೆ.

### ಸಾಲಬಾಧೆ: ರೈತ ಆತ್ಮಹತ್ಯೆ

• ಉದಯವಾಹಿನಿ, ಕಲಬುರಗಿ

ಸಾಲಬಾಧೆಯಿಂದ ತನ್ನ ಹೊಲದಲ್ಲಿ ರೈತನೊಬ್ಬ ನೇಣು ಹಾಕಿಕೊಂಡು ಸಾವನ್ನಪ್ಪಿದ ಘಟನೆ ಜೇವರಗಿ ತಾಲ್ಲೂಕಿನ ಸೊನ್ನ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಕೆರೆಪ್ಪ ಪೂಜಾರಿ ಮಿಣಜಗಿ ಆತ್ಮಹತ್ಯೆ ಮಾಡಿಕೊಂಡ ರೈತ ಕೂಡಲೇ ಸ್ಥಳಕ್ಕೆ ನೆಲೋಗಿ ಪೊಲೀಸ್ ಠಾಣೆಯಿಂದ ಪೊಲೀಸರು ಮತ್ತು ವೈದ್ಯರು ಆಗಮಿಸಿ ಪಂಚನಾಮೆ ಮತ್ತು ಮರಣೋತ್ತರ ಪರೀಕ್ಷೆ ನಡೆಸಿದರು.

### ಸಿಎಂ ಕುರ್ಚಿ ಉಳಿಸಿಕೊಳ್ಳಲು ಜಾತಿ ಜನಗಣತಿ ದಾಳ: ವಿ.ಸೋಮಣ್ಣ

• ಉದಯವಾಹಿನಿ, ಹುಬ್ಬಳ್ಳಿ



ಕುರ್ಚಿ ಉಳಿಸಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಾತಿ ಜನಗಣತಿ ದಾಳ ಪ್ರಯೋಗಿಸಿದ್ದಾರೆ ಎಂದು ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಾತಿ ಜನಗಣತಿ ವಿಚಾರದಲ್ಲಿ ಅವರಲ್ಲಿಯೇ ಒಗ್ಗಟ್ಟಿಲ್ಲ. ಸಾಧಕ ಬಾಧಕಗಳು ಏನಾಗುತ್ತದೆ ಎನ್ನುವುದರ ಅರಿವಿಲ್ಲ. ಜನರ ಗಮನ ಬೇರೆಡೆ ಸೆಳೆಯಲು ಇದನ್ನು ಮುಂದೆ ತಂದಿದ್ದಾರೆ. ಆ ಮೂಲಕ ರಾಜ್ಯದ ಜನತೆಯ ಮೇಲೆ ಗಧಾಪ್ರಹಾರ ಮಾಡಲು ಹೊರಟಿದ್ದಾರೆ ಎಂದು ಖಂಡಿಸಿದರು.

ಬಿಜೆಪಿಯ ಜನಾಕ್ರೋಶ ಯಾತ್ರೆ ವಿರುದ್ಧವಾಗಿ ಕಾಂಗ್ರೆಸ್ ಪ್ರತಿಭಟನೆ ವಿಚಾರವಾಗಿ ಪ್ರತಿಕ್ರಿಯೆ ನೀಡಿ, ಕಾಂಗ್ರೆಸ್‌ನವರಿಗೆ ಮಾಡಲು ಏನು ಕೆಲಸ ಇದೆ. ಕಾಂಗ್ರೆಸ್‌ನವರ ಹತ್ತಿರ ದುಡ್ಡಿಲ್ಲ, ದುಕಾನ್ ಬಂದ್ ಆಗಿದೆ. ಗೊತ್ತು ಗುರಿ ಇಲ್ಲದೇ ಕೆಲವು ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಬೇಸಿಗೆ ಕಾಲದಲ್ಲಿ ಕುಡಿಯುವ ನೀರು, ಜಾನುವಾರು, ರೋಗ, ರೈತರ ಬಗ್ಗೆ ಕಾಳಜಿ ಬಿಟ್ಟು ಜನರನ್ನು ಡೈವರ್ಟ್ ಮಾಡುತ್ತಾರೆ. ಸಿಎಂ ಕಾರ್ಯವೈಖರಿಯ ನಿಷ್ಕ್ರಿಯತೆಗೆ ಮತ್ತೊಂದು ಉದಾಹರಣೆ ಆಗಿದೆ ಎಂದ ಹೇಳಿದರು. ರಾಜ್ಯದಲ್ಲಿ ಎರಡನೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸುವ ಬಗ್ಗೆ ಪ್ರತಿಕ್ರಿಯಿಸಿ, ರಾಜ್ಯದ ಜನರ ಅನುಕೂಲ ದೃಷ್ಟಿಯಿಂದ ಸಾಧಕ ಬಾಧಕ ನೋಡಿಕೊಂಡು ನಿರ್ಧಾರ ಮಾಡಲಾಗುತ್ತದೆ ಎಂದು ತಿಳಿಸಿದರು.

### ಮಹಾವೀರರ ತತ್ವಾದರ್ಶಗಳನ್ನ ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಿ : ಮಾಜಿ ಶಾಸಕ

• ಉದಯವಾಹಿನಿ, ಅಥಣಿ

ಅಹಿಂಸಾ ಪರಮೋಧರ್ಮ ಎಂದು ವಿಶ್ವಕ್ಕೆ ಶಾಂತಿಯ ಮಂತ್ರವನ್ನು ಸಾರಿದ ಭಗವಾನ್ ಮಹಾವೀರ ತೀರ್ಥಕಂರ ತತ್ವ, ಆದರ್ಶಗಳು ಇಂದಿಗೂ ಪ್ರಸ್ತುತ. ಮಹಾವೀರರ ಸತ್ಯ, ಶಾಂತಿ ಮತ್ತು ಮಾನವೀಯತೆ ನಮ್ಮ ಬದುಕಿನ ಆದರ್ಶಗಳಾಗಬೇಕು ಎಂದು ಮಾಜಿ ಶಾಸಕ ಶಹಾಜಹಾನ್ ಡೊಂಗರಗಾಂವ ಹೇಳಿದರು.

ಅವರು ತಾಲ್ಲೂಕ ಸಮಸ್ತ ಜೈನ ಸಮಾಜ ಹಾಗೂ ತಾಲ್ಲೂಕ ಆಡಳಿತದಿಂದ ವತಿಯಿಂದ ಹಮ್ಮಿಕೊಂಡಿದ್ದ ಭಗವಾನ್ ಮಹಾವೀರ ತೀರ್ಥಕಂರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ದೇಶದಲ್ಲಿ ಅನೇಕ ಮಹಾಪುರುಷರು ಇಡೀ ಮನುಕುಲದ ಏಳಿಗೆಗಾಗಿ ಶ್ರಮಿಸಿದ್ದಾರೆ. ಭಗವಾನ್ ಮಹಾವೀರರು ನೀಡಿದ ಶಾಂತಿಯ ಸಂದೇಶ ಹಾಗೂ ಅವರ ತತ್ವಾದರ್ಶಗಳು ಸರ್ವ ಧರ್ಮಿಯರಿಗೂ ಆದರ್ಶವಾಗಿವೆ. ಆದರೆ ಇಂದು ಮಹಾಪುರುಷರನ್ನು ಅವರವರ ಜಾತಿ ಅಥವಾ ಸಮುದಾಯಕ್ಕೆ ಸೀಮಿತಗೊಳಿಸುತ್ತೀರುವುದು ವಿಷಾದಕರ ಸಂಗತಿ ಈ ಸಂಕುಚಿತ ಸ್ವಭಾವ ದೂರಾಗಬೇಕು ಎಂದರು.

ಅಥಣಿ ಪುರಸಭೆಯ ಉಪಾಧ್ಯಕ್ಷೆ ಭುವನೇಶ್ವರಿ ಯಕ್ಕಂಚಿ ಅವರು ಭಗವಾನ್ ಮಹಾವೀರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿ ಜೈನ ಧರ್ಮದ ಸಂಸ್ಥಾಪಕರು ಹಾಗೂ ಕೊನೆಯ ತೀರ್ಥಕಂರರು ಆಗಿರುವ ಮಹಾವಿರರು ಹಾಕಿಕೊಟ್ಟ ಜೀವನಾದರ್ಶಳು ಇಂದಿಗೂ ಪ್ರಸ್ತುತವಾಗಿವೆ. 2500 ವರ್ಷಗಳ ಹಿಂದೆ ಅನೇಕ ಸಮಸ್ಯೆಗಳನ್ನು ಎದುರಿಸಿಯೂ ವಿಶ್ವಕ್ಕೆ ಶಾಂತಿ ತತ್ವ ಬೋಧಿಸಿದ ಮಹಾವೀರರು ಮೋಕ್ಷ ಮಾರ್ಗದೆಡೆ ಸಾಗಲು ಅಹಿಂಸೆಯೇ ಮೂಲಮಂತ್ರ ಎಂದು ಬೋಧಿಸಿದ್ದಾರೆ ಎಂದರು.


# ತರಗತಿ ಮಿತ್ರರಿಗೆ ಅಹ್ವಾನಿಸಿ ವಿಶಿಷ್ಟವಾದ ರೀತಿಯ ಕಿರುಗುಣಿ ಕಾರ್ಯಕ್ರಮ

• ಉದಯವಾಹಿನಿ,ಚಿಂಚೋಳಿ

ತಾಲ್ಲೂಕಿನ ಪೋಲಕಪಳ್ಳಿ ಗ್ರಾಮದಲ್ಲಿ ರಮೇಶ ಎಸ್ ಹಡಪದ ಅವರ ಸುಪುತ್ರಿ, ಬಿಂದುಶ್ರೀಯವರ ಕಿರುಗುಣಿ ಕಾರ್ಯಕ್ರಮವು ವಿಶಿಷ್ಟವಾದ ರೀತಿಯಲ್ಲಿ ಆಚರಣೆ ಮಾಡಿದರು.

ರಮೇಶ ಹಡಪದ ಅವರು 1990–91ನೇ ಸಾಲಿನಲ್ಲಿ ವಿಧ್ಯಾಭ್ಯಾಸ ಮಾಡಿದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ದೇಗಲಮಡಿ ಗ್ರಾಮದಲ್ಲಿ 7ನೇ ತರಗತಿಯ ಎಲ್ಲಾ ಸಹಪಾಠಿಗಳಿಗೆ ಕಾರ್ಯಕ್ರಮದಲ್ಲಿ ಅಹ್ವಾನಿಸಿ ವಿಶೇಷವಾಗಿ ಸನ್ಮಾನಿಸುವ ಮೂಲಕ ನೆನಪಿನ ಕಾಣಿಕೆ ನೀಡಿ ಎಲ್ಲಾ ಸ್ನೇಹಿತರ ಜೋತೆ ಕಾರ್ಯಕ್ರಮ ಮಾಡಿದ್ದು ಗ್ರಾಮಸ್ಥರೆಲ್ಲರೂ ನೋಡುವಂತೆ ಮಾಡಿತ್ತು ಅತ್ಯಂತ ಸಂತೋಷದಿಂದ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು,ಎಲ್ಲಾ ಸ್ನೇಹಿತ ಮಿತ್ರರು ಭಾವುಕರಾಗಿ ರಮೇಶ ಹಡಪದ ಮತ್ತು ಅವರ ಶ್ರೀಮತಿ ಹಾಗೂ ಸುಪುತ್ರಿಗೆ ಶುಭಹಾರೈಸಿದ್ದರು.

ಮಸ್ತಾನಪಟೇಲ ಅಣವಾರ, ಜಗನ್ನಾಥ ಪೂಜಾರಿ ಸೇರಿದಂತೆ ತರಗತಿ ಮಿತ್ರರು ಗ್ರಾಮಸ್ಥರು ಹಿರಿಯ ಮತ್ತು ಕಿರಿಯ ಮುಖಂಡರು ಅನೇಕರು ಭಾಗಿಯಾಗಿದ್ದರು.



ಉದಯವಾಹಿನಿ ಚಿತ್ರ

# ನಾವು ನುಡಿದಿದ್ದೇವೆ ಅದರಂತೆ ಪ್ರಾಮಾಣಿಕ ನಡೆದುಕೊಂಡಿದ್ದೇವೆ: ಶಶೀಲ್ ಜಿ ನಮೋಶಿ

# ನುಡಿದಂತೆ ನಡೆದಿದ್ದೇವೆ ವೇತನ ಪರಿಷ್ಕರಣೆ ಮಾಡಿದ್ದೇವೆ

• ಉದಯವಾಹಿನಿ, ಕಲಬುರಗಿ

ನಾವು ನುಡಿದಿದ್ದೇವೆ ಅದರಂತೆ ಪ್ರಾಮಾಣಿಕ ನಡೆದುಕೊಂಡಿದ್ದೇವೆ ಎಂದು ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಶಶೀಲ್ ಜಿ ನಮೋಶಿ ಹೇಳಿದರು.

ಅವರು ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಸಮಸ್ತ ಬೋಧಕೇತರ ಸಿಬ್ಬಂದಿಗೆ 6ನೇ ವೇತನ ಆಯೋಗ ಪರಿಷ್ಕರಣೆ ಮಾಡಿರುವ ಸಲುವಾಗಿ ಬೋಧಕೇತರ ಸಿಬ್ಬಂದಿ ಪ್ರಸ್ತುತ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಗೆ ಏರ್ಪಡಿಸಿದ್ದ ಗೌರವ ಸಮರ್ಪಣಾ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು.

ಈ ಪರಿಷ್ಕೃತ 6ನೇ ವೇತನದಿಂದ ಪ್ರತಿಯೊಬ್ಬ ಬೋಧಕ ಸಿಬ್ಬಂದಿಗಳಿಗೆ 4 ರಿಂದ 14 ಸಾವಿರ ರೂಗಳ ವರೆಗೆ ವೇತನ ಹೆಚ್ಚಳ ಆಗುವದು ಎಂದು ಹೇಳಿದರು.

ಶೈಕ್ಷಣಿಕ ಕ್ಷೇತ್ರದಿಂದಲೇ ನಾನು ರಾಜಕೀಯ ಸಾಮಾಜಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದು, ಶೈಕ್ಷಣಿಕ ಕ್ಷೇತ್ರದ ಸಿಬ್ಬಂದಿಗಳೆ ನನ್ನ ಜೀವಾಳ ಅವರ ಋಣ ನನ್ನ ಮೇಲೆ ಬಹಳಿಷ್ಟಿದೆ ಎಂದು ಹೇಳಿದರು.

ನಾನು ಸಂಸ್ಥೆಯ ಅಧ್ಯಕ್ಷನಾಗಿ ಮಾತನಾಡುತ್ತಿದ್ದೆನೆ ಇಲ್ಲಿ ರಾಜಕಾರಣಿಯಾಗಿ ಮಾತನಾಡುತ್ತಿಲ್ಲ ನಾನು ಹಿಂದೆ ಅಧ್ಯಕ್ಷನಾಗಿದ್ದಾಗಲೆ 6 ನೇ ವೇತನ ಘೋಷಣೆ ಮಾಡಿ ಮಾಡಿದ್ದೆ ಆದರೆ ಹಿಂದಿನ ಆಡಳಿತ ಮಂಡಳಿಯು ವೇತನ ಪರಿಷ್ಕರಣೆ ಮಾಡಲೇ ಇಲ್ಲ ಇಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಇರಬೇಕಾದ ಸಂಬಳ ಇಲ್ಲವೆ ಇಲ್ಲ ಇದರಿಂದಾಗಿ ನನಗೆ ಬಹಳ ನೋವಿತ್ತು ಅದಕ್ಕಾಗಿಯೆ ನಮ್ಮ ತಂಡ ಚುನಾವಣೆ ಪ್ರಣಾಳಿಕೆಯಲ್ಲಿ ವೇತನ ಪರಿಷ್ಕರಣೆ ಮಾಡುವದಾಗಿ ಹೇಳಿದ್ದೇವು ಈಗ ಪರಿಷ್ಕರಣೆ ಮಾಡಿ ಸಂಬಳ ಹೆಚ್ಚಳ ಮಾಡಿದ್ದೇವೆ ಎಂದು ಹೇಳಿದರು.

ನಾನು ಹಾಗ ನಮ್ಮ ಆಡಳಿತ ಮಂಡಳಿಯ ಸದಸ್ಯರು ಬಸವೇಶ್ವರ ಆಸ್ಪತ್ರೆಯನ್ನು ಕಲ್ಯಾಣ ಕರ್ನಾಟಕ ಭಾಗದ ಅತ್ಯಂತ ಪ್ರತಿಷ್ಠಿತ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲು ಪಣ ತೊಟ್ಟಿದ್ದೇವೆ ಹಾಗೂ ಸಂಸ್ಥೆಯಿಂದು ಇನ್ನೂ ಅನೇಕ ಸುಪರ್ ಸ್ಪೇಷಲಿಟಿ ಆಸ್ಪತ್ರೆಗಳನ್ನು ತೆಗೆಯುವ ಕನಸಿದೆ ಎಂದು ಹೇಳಿದರು. ಇನ್ನು ನಮ್ಮ ಸಂಸ್ಥೆಯ ಹೃದಯವಾಗಿರುವ ಪಿಡಿಎ ಇಂಜಿನಿಯರಿಂಗ್ ಕಾಲೇಜು ಈಗ ಕರ್ನಾಟಕ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡು ಐಟಿ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದೆ ಎಂದು ಹೇಳಿದರು.



ಉದಯವಾಹಿನಿ ಚಿತ್ರ

**ಸಂಸ್ಥೆಗೆ ತಾಯಿಯ ಸ್ಥಾನದಲ್ಲಿ ಇರುವ ಬಸವೇಶ್ವರ ಆಸ್ಪತ್ರೆಯು ಹಿಂದಿನ ಆಡಳಿತದಲ್ಲಿ ಅಧೋಗತಿ ಸ್ಥಿತಿ ತಲುಪಿತ್ತು ಇದನ್ನು ನಾನು ಹೇಳುತ್ತಿಲ್ಲ ಸಾಮಾನ್ಯ ಜನರ ಅಭಿಪ್ರಾಯವಾಗಿತ್ತು ಆದರೆ ಇದನ್ನು ಸರಿ ದಾರಿಗೆ ತರಬೇಕಾದರೆ ಒಂದು ವರ್ಷವೆ ಹಿಡಿಯಿತು ಈಗ ಆಸ್ಪತ್ರೆಯು ಬಹಳಷ್ಟು ಪರಿಣಿತ ವೈದ್ಯರಿಂದ ಕೂಡಿದ್ದು ಈಗ ಕಲಬುರ್ಗಿ ನಗರದಲ್ಲಿ ರೋಗಿಗಳ ಪಾಲಿಗೆ ಸಂಜೀವಿನಿಯಾಗಿ ಕಾರ್ಯ ನಿರ್ವಹಿಸುತ್ತಿದೆ ಇಲ್ಲಿನ ಸಿಬ್ಬಂದಿಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಈಗಾಗಲೇ ಮಹಾದೇವಪ್ಪ ರಾಂಪೂರೆ ವೈದ್ಯಕೀಯ ಮಹಾವಿದ್ಯಾಲಯದ ಬೋಧಕ ಸಿಬ್ಬಂದಿಗಳಿಗೆ ಸಂಬಳ ಹೆಚ್ಚಳ ಮಾಡಲಾಗಿದೆ ಸುಮಾರು 40 ಸಾವಿರದಿಂದ 1 ಲಕ್ಷದವರೆಗೆ ವೇತನ ಹೆಚ್ಚಳ ಮಾಡಲಾಗಿದೆ –ಶಶೀಲ್ ಜಿ ನಮೋಶಿ**

**ಸದೃಢವಾಗಿ ಬೆಳೆಸುವ ಜವಾಬ್ದಾರಿ**

**12 ವರ್ಷಗಳ ಹಿಂದೆ ನಾನೇ ಘೋಷಣೆ ಮಾಡಿದ್ದ 6 ನೇ ವೇತನ ಪರಿಷ್ಕರಣೆಗೆ ಕೊನೆಗೂ ನಾನು ಹಾಗೂ ನಮ್ಮ ತಂಡವೆ ಬರಬೇಕಾಯಿತು ನೀವು ಸಹ ಆರ್ಥಿಕವಾಗಿ ಸಬಲರಾಗಿ ಸಂಸ್ಥೆಯನ್ನು ಸದೃಢವಾಗಿ ಬೆಳೆಸುವ ಜವಾಬ್ದಾರಿ ನಿಮ್ಮ ಮೇಲಿದೆ ಎಂದು ಹೇಳಿದರು.**

# ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅರ್ಜಿ ಅಹ್ವಾನ

• ಉದಯವಾಹಿನಿ, ಚಿಂಚೋಳಿ

ಪಟ್ಟಣದ ಡಿ.ದೇವರಾಜ ಅರಸು ಭವನದಲ್ಲಿ ಭಾರತೀಯ ಸೇನೆ/ ಇತರೆ ಯೂನಿಫಾರ್ಮ್ ಸೇವೆಗಳಿಗೆ ಸೇರ ಬಯಸುವ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ–1,2(ಎ).3(ಎ) ಹಾಗೂ 3(ಬಿ)ಗಳ ಅರ್ಹ ಅಭ್ಯರ್ಥಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2025–26ನೇ ಸಾಲಿನಲ್ಲಿ ಆಯ್ಕೆಯ ಪೂರ್ವ ಸಿದ್ಧತೆ ಬಗ್ಗೆ ವೃತ್ತಿ ಮಾರ್ಗದರ್ಶನ ಹಾಗೂ ತರಬೇತಿಯನ್ನು ಉಚಿತವಾಗಿ ನೀಡುತ್ತಿದ್ದು ತರಬೇತಿಗಾಗಿ ಅರ್ಹ 2ನೇ ಬ್ಯಾಚ್ ಪ್ರಾರಂಭಿಸಲು ಅಭ್ಯರ್ಥಿಗಳಿಂದ ಅರ್ಜಿಗಳನ್ನು ಬಾಲಕರಿಗೆ ಮಾತ್ರ ಆಹ್ವಾನಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಲ್ಯಾಣಾಧಿಕಾರಿ ಅನುಸೋಯಾ ಚವ್ಹಾಣ ತಿಳಿಸಿದ್ದಾರೆ.



**ಪ್ರಕಟನೆ ಹೊರಡಿಸಿದ ಅವರು, ಅಭ್ಯರ್ಥಿಗಳಿಗೆ ನಿಗಧಿಗೊಳಿಸಿರುವ ಸಾಮಾನ್ಯ ಅರ್ಹತೆಗಳು:–** ಅಭ್ಯರ್ಥಿಯು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿದ್ದು,ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ3ಬಿ ಸೇರಿರಬೇಕು,ಅಭ್ಯರ್ಥಿ ಮತ್ತು ಕುಟುಂಬದ ಒಟ್ಟು ಗರಿಷ್ಠ ವಾರ್ಷಿಕ ಆದಾಯ ಮಿತಿ (ಪ್ರವರ್ಗ–1 ಕ್ಕೆ ರೂ.2.50 ಲಕ್ಷಗಳು ಹಾಗೂ ಪ್ರವರ್ಗ 2(ಎ), 3(ಎ) ಮತ್ತು 3(ಬಿ) ಗಳಿಗೆ ರೂ. 1.00 ಲಕ್ಷಗಳು ಮೀರಿರಬಾರದು, ಕನಿಷ್ಠ ವಿದ್ಯಾರ್ಹತೆ–ಅಭ್ಯರ್ಥಿಯು 10ನೇ ತರಗತಿಯನ್ನು ಉತ್ತೀರ್ಣವಾಗಿದ್ದು ಪ್ರತಿ ವಿಷಯದಲ್ಲಿ ಕನಿಷ್ಠ 33 ಅಂಕಗಳು ಮತ್ತು ಸರಾಸರಿ ಶೇ.45ರಷ್ಟು ಅಂಕಗಳನ್ನು ಪಡೆದಿರಬೇಕು, ಗ್ರೇಡಿಂಗ್ ಸಿಸ್ಟಮ್ ಇದ್ದಲ್ಲಿ ಮೇಲ್ಕಂಡಂತೆ ಸಮಾನವಾದ ಗ್ರೇಡ್ ಪಡೆದಿರಬೇಕು.

**ವಯೋಮಿತಿ:–** ಅಭ್ಯರ್ಥಿಯ ವಯೋಮಿತಿ 17 ರಿಂದ 20 ವರ್ಷದೊಳಗಿರಬೇಕು,01–ಎಪ್ರೀಲ್–2025 ರಿಂದ ಅನ್ವಯಿಸುವಂತೆ ಅಭ್ಯರ್ಥಿಯ ವಯಸ್ಸನ್ನು ಪರಿಗಣಿಸಲಾಗುವುದು,ಅಭ್ಯರ್ಥಿಯು 01 ಎಪ್ರೀಲ್–2005 ರಿಂದ 01–ಎಪ್ರಿಲ್–2008 ರ ನಡುವಿನ ಅವಧಿಯಲ್ಲಿ ಜನಿಸಿರಬೇಕು, ತರಬೇತಿ ನೀಡುವ ಸ್ಥಳಗಳು:– ತರಬೇತಿಯನ್ನು ಕಲಬುರಗಿ ಜಿಲ್ಲಾ ಕೇಂದ್ರದಲ್ಲಿ ನೀಡಲಾಗುವುದು,ಸದರಿ ಜಿಲ್ಲೆಯ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಗೆ ಅಥವಾ ತಾಲ್ಲೂಕಾ ಕಛೇರಿಗೆ ಅರ್ಜಿಯನ್ನು ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:27.04.2025ರಂದು ಕೊನೆಯದಿನವಾಗಿದೆ ಎಂದು ತಿಳಿಸಿದ್ದಾರೆ.

# ಬಿಜೆಪಿ ಸರ್ಕಾರ ವಕ್ಫ್ ತಿದ್ದುಪಡಿ ಕಾಯ್ದೆ ಹಿಂಪಡೆಯಬೇಕು

• ಉದಯವಾಹಿನಿ, ಕೆಂಭಾವಿ

ವಕ್ಫ್ ತಿದ್ದುಪಡಿ ಕಾಯ್ದೆಯನ್ನು ಹಿಂಪಡೆಯುವಂತೆ ನ್ಯಾಯ ಕ್ರಾಂತಿ ಸಂಘವನ್ನು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಕ್ಕೆ ಆಗ್ರಹಿಸುವ ಮೂಲಕ ಉಪ ತಹಶೀಲ್ದಾರರ ಮುಖಾಂತರ ಮನವಿ ಸಲ್ಲಿಸಿದ್ದಾರೆ.

ಮನವಿ ಸಲ್ಲಿಸಿ ಮಾತನಾಡಿದ ಕಲ್ಯಾಣ ಕರ್ನಾಟಕ ಅಧ್ಯಕ್ಷ ಬಂದೇನವಾಜ್. ಕೆ. ನಾಶಿ, ಕೇಂದ್ರ ಬಿಜೆಪಿ ಸರ್ಕಾರ ವಕ್ಫ್ ತಿದ್ದುಪಡೆ ಕಾಯ್ದೆ ಯನ್ನು ಲೋಕಸಭೆಯಲ್ಲಿ ಹಾಗೂ ಮೆಲ್ಮನೆಯಲ್ಲಿ ಪಾಸ್ ಮಾಡಿ ಸಂವಿಧಾನಕ್ಕೆ ದ್ರೋಹ ಬಗೆದು ಐತಿಹಾಸಿಕ ಅನ್ಯಾಯವನ್ನು ಮಾಡಿದೆ, ಭಾರತದ ಸ್ವತಂತ್ರದಿಂದ ಇಲ್ಲಿಯ ವರೆಗೆ ಇಂತಹ ಕರಾಳ ದಿನವನ್ನು ಕಂಡಿರಲಿಲ್ಲ ಸಂವಿಧಾನದ ಅನುಚ್ಛೇಧ 25 ರಿಂದ 28 ರವರೆಗೆ ಧಾರ್ಮಿಕ ಸ್ವಾತಂತ್ರವನ್ನು ಕೊಟ್ಟಿದೆ.

ಆದರೆ ಜಾತಿವಾದಿ ಬಿಜೆಪಿ ಸರ್ಕಾರ ಸ್ಪಷ್ಟವಾಗಿರುವ ಸಂವಿಧಾನವನ್ನು ಉಲ್ಲಂಘಿಸಿ ಮುಸಲ್ಮಾನರನ್ನು ಹತ್ತಿಕ್ಕುವ ಏಕೈಕ ದುರುದ್ದೇಶದಿಂದ ಇವರು ಈ ಕಾನೂನನ್ನು ಪಾಸು ಮಾಡಿದ್ದಾರೆ ಈ ಮೂಲಕ ಮುಸಲ್ಮಾನರ ಧಾರ್ಮಿಕ ಆಸ್ತಿಗಳನ್ನು ಕೊಳ್ಳೆ ಹೊಡೆಯುವ ದುಷ್ಟ ಸಂಚು ರೂಪಿಸಿದ್ದಾರೆ. ಇದು ಸಂಪೂರ್ಣ ಸಂವಿಧಾನ



ಉದಯವಾಹಿನಿ ಚಿತ್ರ

ವಿರೋಧಿ ಯಾಗಿದ್ದು ಇದನ್ನು ಈ ಕೂಡಲೆ ಹಿಂಪಡೆಯಬೇಕು ಇಲ್ಲದಿದ್ದರೆ ದೇಶಾದ್ಯಂತ ಹೋರಾಟ ಮಾಡಬೇಕಾಗುತ್ತದೇ ಯಾವುದೆ ಕಾರಣಕ್ಕೂ ನಮ್ಮ ಸಂವಿಧಾನಿಕ ಹಕ್ಕನ್ನು ಕಸಿದು ಕೊಳ್ಳಲು ಸಾಧ್ಯವಿಲ್ಲ ಹಾಗೂ ಪಕ್ಷಪಾತ ಧೋರಣೆಯನ್ನು ಸಂವಿಧಾನ ಸಹಿಸುವುದಿಲ್ಲಾ.

ಈ ಕೂಡಲೆ ಈ ಸಂವಿಧಾನ ವಿರೋಧಿ ಕಾನೂನನ್ನು ಈ ಕರಾಳ ಕಾನೂನನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದ್ದಾರೆ. ಈ ಸಂಧರ್ಭದಲ್ಲಿ ಅಮೀರಖಾನ್ ಇನಾಮದಾರ್, ಫಯಾಜ್, ಇಸ್ಮಾಯಿಲ್ ಸಾಸನೂರ್,ಬಂದೇನವಾಜ್ ಜಂಡೆವಾಲೆ, ಸೈಫುಲಾಲ್ ನಾಶಿ, ಎಂ.ಡಿ ಮೇಸ್ತ್ರಿ, ಹಾಗೂ ಇತರರು ಇದ್ದರು.

# ಬಾಲ್ಯ ವಿವಾಹ ಹೆಣ್ಣುಮಕ್ಕಳ ಭವಿಷ್ಯಕ್ಕೆ ಮಾರಕ

• ಉದಯವಾಹಿನಿ, ವಾಡಿ

ಹೆಣ್ಣುಮಕ್ಕಳನ್ನು ಶಿಕ್ಷಣದಿಂದ ವಂಚಿತಗೊಳಿಸುವ ಮೂಲಕ ಬಾಲ್ಯ ವಿವಾಹಕ್ಕೆ ತಳ್ಳಿದರೆ ಅವರು ಜೀವನದಲ್ಲಿ ನರಕಯಾತನೆ ಅನುಭವಿಸಬೇಕಾಗುತ್ತದೆ ಪೋಷಕರು ಇಂಥ ಕೆಟ್ಟ ಪದ್ಧತಿಗೆ ನಿಮ್ಮ ಮಕ್ಕಳನ್ನು ತಳ್ಳಬಾರದು ಎಂದು ಎಲ್ ಎಲ್ ಎಫ್ ಸಂಸ್ಥೆಯ ವ್ಯವಸ್ಥಾಪಕ ಗುರಪ್ಪ ಜಮಲಪುರ ಹೇಳಿದರು.

ಚಿತ್ತಾಪುರ ತಾಲೂಕಿನ ನಾಲವಾರ ಗ್ರಾಪಂ ವ್ಯಾಪ್ತಿಯ ಭೋಜುನಾಯಕ ತಾಂಡಾದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಇಚೇಗೆ ಎಲ್ ಎಲ್ ಎಫ್ ಸಂಸ್ಥೆಯಿಂದ ಆಯೋಜಿಸಿದ್ದ ಬಾಲ್ಯ ವಿವಾಹ ನಿರ್ಮೂಲನ ಜಾಗೃತಿ ಸಭೆ ಉದ್ದೇಶಿಸಿ ಅವರು ಮಾತನಾಡಿದರು. ಬಾಲ್ಯ ವಿವಾಹ ಪದ್ಧತಿ ಒಂದು ಅನಿಷ್ಟ ಪದ್ಧತಿ ಆಗಿದೆ. ಸರಕಾರ ಹೆಣ್ಣಿಗೆ 18 ವರ್ಷ ಗುಂಡು ಮಕ್ಕಳಿಗೆ 21 ವರ್ಷ ಆದ ಬಳಿಕ ಮದುವೆಗೆ ನಿಗದಿ ಮಾಡಿದೆ.



ಉದಯವಾಹಿನಿ ಚಿತ್ರ

ಆದರೂ ಇದನ್ನು ಅರಿಯದ ನಾವುಗಳು ಬಾಲ್ಯ ವಿವಾಹ ಮಾಡಲು ಮುಂದಾಗುತ್ತಿರುವುದು ದುರಂತದ ವಿಷಯವಾಗಿದೆ. ಬಾಲ್ಯ ವಿವಾಹ ಮಾಡಲು ಅನುವು ಮಾಡಿದರೆ ಪ್ರಚೋದನೆ ನೀಡಿದಂತಾಗುತ್ತದೆ. ಬಾಲ್ಯ ವಿವಾಹಕ್ಕೆ ಒಳಗಾದ ಹೆಣ್ಣು ಮಕ್ಕಳು ಅನಾರೋಗ್ಯಕ್ಕೆ ತುತ್ತಾಗಿ ಕಷ್ಟ ಅನುಭವಿಸಬೇಕಾಗುತ್ತದೆ. ಇದನ್ನು ಅರಿತುಕೊಂಡು ಪೋಷಕರು ಯಾವುದೇ ಕಾರಣಕ್ಕೂ ನಿಮ್ಮ ಮಕ್ಕಳನ್ನು ಬಾಲ್ಯ ವಿವಾಹಕ್ಕೆ ತಳ್ಳಬೇಡಿ ಎಂದು ತಿಳಿ ಹೇಳಿದರು.

# ಸಾಂಸ್ಕೃತಿಕ ಚಟುವಟಿಕೆಗಳ ಸಮಾರಂಭ

• ಉದಯವಾಹಿನಿ, ಗುಳೇದಗುಡ್ಡ

ಶಿಕ್ಷಕರ ತರಬೇತಿಯಲ್ಲಿರುವ ಪ್ರಶಿಕ್ಷಣಾರ್ಥಿಗಳು,ತರಬೇತಿ ನೀಡುವ ಪ್ರಶಿಕ್ಷಕರು ಬೋಧನೆ ಮಾಡುವಾಗ ಪೂರ್ವಸಿದ್ದತೆಯೊಂದಿಗೆ ಗುಣಾತ್ಮಕವಾಗಿ ಪಾಠಮಾಡಬೇಕೆಂದು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಮೀನಾ ಚಂದಾವರಕರ್ ಹೇಳಿದರು.

ಪಟ್ಟಣದ ಗುರುಸಿದ್ದೇಶ್ವರ ಮಹಿಳಾ ಬಿ.ಎಡ್.ಕಾಲೇಜಿನಲ್ಲಿ ಜರುಗಿದ 2025–26 ನೇ ಸಾಲಿನ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳ ಸ್ವಾಗತ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ನಾವು ಶಿಕ್ಷಕರ ತರಬೇತಿಯಲ್ಲಿದ್ದಾಗ ತಂತ್ರಜ್ಞಾನ ಪಾಠ ಮಾಡುವ ವ್ಯವಸ್ಥೆ ಇರಲಿಲ್ಲ ಈಗ



ಉದಯವಾಹಿನಿ ಚಿತ್ರ

ಸಾಮಾಜಿಕ ಮಾಧ್ಯಮ ಹೆಚ್ಚು ಸಕ್ರೀಯವಾಗಿದೆ ಅವುಗಳನ್ನು ಬಳಸಿಕೊಂಡು ಪಾಠಮಾಡಿ ಉತ್ತಮ ಶಿಕ್ಷಕರಾಗಬೇಕು ಮತ್ತು ಇಂದು ಜೀವನದಲ್ಲಿ ಮೌಲ್ಯಗಳು ಕಡಿಮೆಯಾಗುತ್ತಿದ್ದು ಮಕ್ಕಳಲ್ಲಿ ಕಥೆಗಳನ್ನು ಹೇಳುವ ಮೂಲಕ ಮೌಲ್ಯ ತುಂಬಿ ಉತ್ತಮ ಸಮಾಜ ನಿರ್ಮಾಣ ಮಾಡಬೇಕೆಂದರು. ಇದೇ ಸಂದರ್ಭದಲ್ಲಿ ವಿವಿಧ ವಿಭಾಗಗಳಿಗೆ ಆಯ್ಕೆಯಾದ ಪ್ರತಿನಿಧಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು ಮತ್ತು ವಿವಿಧ ಸ್ಪರ್ಧೆಗಳಲ್ಲಿ ವಿಜೇತ ಪ್ರಶಿಕ್ಷಣಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು.

ಸಂಸ್ಥೆಯ ವೈಸ್ ಚೇರಮನ್ ಬಸವರಾಜ ಚಿಂದಿ ಅಧ್ಯಕ್ಷತೆವಹಿಸಿ ಮಾತನಾಡಿ ಶಿಕ್ಷಕರಿಂದ ಮಾತ್ರ ದೇಶ ಕಟ್ಟಲು ಸಾಧ್ಯ. ಶಿಕ್ಷಕರಾಗುವ ನೀವು ಉತ್ತಮ ಅಧ್ಯಯನಶೀಲತೆ ರೂಢಿಸಿಕೊಂಡು ಉತ್ತಮ, ಆದರ್ಶ ಶಿಕ್ಷಕರಾಗಬೇಕೆಂದು ಹೇಳಿದರು. ಸಂಸ್ಥೆಯ ಪ್ರಾಚಾರ್ಯ ಎಚ್. ಎಸ್.ಘಂಟಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಇಂದುಮತಿ ಬೋರಣ್ಣವರ, ಸರಿತಾ ಚಂದನ್ನವರ, ಸಕ್ಕೂಬಾಯಿ ನೆಲ್ಲೂರ, ಪ್ರಸಾದ ರಾಠೋಡ,ರವಿಕಿರಣ ಇದ್ದರು.

# ಇಂದಿನ ಕಾಲದಲ್ಲಿ ಅನೇಕ ಬೇಸಿಗೆ ಶಿಬಿರಗಳು ಇದ್ದರೂ ಶಾಂತಿಕುಟೀರದಲ್ಲಿ ನಡೆಯುವ ಬೇಸಿಗೆ ಶಿಬಿರ ವಿಶೇಷ

# ಸಂಸ್ಕಾರ ಇದ್ದಾಗ ಮಾತ್ರ ಶಿಕ್ಷಣಕ್ಕೆ ಬೆಲೆ: ಸೋಮೇಶ್ವರ ಸ್ವಾಮೀಜಿ

• ಉದಯವಾಹಿನಿ, ವಿಜಯಪುರ

ನಮ್ಮಲ್ಲಿರುವಂತಹ ಶಿಕ್ಷಣಕ್ಕೆ ಬೆಲೆ ಬರಬೇಕಾದರೆ ಅದಕ್ಕೆ ಸಂಸ್ಕಾರವಿದ್ದಾಗ ಮಾತ್ರ ಸಾಧ್ಯ. ಶಿಕ್ಷಣವನ್ನು ಎಲ್ಲರೂ ಪಡೆಯುತ್ತಾರೆ. ಆದರೆ ಸಂಸ್ಕಾರವನ್ನು ಎಲ್ಲರೂ ಪಡೆಯುವುದಿಲ್ಲ. ಆದರೆ ಕನ್ನೂರಿನ ಸುತ್ತಮುತ್ತಲಿನ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುವುದರ ಜೊತೆಗೆ ಸಂಸ್ಕಾರವನ್ನು ನೀಡುವ ಏಕೈಕ ಬೇಸಿಗೆ ಶಿಬಿರ ಎಂದರೆ ಅದು ಶಾಂತಿಕುಟೀರದಲ್ಲಿ ನಡೆಯುವ ಬೇಸಿಗೆ ಶಿಬಿರ ಎಂದು ಮಖಣಾಪುರ ಗುರುಪೀಠದ ಪ.ಪೂ ಸೋಮೇಶ್ವರ ಸ್ವಾಮೀಜಿ ತಿಳಿಸಿದರು.

ವಿಜಯಪುರ ಜಿಲ್ಲೆಯ ಕನ್ನೂರಿನ ಶಾಂತಿಕುಟೀರ ಆಶ್ರಮದಲ್ಲಿ ಶಾಂತಿಕುಟಿರ ಟ್ರಸ್ಟ್ ಮತ್ತು ಭಾರತೀಯ ಸುರಾಜ್ಯ ಸಂಸ್ಥೆ ಹಾಗೂ ಸಂಡೂರಿನ ಶ್ರೀಶೈಲೇಶ್ವರ ವಿದ್ಯಾಕೇಂದ್ರ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಉಚಿತ ಶೈಕ್ಷಣಿಕ ಮತ್ತು ಆಧ್ಯಾತ್ಮಿಕ ಬೇಸಿಗೆ ಶಿಬಿರ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು.

ಸುಮಾರು ವರ್ಷಗಳಿಂದ ಆಶ್ರಮದ ಸುತ್ತಮುತ್ತಲಿನ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಶಿಕ್ಷಣವಂತರು, ಸಂಸ್ಕಾರಯುತ ಚಾರಿತ್ರ್ಯವಂತರಾಗಬೇಕು ಎನ್ನುವ ಮಹದುದ್ದೇಶದಿಂದ ಸಮರ್ಥ ಸದ್ಗುರು ಗಣಪತರಾವ ಮಹಾರಾಜರ ಆಶಯದಂತೆ ನಡೆಯುವ ಈ ಶಿಬಿರದಲ್ಲಿ ಪಾಲ್ಗೊಂಡ ಮಕ್ಕಳು ಭಾಗ್ಯವಂತರು.

ಈ ಶಿಬಿರದಲ್ಲಿ ಭಾಗವಹಿಸುವ ಎಲ್ಲಾ ಶಿಬಿರಾರ್ಥಿಗಳಿಗೆ ಎಲ್ಲಾ ಉಚಿತವಾಗಿ ಕೊಡ ಮಾಡಲಾಗಿದ್ದು ಈ ಭಾಗದ ಮಕ್ಕಳಿಗೆ ತುಂಬಾ ಉಪಯುಕ್ತವಾಗಿದೆ. ತಾವೆಲ್ಲರೂ ಗಣಪತರಾವ ಮಹಾರಾಜರು ಮತ್ತು ಸಿದ್ದೇಶ್ವರ ಶ್ರೀಗಳು ಜನಿಸಿದ ಪುಣ್ಯ ಭೂಮಿಯಾಗಿದ್ದು, ತಾವೆಲ್ಲರೂ ಅವರ ಆದರ್ಶಗಳನ್ನು ಪಾಲಿಸುತ್ತಾ ಸಜ್ಜನರ ಸಂಗ ಮಾಡುತ್ತಾ, ಹೆತ್ತ ತಂದೆತಾಯಿಗಳ ನೆಚ್ಚಿನ ಮಕ್ಕಳಾಗಿ, ಗುರುಗಳಿಗೆ ನೆಚ್ಚಿನ ಶಿಷ್ಯರಾಗಿ ಗುರು ಹಿರಿಯರನ್ನು ಗೌರವಿಸುವಂತಹ ಗುಣಗಳನ್ನು ಹೊಂದಿ ಉತ್ತಮ ಸಮಾಜ ನಿರ್ಮಾಣ ಮಾಡುವ ಶಕ್ತಿವಂತರು ತಾವಾಗಿ ಎಂದು ಶುಭ ಹಾರೈಸಿದರು.

ಈ ಆಶ್ರಮಕ್ಕೂ ನನಗೂ ಅವಿನಾಭಾವ ಸಂಬಂಧ ಇದ್ದು ಈ ಆಶ್ರಮದಲ್ಲಿ ನಡೆಯುವ ಕಾರ್ಯಕ್ರಮಗಳು ಅರ್ಥಪೂರ್ಣವಾಗಿದ್ದು ಸಮಾಜ ಸೇವಾ ಮತ್ತು ಸಮಾಜ ಸುಧಾರಣಾ ಕಾರ್ಯಕ್ರಮಗಳಾಗಿರುತ್ತವೆ. ನಾವು ಅಭಿವೃದ್ಧಿ ಹೊಂದಬೇಕಾದರೆ ಶಿಕ್ಷಣ ಅಮೂಲ್ಯ.

ಆ ಅಮೂಲ್ಯವಾದ ಸಂಪತ್ತನ್ನು ಗುರು ಸಾನ್ನಿಧ್ಯದಲ್ಲಿ ತಾವೆಲ್ಲರೂ ಉಚಿತವಾಗಿ ಪಡೆಯುತ್ತಿರುವುದು ತಾವೇ ಧನ್ಯವಂತರು. ಸುಧೀರ್ಘವಾಗಿ ಒಂದು ತಿಂಗಳ ನಡೆಯುವ ಈ ಶಿಬಿರದಲ್ಲಿ ತಾವೆಲ್ಲರೂ ತಪ್ಪದೆ ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೊಳ್ಳುವುದರ ಜೊತೆಗೆ ಶಿಬಿರದ ಸಾರ್ಥಕತೆಯನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಆದರ್ಶ ವ್ಯಕ್ತಿಗಳು ತಾವಾಗಿ ಎಂದು ತಿಳಿಸಿದರು.

ಸಂಡೂರಿನ ಶ್ರೀಶೈಲೇಶ್ವರ ವಿದ್ಯಾಕೇಂದ್ರದ ಆಡಳಿತಾಧಿಕಾರಿ ಕುಮಾರ್ ಎಸ್ ನಾನಾವಟೆ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಸದ್ಗುರು ಗಣಪತರಾವ ಮಹಾರಾಜರು ಕನ್ನೂರಿನ ಸುತ್ತಮುತ್ತಲಿನ ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು ಆ ಮಕ್ಕಳು ನೀತಿವಂತ, ಗುಣವಂತ, ಆರೋಗ್ಯವಂತ ಮತ್ತು ಬುದ್ಧಿವಂತ ಮಕ್ಕಳನ್ನಾಗಿ ಮಾಡುವ ಆಶಯಕ್ಕೆ ಶ್ರೀಶೈಲೇಶ್ವರ ವಿದ್ಯಾ ಕೇಂದ್ರದ ಸಂಸ್ಥಾಪಕರಾದ ದಿವಂಗತ ಎಸ್ ವಿ ನಾನಾವಟೆ ಗುರುಗಳು ಪ್ರತಿವರ್ಷ ಬೇಸಿಗೆಯಲ್ಲಿ ಈ ಭಾಗದ ಮಕ್ಕಳಿಗೆ ಒಂದು ತಿಂಗಳ ಕಾಲ ಶಾಂತಿಕುಟೀರ ಆಶ್ರಮದಲ್ಲಿ ಉಚಿತ ಬೇಸಿಗೆ ಶಿಬಿರವನ್ನು ಏರ್ಪಡಿಸಬೇಕು ಎನ್ನುವ ಅವರ ಮನೋ ಇಚ್ಛೆಯನ್ನು ಮಹಾರಾಜರಿಗೆ ತಿಳಿಸಿದಾಗ ಮಹಾರಾಜರು ಇದಕ್ಕೆ ಸಂಪೂರ್ಣ ಸಮ್ಮತಿ ನೀಡಿ ದರು ಎಂದು ತಿಳಿಸಿದರು.

**ಕಲಿಕೆಯೊಂದಿಗೆ ಅಭಿವೃದ್ಧಿ**

**ಇಂದಿನ ಕಾಲದಲ್ಲಿ ಅನೇಕ ಬೇಸಿಗೆ ಶಿಬಿರಗಳು ಇದ್ದರೂ ಶಾಂತಿಕುಟೀರದಲ್ಲಿ ನಡೆಯುವ ಬೇಸಿಗೆ ಶಿಬಿರ ವಿಶೇಷ ಮತ್ತು ವಿಭಿನ್ನವಾಗಿದ್ದು ಇಲ್ಲಿ ಭಾಗವಹಿಸುವ ಪ್ರತಿಯೊಂದು ಮಗುವು ಶಿಕ್ಷಣದ ಜೊತೆಗೆ ಆಧ್ಯಾತ್ಮಿಕ ಮತ್ತು ಸಂಸ್ಕಾರಯುತ ಕಲಿಕೆಯೊಂದಿಗೆ ಸರ್ವತೋಮುಖ ಅಭಿವೃದ್ಧಿ ಹೊಂದಲು ಕಾರಣವಾಗಿದೆ.**



ಉದಯವಾಹಿನಿ ಚಿತ್ರ

**ಸಂಸ್ಕಾರ ಹೀನ ಶಿಕ್ಷಣ ಸಮಾಜಘಾತಕವಾದುದು. ಭೇದ ಭಾವನೆ ನಮ್ಮಿಂದ ದೂರವಾಗಬೇಕು, ಸದ್ಗುಣಗಳು ನಮ್ಮಲ್ಲಿ ಬರಬೇಕಾದರೆ ಇಂತಹ ಶಿಬಿರದಿಂದ ಮಾತ್ರ ಸಾಧ್ಯ ಏಕೆಂದರೆ ಎಲ್ಲಾ ಮಕ್ಕಳಿಗೆ ಪ್ರಾರ್ಥನೆಯನ್ನು ಮಾಡಿಸುವುದರ ಮೂಲಕ ಆಧ್ಯಾತ್ಮಿಕದ ಫಲವನ್ನು ಶಿಕ್ಷಣದ ಜೊತೆಗೆ ಕೊಡುವುದರಿಂದ ಮಕ್ಕಳು ಏಕಾಗ್ರತೆಯನ್ನು ಹೆಚ್ಚಿಸಿಕೊಂಡು ಕಲಿಕೆಯಲ್ಲಿ ಮುಂದುವರೆಯಲು ಅತಿ ಉಪಯುಕ್ತವಾಗಿದೆ**

**–ಡಾ. ಎಚ್ .ವೆಂಕಟೇಶ, ಶ್ರೀ ಸಿದ್ದೇಶ್ವರ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ**

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸಗಳನ್ನು ಮಾಡಲು ಒಂದು ಅದ್ಭುತ ದಿನ. ಇಂದು ನೀವು ನಿಮ್ಮ ಮಕ್ಕಳ ಕಾರಣದಿಂದ ಆರ್ಥಿಕ ಲಾಭವನ್ನು ಪಡೆಯುವ ಸಾಧ್ಯತೆ ಕಂಡು ಬರುತ್ತಿದೆ.

**ವೃಷಭ** ಆರೋಗ್ಯ ಚೆನ್ನಾಗಿರುತ್ತದೆ. ದೀರ್ಘಕಾಲದವರೆಗೆ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದವರು, ಅವರು ಇಂದು ಎಲ್ಲಿಂದಲಾದರೂ ಹಣವನ್ನು ಪಡೆಯಬಹುದು, ಇದು ಜೀವನದ ಅನೇಕ ಸಮಸ್ಯೆಗಳನ್ನು ತೆಗೆದುಹಾಕುತ್ತದೆ.

**ಮಿಥುನ** ನಿಮ್ಮ ದಯಾಳು ಪ್ರಕೃತಿ ಇಂದು ಅನೇಕ ಸಂತೋಷದ ಕ್ಷಣಗಳನ್ನು ತರುತ್ತದೆ. ಬಾಕಿಯಿರುವ ವಿಷಯಗಳು ರಹಸ್ಯಮಯವಾಗುತ್ತವೆ ಮತ್ತು ವೆಚ್ಚಗಳು ನಿಮ್ಮ ಮನಸ್ಸನ್ನು ಆವರಿಸಿಕೊಳ್ಳುತ್ತವೆ.

**ಕರ್ಕಾಟಕ** ನಿಮ್ಮ ಮಗುವಿನ ಒಂದು ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕೆ ಆಮಂತ್ರಣ ಸಂತೋಷದ ಮೂಲವಾಗಬಹುದು. ಅವನು(ಳು) ನಿಮ್ಮ ನಿರೀಕ್ಷೆಗಳನ್ನು ಪೂರ್ತಿಗೊಳಿಸುವುದು ನಿಮ್ಮ ಕನಸನ್ನು ನನಸಾಗಿಸಬಹುದು.

**ಸಿಂಹ** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ.

**ಕನ್ಯಾ** ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ. ದಿನದ ಆರಂಭವು ಚೆನ್ನಾಗಿ ಆಗಿದರು, ಸಂಜೆಯ ಸಮಯದಲ್ಲಿ ಯಾವುದೇ ಕಾರಣದಿಂದ ನಿಮ್ಮ ಹಣ ಖರ್ಚಾಗಬಹುದು.

**ತುಲಾ** ಇಂದು ನಿಮಗೆ ಹಣದ ಅಗತ್ಯ ವಿರಬಹುದು ಆದರೆ ಅದು ನಿಮಗೆ ದೊರೆಯುವುದಿಲ್ಲ. ಅರ್ಹರಿಗೆ ವೈವಾಹಿಕ ಮೈತ್ರಿಗಳು. ನಿಮ್ಮ ಸಂಗಾತಿಯ ಚಿತ್ತ ಚೆನ್ನಾಗಿರುವಂತೆ ಕಾಣದಿದ್ದರೂ ವಿಷಯಗಳನ್ನು ಸರಿಯಾಗಿ ನಿರ್ವಹಿಸಿ.

**ವೃಶ್ಚಿಕ** ಮನರಂಜನೆ ಮತ್ತು ಮೋಜಿನ ಒಂದು ದಿನ. ನಿಮ್ಮ ತಾಯಿಯ ಬದಿಯಿಂದ ಇಂದು ಹಣಕಾಸಿನ ಲಾಭವನ್ನು ಪಡೆಯುವ ಪೂರ್ಣ ಸಾಧ್ಯತೆ ಇದೆ. ನಿಮ್ಮ ಮಾಮ ಅಥವಾ ತಾತ ನಿಮಗೆ ಆರ್ಥಿಕ ಬೆಂಬಲ ಮಾಡಬಹುದು.

**ಧನಸ್ಸು** ಪ್ರಕೃತಿಯು ನಿಮ್ಮಲ್ಲಿ ಗಮನಾರ್ಹ ವಿಶ್ವಾಸ ಮತ್ತು ಬುದ್ಧಿವಂತಿಕೆಯನ್ನಿರಿಸಿದೆ - ಅದನ್ನು ಸಾಧ್ಯವಾದಷ್ಟೂ ಬಳಸಿಕೊಳ್ಳಿ. ಇಂದು ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಮರ್ಥರಾಗಿರುತ್ತೀರಿ.

**ಮಕರ** ನಿಮ್ಮ ಭಯವನ್ನು ಗುಣಪಡಿಸಲು ಇದು ಒಳ್ಳೆಯ ಸಮಯ. ಇದು ಭೌತಿಕ ಚೈತನ್ಯವನ್ನು ಕಡಿಮೆ ಮಾಡುವುದಲ್ಲದೇ ಜೀವಿತಾವಧಿಯನ್ನೂ ಕಡಿಮೆ ಮಾಡುತ್ತದೆ ಎಂದು ನೀವು ಅರ್ಥ ಮಾಡಿಕೊಳ್ಳಬೇಕು.

**ಕುಂಭ** ಮೊಮ್ಮಕ್ಕಳು ಅಪಾರ ಸಂತೋಷದ ಮೂಲವಾಗುತ್ತಾರೆ. ಇಂದು ಪ್ರಣಯದ ಯಾವುದೇ ಆಸೆಯಿಲ್ಲ ಹತ್ತಿರದ ಸಹಯೋಗಿಗಳ ಜೊತೆ ಹಲವಾರು ಭಿನ್ನಾಭಿಪ್ರಾಯಗಳು ಉದ್ಭವಿಸಬಹುದಾದ ಒತ್ತಡ ತುಂಬಿದ ದಿನ.

**ಮೀನ** ನಿಮ್ಮ ಆರೋಗ್ಯ ಸುಧಾರಿಸಲು ಸಹಕಾರಿಯಾಗುವ ಕೆಲಸಗಳನ್ನು ಮಾಡಬಹುದಾದ ಒಂದು ದಿನ. ನಿಮ್ಮ ಸಹೋದರ-ಸಹೋದರಿಯರಲ್ಲಿ ಒಬ್ಬರು ಇಂದು ನಿಮ್ಮಿಂದ ಹಣವನ್ನು ಎರವಲು ಪಡೆಯಬಹುದು.

## ಬೇಸಿಗೆ ಶಿಬಿರಗಳು ಮಕ್ಕಳ ಸಂಸ್ಕಾರವಂತ ಜೀವನದ ಬುನಾದಿ

### ಶ್ರೀಮತಿ ಸುಜಾತ ಲಿಂಗಾರೆಡ್ಡಿ ಎಸ್ ಆರ್ ಎಸ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ

• ಉದಯವಾಹಿನಿ, ಚಿತ್ರದುರ್ಗ

ಮಕ್ಕಳ ಶಿಬಿರಗಳು ಕೇವಲ ಮೋಜಿನ ಚಟುವಟಿಕೆಗಳಿಗೆ ಸೀಮಿತವಾಗಿರದೆ, ಬೇಸಿಗೆ ಶಿಬಿರಗಳು ಮಕ್ಕಳ ಸಂಸ್ಕಾರವಂತ ಜೀವನದ ಬುನಾದಿಯಾಗಿವೆ ಜೀವನಕ್ಕೆ ಉಪಯುಕ್ತವಾದ ಅನೇಕ ಮೌಲ್ಯಗಳು ಮತ್ತು ಕೌಶಲ್ಯಗಳನ್ನು ಕಲಿಸುತ್ತವೆ.

ಶಿಬಿರದಲ್ಲಿ ಕಲಿತದ್ದನ್ನು ಮಕ್ಕಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಪೋಷಕರು ಮತ್ತು ಶಿಬಿರ ಆಯೋಜಕರ ಶ್ರಮ ಸಾರ್ಥಕಗೊಳ್ಳುತ್ತದೆ ಎಂದು ಚಿತ್ರದುರ್ಗದ ಎಸ್ ಆರ್ ಎಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀಮತಿ ಸುಜಾತಲಿಂಗಾರೆಡ್ಡಿ ಅಭಿಪ್ರಾಯ ಪಟ್ಟರು.

ದಿನಾಂಕ 10/04//2025ರ ಗುರುವಾರ ಸಂಜೆ ನಗರದ ತುರುವನೂರು ರಸ್ತೆಯ ಶ್ರೀಪ್ರಸನ್ನ ವೆಂಕಟೇಶ್ವರ ಸ್ವಾಮಿ ದೇವಸ್ಥಾನ ಆವರಣದಲ್ಲಿ ಕಳೆದ ಹತ್ತು ದಿನಗಳಿಂದ ಆಯೋಜಿಸಿದ್ದ ಬಾಲಗೋಕುಲ-2025 (ಮಕ್ಕಳ ಬೇಸಿಗೆ ಶಿಬಿರದ) ಸಮಾರೋಪ ಕಾರ್ಯಕ್ರಮಕ್ಕೆ ಶ್ರೀಕೃಷ್ಣ ದೇವರ ಭಾವಚಿತ್ರಕ್ಕೆ ದೀಪ ಬೆಳಗಿಸಿ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿ ಅವರು ಮಾತನಾಡುತ್ತಾ ರಜಾ ವೇಳೆಯಲ್ಲಿ



☛ ಉದಯವಾಹಿನಿ ಚಿತ್ರ

ಮೊಬೈಲ್, ಟಿವಿ ಗೀಳುಗಳಿಂದ ಮಕ್ಕಳನ್ನು ದೂರವಿಟ್ಟು ಇಂತಹ ಶಿಬಿರಗಳಿಗೆ ಸೇರ್ಪಡೆಗೊಳಿಸಿದಲ್ಲಿ ಅವರಿಗೆ ಹೊಸ ಕೌಶಲ್ಯಗಳನ್ನು ಕಲಿಯಲು, ಬೇರೆ ಬೇರೆ ಮಕ್ಕಳೊಡನೆ ಸ್ನೇಹ ಬೆಳೆಸಲು, ಸಂಪನ್ಮೂಲ ವ್ಯಕ್ತಿಗಳಿಂದ ಪಾಠ ಪಡೆಯಲು ಉತ್ತಮ ವೇದಿಕೆಯಾಗಲಿದೆ. ಮಕ್ಕಳನ್ನು ಇಂತಹ ಶಿಬಿರಗಳಲ್ಲಿ ಭಾಗವಹಿಸಲು ಪ್ರೇರೇಪಿಸುವಂತೆ ಮಕ್ಕಳ ಪೋಷಕರಿಗೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ನಿವೃತ್ತ ಹಿರಿಯ ಪೋಲಿಸ್ ಅಧಿಕಾರಿ ಮಲ್ಲಿಕಾರ್ಜುನಚಾರ್ ಕೆ. ಶಿಬಿರದ ಮಕ್ಕಳಿಗೆ ಶಿಬಿರದ ಪ್ರಮಾಣಪತ್ರ ಹಾಗೂ ನೆನಪಿನ ಕಾಣಿಕೆಯನ್ನು ವಿತರಿಸಿ ಮಾತನಾಡಿ ಶಿಕ್ಷಕರಾದವರು ನಮಗೆ ಜ್ಞಾನವನ್ನು ನೀಡುತ್ತಾರೆ ಮತ್ತು ನಮ್ಮನ್ನು ಉತ್ತಮ ವ್ಯಕ್ತಿಗಳಾಗಿ ರೂಪಿಸುತ್ತಾರೆ. ಗುರುಗಳನ್ನು ಗೌರವಿಸುವ ವಿಧ್ಯಾರ್ಥಗಳ ಜೀವನದಲ್ಲಿ ಸೋಲೆಂಬುದು ಇರುವುದಿಲ್ಲ ಜೀವನದಲ್ಲಿ ಎಂತಹ ಸವಾಲನ್ನಾದರೂ ಎದುರಿಸುವ ಧೈರ್ಯ ಲಭಿಸುತ್ತದೆ ಗುರುಗಳನ್ನಷ್ಟೇ ಅಲ್ಲದೆ ನಮ್ಮ ಹಿರಿಯರನ್ನೂ ಗೌರವಿಸುವುದರಿಂದ ನಾವು ಅವರಿಂದ ಹೆಚ್ಚಿನದನ್ನು ಕಲಿಯಲು ಮತ್ತು ಜೀವನದಲ್ಲಿ ಯಶಸ್ವಿಯಾಗಲು ಆತ್ಮಸ್ಥೈರ್ಯ ದೊರಕುತ್ತದೆ ಚಿತ್ರದುರ್ಗದ ಭಾರತೀಯ ಯೋಗ ಶಿಕ್ಷಣ ಸಂಸ್ಥೆಯು ಮಕ್ಕಳಿಗಾಗಿ ಅನೇಕ ಉಚಿತ ಯೋಗ ಶಿಬಿರಗಳು ಮತ್ತು ಬೇಸಿಗೆ ಶಿಬಿರಗಳನ್ನು ಆಯೋಜಿಸುವುದರ ಮೂಲಕ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಮಕ್ಕಳು ಶಿಬಿರದಲ್ಲಿ ಕಳೆದ ಹತ್ತು ದಿನಗಳಿಂದ ಕಲಿತ ವಿಷಯಗಳನ್ನು ಶಿಬಿರದ ಅನುಭವಗಳನ್ನು ಹಂಚಿಕೊಂಡರು. ಹಿರಿಯ ಯೋಗ ಸಾಧಕಿ ಶ್ರೀಮತಿ ವನಜಾಕ್ಷಮ್ಮ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮವನ್ನು ಶಿಬಿರದ ಸಂಯೋಜಕಿ ಶ್ರೀಮತಿ ನಾಗಲತಾ ಮಾತಾಜೀ ನಿರೂಪಿಸಿದರೆ ಸಂಸ್ಥೆಯ ಅಧ್ಯಕ್ಷ ರವಿ ಕೆ.ಅಂಬೇಕರ್ ಎಲ್ಲರನ್ನೂ ಸ್ವಾಗತಿಸಿದರು ಭಾವಸಾರ ಕ್ಷತ್ರಿಯ ಸಮಾಜದ ಮಹಿಳಾ ಮಂಡಳಿ ಅಧ್ಯಕ್ಷೆ ಶ್ರೀಮತಿ ಮಮತಬೇದ್ರೆ, ಚಿತ್ರಕಲಾವಿದೆ ಅರುಣ, ಯೋಗ ಸಾಧಕರಾದ ಶ್ರೀಮತಿ ತಿಪ್ಪಮ್ಮ, ರೇಣುಕಾ, ದುರ್ಗಾಂಬಿಕಾ ಸರಸ್ವತಿ, ಇನ್ನಿತರರು ಉಪಸ್ಥಿತರಿದ್ದರು.

**ಮಕ್ಕಳ ಬೇಸಿಗೆ ಶಿಬಿರದ**

### ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಸಿಇಟಿ ಪರೀಕ್ಷೆಗಳ ಪೂರ್ವ ಸಿದ್ಧತೆ ಕುರಿತು ಹಮ್ಮಿಕೊಂಡಿದ್ದ ಸಭೆ

## ಏ.16 ಮತ್ತು 17ರಂದು ಸಿಇಟಿ ಪರೀಕ್ಷೆ: ಸುಗಮವಾಗಿ ಪರೀಕ್ಷೆ ನಡೆಸಲು ಸೂಚನೆ

• ಉದಯವಾಹಿನಿ, ಚಿತ್ರದುರ್ಗ

ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಇದೇ ಏಪ್ರಿಲ್ 16 ಮತ್ತು 17ರಂದು ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಯಲಿದೆ.

ಚಿತ್ರದುರ್ಗ ನಗರದ 16 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಜರುಗಲಿದ್ದು, ಜಿಲ್ಲೆಯಲ್ಲಿ ಒಟ್ಟು 6741 ವಿದ್ಯಾರ್ಥಿಗಳು ಪರೀಕ್ಷೆಗೆ ನೊಂದಾಯಿಸಿಕೊಂಡಿದ್ದು, ಸಿಇಟಿ ಪರೀಕ್ಷೆಯನ್ನು ಸುಗಮವಾಗಿ ನಡೆಸುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಸಿಇಟಿ ಪರೀಕ್ಷೆಗಳ ಪೂರ್ವ ಸಿದ್ಧತೆ ಕುರಿತು ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಯಾವುದೇ ಪರೀಕ್ಷಾ ಅವ್ಯವಹಾರ ನಡೆಯದಂತೆ ಸೂಕ್ಷ್ಮವಾಗಿ, ಪಾರದರ್ಶಕವಾಗಿ ಪರೀಕ್ಷೆ ನಡೆಸಬೇಕು. ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಸುಗಮ ಪರೀಕ್ಷೆ ನಡೆಸಿ, ಯಶಸ್ವಿಗೊಳಿಸಬೇಕು ಎಂದು ಹೇಳಿದರು.

ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ



☛ ಉದಯವಾಹಿನಿ ಚಿತ್ರ

ಪುಟ್ಟಸ್ವಾಮಿ ಮಾತನಾಡಿ, ಇದೇ ಏಪ್ರಿಲ್ 16 ಮತ್ತು 17ರಂದು ಸಿಇಟಿ ಪರೀಕ್ಷೆ ನಡೆಯಲಿದ್ದು, ಚಿತ್ರದುರ್ಗ ನಗರದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು, ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜು, ಹೊಳಲ್ಕೆರೆ ರಸ್ತೆಯ ಎಸ್‌ಜೆಎಂ ಪದವಿಪೂರ್ವ ಕಾಲೇಜು, ಚೈತನ್ಯ ಪಿಯು ಕಾಲೇಜು, ಮಹಾರಾಣಿ ಪಿಯು ಕಾಲೇಜು, ಕಂಪಳರಂಗ ಪಿಯು ಕಾಲೇಜು, ಬೃಹನ್ಮಠ ಪಿಯು ಕಾಲೇಜು, ಪಿ.ಕೆ.ಹಳ್ಳಿಯ ಕೆಎಂಎಸ್ ಪಿಯು ಕಾಲೇಜು, ಡಾನ್‌ಬಾಸ್ಕೋ ಪಿಯು ಕಾಲೇಜು, ಎಸ್‌ಆರೆಸ್ ಪಿಯು ಕಾಲೇಜು, ವೆಸ್ಟರ್ನ್ ಹಿಲ್ಸ್ ಪಿಯು ಕಾಲೇಜು, ಎಂ.ಕೆ.ಹಟ್ಟಿ ಎಸ್‌ಜೆಎಂ ಪಿಯು ಕಾಲೇಜು, ಎಸ್‌ಜೆಎಂಐಟಿ, ಸರ್ಕಾರಿ ವಿಜ್ಞಾನ ಕಾಲೇಜು, ಸರ್ಕಾರಿ ಕಲಾ ಕಾಲೇಜು ಹಾಗೂ ನಮ್ಮ ಎಕ್ಸ್‌ಪರ್ಟ್ ಪಿಯು ಕಾಲೇಜು ಸೇರಿದಂತೆ ಒಟ್ಟು 16 ಪರೀಕ್ಷೆ ಕೇಂದ್ರಗಳಿಂದ ಒಟ್ಟು 6741 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದರು.

ಏಪ್ರಿಲ್ 16ರಂದು ಬೆಳಿಗ್ಗೆ 10.30 ರಿಂದ 11.50 ರವರೆಗೆ ಭೌತಶಾಸ್ತ್ರ, ಮಧ್ಯಾಹ್ನ 2.30 ರಿಂದ 3.50 ರವರೆಗೆ ರಸಾಯನಶಾಸ್ತ್ರ ಹಾಗೂ ಏಪ್ರಿಲ್ 17ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 11.50 ರವರೆಗೆ ಗಣಿತಶಾಸ್ತ್ರ, ಮಧ್ಯಾಹ್ನ 2.30 ರಿಂದ 3.50 ರವರೆಗೆ ಜೀವಶಾಸ್ತ್ರ ವಿಷಯದ ಪರೀಕ್ಷೆ ನಡೆಯಲಿದೆ. ಜಿಲ್ಲೆಯಲ್ಲಿ ಯಾವುದೇ ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಕೇಂದ್ರಗಳು ಇರುವುದಿಲ್ಲ. ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷಾ ಪ್ರಾರಂಭವಾಗುವುದಕ್ಕಿಂತ ಒಂದು ಗಂಟೆ ಮೊದಲು ಹಾಗೂ ಪರೀಕ್ಷಾ ನಂತರ 30 ನಿಮಿಷಗಳು ಪೊಲೀಸ್ ಬಂದೋಬಸ್ತಿನ ಅವಶ್ಯಕತೆ ಇರುತ್ತದೆ. ಪರೀಕ್ಷಾ ಕೇಂದ್ರಗಳಿಗೆ ಜಿಲ್ಲಾ ಖಜಾನೆಯಿಂದ ಪ್ರಶ್ನೆ ಪತ್ರಿಕೆಗಳನ್ನು ಕೊಂಡ್ಯೊಯುವ ಮತ್ತು ವಿತರಣೆ ಮಾಡುವ ಸಮಯಕ್ಕೆ ಪ್ರತಿ ತಾಲ್ಲೂಕಿನ ಮಾರ್ಗಾಧಿಕಾರಿಗಳ ಜೊತೆಗೆ ಪೊಲೀಸ್ ರಕ್ಷಣೆ ಬೇಕಾಗಿರುತ್ತದೆ. ಪರೀಕ್ಷಾ ಕೇಂದ್ರದ ಸುತ್ತಮುತ್ತಲಿರುವ ಜೆರಾಕ್ಸ್ ಅಂಗಡಿಗಳನ್ನು ಮುಚ್ಚಿಸುವುದು ಮತ್ತು ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶ ಎಂದು ಜಿಲ್ಲಾಧಿಕಾರಿಗಳಿಂದ ಘೋಷಿಸುವುದು.

ವಿಜ್ಞಾನ ವಿಷಯವನ್ನು ಬೋಧಿಸುವ ಉಪನ್ಯಾಸಕರು, ಶಿಕ್ಷಕರು ಹಾಗೂ ಸಂಬಂಧಿಕರ, ಸ್ವಂತ ಮಕ್ಕಳು ಈ ಪರೀಕ್ಷೆಗೆ ಹಾಜರಾಗುತ್ತಿದ್ದರೆ ಅಂತಹ ಉಪನ್ಯಾಸಕರು, ಶಿಕ್ಷಕರನ್ನು ಪರೀಕ್ಷಾ ಕಾರ್ಯಕ್ಕೆ ನಿಯೋಜಿಸುವಂತೆ ಇಲ್ಲ. ಪರೀಕ್ಷಾ ಕೇಂದ್ರಗಳಿಗೆ ವಿದ್ಯಾರ್ಥಿಗಳು ಮೊಬೈಲ್ ಫೋನುಗಳನ್ನು ತರುವುದು ಹಾಗೂ ಕೈ ಗಡಿಯಾರವನ್ನು ಧರಿಸುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ.

ಪರೀಕ್ಷಾ ಕೇಂದ್ರಗಳಲ್ಲಿ ಉಪನ್ಯಾಸಕರು, ಕಚೇರಿ ಸಿಬ್ಬಂದಿಯವರು ಪರೀಕ್ಷೆ ನಡೆಯುವ ಅವಧಿಯಲ್ಲಿ ಮೊಬೈಲ್ ಫೋನುಗಳನ್ನು ತರುವುದನ್ನು ಹಾಗೂ ಕೈ ಗಡಿಯಾರ ಧರಿಸುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ. ಮುಖ್ಯ ಅಧೀಕ್ಷಕರು ಬೇಸಿಕ್ ಸೆಟ್ ಉಪಯೋಗಿಸಲು ಅವಕಾಶ ನೀಡಿದೆ. ಪರೀಕ್ಷಾ ಕೇಂದ್ರಗಳಲ್ಲಿ ಪ್ರಶ್ನೆ ಪತ್ರಿಕೆ ತೆರೆಯುವಾಗ ಹಾಗೂ ಉತ್ತರ ಪತ್ರಿಕೆಗಳನ್ನು ಬಂಡಲ್ ಮಾಡುವಾಗ ಸಿಸಿಟಿವಿ ವೀಕ್ಷಣೆಯಡಿಯಲ್ಲಿ ಕಾರ್ಯನಿರ್ವಹಿಸುವುದು, ಎಲ್ಲಾ ಕೊಠಡಿಗಳಿಗೆ ಸಿಸಿಟಿವಿ ಅಳವಡಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಉಪನಿರ್ದೇಶಕ ಡಾ.ಮಹೇಶ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಆರ್.ಮಂಜುನಾಥ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ದಿವಾಕರ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಸಿಇಟಿ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು ಇದ್ದರು.

**6741 ವಿದ್ಯಾರ್ಥಿಗಳಿಗೆ 16 ಪರೀಕ್ಷಾ ಕೇಂದ್ರಗಳು**

## ಕಾಗಿನೆಲೆ ಶ್ರೀಗಳ ಹುಟ್ಟುಹಬ್ಬ: ಶಾಂತಮಯ ಶ್ರೀಗಳಿಂದ ರಕ್ತದಾನ

• ಉದಯವಾಹಿನಿ, ಯಾದಗಿರಿ

ಹರಿಹರ ತಾಲ್ಲೂಕಿನ ಬೆಳ್ಳೂಡಿ ಗ್ರಾಮದ ಕನಕ ಗುರು ಪೀಠದ ಶಾಖಾ ಮಠದಲ್ಲಿ ಶ್ರೀಮದ್ ಆದಿ ಜಗದ್ಗುರು ರೇವಣಸಿದ್ದೇಶ್ವರ ಜಯಂತೋತ್ಸವ ಮತ್ತು ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ಬೆಳ್ಳೂಡಿ ಶಾಖಾ ಮಠದ 9 ನೇ ವರ್ಷದ ವಾರ್ಷಿಕೋತ್ಸವ ಹಾಗು ಕಾಗಿನೆಲೆ ಕನಕ ಗುರು ಪೀಠದ ಪರಮಪೂಜ್ಯ ಪೂಜ್ಯ ಶ್ರೀ ನಿರಂಜನಾನಂದ ಪುರಿ ಮಹಾಸ್ವಾಮಿಜಿಗಳ ಜನ್ಮದಿನೋತ್ಸವ ಕಾರ್ಯಕ್ರಮವನ್ನು ಏಪ್ರಿಲ್ 10 ರಂದು ಗುರುವಾರ ಬೆಳ್ಳೂಡಿ ಮಠದ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ವಿವಿಧ ಪೂಜಾ ಕಾರ್ಯಕ್ರಮಗಳು ಹಾಗೂ ಉಚಿತ ಆರೋಗ್ಯ ತಪಾಸಣೆ ಶಿಬಿರ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಅಗತೀರ್ಥ ಸರೂರಿನ ಹಾಲುಮತ ಜಗದ್ಗುರು ಶ್ರೀ ರೇವಣಸಿದ್ದೇಶ್ವರ ಶಾಂತಮಯ ಮಹಾಸ್ವಾಮಿಗಳು ಭಾಗವಹಿಸಿ ಪರಮಪೂಜ್ಯ ಶ್ರೀ ನಿರಂಜನಾನಂದ ಪುರಿ ಮಹಾಸ್ವಾಮಿಗಳಿಗೆ ಹುಟ್ಟು ಹಬ್ಬದ ಶುಭ ಕೋರಿ ರಕ್ತದಾನ ಮಾಡಿ ಮಾತನಾಡಿದರು.



☛ ಉದಯವಾಹಿನಿ ಚಿತ್ರ

ಶ್ರೀ ನಿರಂಜನಾನಂದ ಪುರಿ ಮಹಾಸ್ವಾಮಿಗಳು ತಮ್ಮ ಹುಟ್ಟು ಹಬ್ಬದ ನೆಪದಲ್ಲಿ ಹಲವು ಸಮಾಜಮುಖಿ ಕಾರ್ಯಗಳನ್ನು ಹಮ್ಮಿಕೊಂಡು ನೂರಾರು ಜನರ ಪಾಲಿಗೆ ಬೆಳಕಾಗಿದ್ದಾರೆ.

ಅವರ ಆದರ್ಶಗಳು ನಮ್ಮೆಲ್ಲರಿಗೂ ಮಾದರಿಯಾಗಿವೆ ರಕ್ತದಾನ ಮಹಾದಾನ ಪ್ರತಿಯೊಬ್ಬರು ರಕ್ತದಾನ ಮಾಡಬೇಕು ರಕ್ತದಾನದಿಂದ ಮತ್ತೊಂದು ಜೀವ ಉಳಿಸಿದಂತಾಗುತ್ತದೆ ಶ್ರೀಗಳು ಸಮಾಜದ ಮಕ್ಕಳಿಗಾಗಿ ಶಿಕ್ಷಣ ಸಂಘಟನೆ ಜೊತೆಗೆ ಮಠಗಳ ಅಭಿವೃದ್ಧಿ ಮಾಡುತ್ತಾ ಸಮಾಜವನ್ನು ಮುಖ್ಯವಾಹಿನಿಗೆ ತರಲು ಹಗಲು ಇರುಳು ಎನ್ನದೆ ಶ್ರಮಿಸುತ್ತಿದ್ದಾರೆ.

ಆ ದೇವರು ಅವರಿಗೆ ಆಯಸ್ಸು ಆರೋಗ್ಯ ಕರುಣಿಸಲೆಂದು ಹಾರೈಸಿ ಶುಭ ಕೋರಿದರು. ಈ ಸಂದರ್ಭದಲ್ಲಿ ವಿವಿಧ ಮಠದ ಪೂಜ್ಯರು ಮಠದ ಭಕ್ತಾದಿಗಳು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

## ಯಡಿಯೂರಪ್ಪ, ವಿಜಯೇಂದ್ರ ಭಾವಚಿತ್ರಕ್ಕೆ ಕ್ಷೀರಾಭಿಷೇಕ

### ಅಭಿವೃದ್ಧಿ ನಿರ್ಲಕ್ಷಿಸಿದ ಕಾಂಗ್ರೆಸ್, ಬಿಜೆಪಿ ಪ್ರತಿಭಟನೆ

• ಉದಯವಾಹಿನಿ, ಇಂಡಿ

ಮತಕ್ಷೇತ್ರಗಳ ಅಭಿವೃದ್ಧಿ ಕಡೆಗಣನೆ, ಅಭಿವೃದ್ಧಿಗೆ ಅನುದಾನ ಇಲ್ಲ, ತಾಲ್ಲೂಕಿನಲ್ಲಿ ಯಾವದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ ಎಂದು ಜಿಲ್ಲಾ ಬಿಜೆಪಿ ರೈತ ಮೋರ್ಚಾ ಮಾಜಿ ಅಧ್ಯಕ್ಷ ಕಾಸುಗೌಡ ಬಿರಾದಾರ ಹೇಳಿದರು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಕಾಂಗ್ರೆಸ್ ಆಡಳಿತ ವಿರುದ್ಧ ಪ್ರತಿಭಟನೆ ಮತ್ತು ಬಿ.ಎಸ್.ಯಡಿಯೂರಪ್ಪ ಮತ್ತು ವಿಜಯೇಂದ್ರ ಇವರಿಗೆ ಹಾಲಿನಿಂದ ಕ್ಷೀರಾಭಿಷೇಕ ಮಾಡುವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಂಡಲ ಬಿಜೆಪಿ ಅಧ್ಯಕ್ಷ ಮಲ್ಲಿಕಾರ್ಜುನ ಕಿವಡೆ ಮಾತನಾಡಿ 1983 ರಲ್ಲಿ ಕೇವಲ ಎರಡು ಸೀಟು ಇದ್ದ ಬಿಜೆಪಿ ಪಕ್ಷವನ್ನು ತಳಮಟ್ಟದಿಂದ ಕೆಲಸ ಮಾಡಿ ಹೋರಾಟದ ಮೂಲಕ ಮತ್ತು ಸಂಘನಾತ್ಮಕ ಕಾರ್ಯಕ್ರಮ ಮೂಲಕ ಆಡಳಿತಕ್ಕೆ ದಕ್ಷಿಣದಲ್ಲಿ ಪ್ರಥಮ ಬಿಜೆಪಿ ಸರಕಾರ



☛ ಉದಯವಾಹಿನಿ ಚಿತ್ರ

ತಂದವರು ಯಡೆಯೂರಪ್ಪ ಎಂದರು.

ಹಣಮಂತಗೌಡ ಪಾಟೀಲರು ಮಾತನಾಡಿ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಮುನ್ನ ಜನತೆಗೆ ನೀಡಿದ್ದ ಭರವಸೆ ಈಡೇರಿಸಿಲ್ಲ. ಈ 20 ತಿಂಗಳ ಅವಧಿಯಲ್ಲಿ ಒಂದೇ ಒಂದು ಯೋಜನೆ ನೀಡದೆ ಜನರನ್ನು ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ವಂಚಿಸುತ್ತಿದೆ ಎಂದರು. ಸಿದ್ಧಲಿಂಗ ಹಂಜಗಿ ಮಾತನಾಡಿ ಸಿದ್ದರಾಮಯ್ಯ ಅವರ ಎರಡು ವರ್ಷಗಳ ಆಡಳಿತದಲ್ಲಿ ಶೇ 60 ರಷ್ಟು ಭ್ರಷ್ಟಾಚಾರ, ಶೇ 40 ರಷ್ಟು ಸ್ವಜನ ಪಕ್ಷಪಾತ ದುರಾಡಳಿತದಿಂದ ಕುಡಿದೆ.

> ಇಂದು ದೇಶದಲ್ಲಿ ಬಿಜೆಪಿ ಬಲಾಢ್ಯ ಪಕ್ಷವಾಗಿ ಬೆಳೆದಿದೆ. ಪಕ್ಷಕ್ಕಿಂತ ದೊಡ್ಡವರು ಯಾರು ಇಲ್ಲ. ಮತ್ತು ಪಕ್ಷಕ್ಕೆ ಯಾರೂ ಅನಿವಾರ್ಯವಲ್ಲ, ಬಿಜೆಪಿ ತನ್ನದೇ ಆದ ಸಿದ್ಧಾಂತ ಮತ್ತು ಕಾರ್ಯಗಳಿಂದ ಕೆಲಸ ಮಾಡುತ್ತಿದೆ
> -ಅನೀಲ ಜಮಾದಾರ

ಧರ್ಮಾಧಾರಿತ ಮೀಸಲು ಬೇಡವೆಂದು ಅಂಬೇಡಕರರವರು ಹೇಳಿದ್ದರೂ ಕಾಂಗ್ರೆಸ್ ಮೀಸಲು ಕೊಡುವ ಕೆಲಸ ಮಾಡುತ್ತಿದೆ ಎಂದರು.ರವಿ ಬಗಲಿ, ರವಿ ವಗ್ಗೆ,ದೇವೆಂದ್ರ ಕುಂಬಾರ ಮಾತನಾಡಿದರು. ಪ್ರತಿಭಟನೆಯಲ್ಲಿ ಶೀಲವಂತ ಉಮರಾಣಿ,ಸೋಮು ನಿಂಬರಗಿ ಮಠ, ಬಿ.ಎಸ್.ಪಾಟೀಲ ಹಿರೇಬೇವನೂರ, ಮಹೇಶ ಹೂಗಾರ ಮತ್ತಿತರಿದ್ದರು.

## ಸೊರಟೂರಿನಲ್ಲಿ ಮಹಾವೀರ ಜಯಂತಿ ಆಚರಣೆ

• ಉದಯವಾಹಿನಿ ಗದಗ

ಸೊರಟೂರ ಗ್ರಾಮದಲ್ಲಿ ಭಗವಾನ್ ಮಹಾವೀರ ಜಯಂತಿ ಆಚರಣೆ ಧರ್ಮ ಬಾಂಧವರಿಂದ ಸಂಭ್ರಮದಿಂದ ಜರುಗಿತು. ಶಾಂತಿನಾಥ ಜಿನಮಂದಿರದಿಂದ ಭಗವಾನ್



☛ ಉದಯವಾಹಿನಿ ಚಿತ್ರ

ಮಹಾವೀರ ತೀರ್ಥಂಕರರ ಭಾವಚಿತ್ರವನ್ನ ಕುಂಭಮೇಳದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಮಹಾವೀರ ತೀರ್ಥಂಕರರ ಜಯಂತಿಯನ್ನು ಆಚರಿಸಲಾಯಿತು. ಈ ಮೆರವಣಿಗೆ ಕಾರ್ಯಕ್ರಮದಲ್ಲಿ ಸೊರಸಟೂರಿನ ಧರ್ಮ ಬಾಂಧವರೆಲ್ಲರೂ ಭಾಗಿಯಾಗಿದ್ದರು .

## ವನವಾಸಿ ಕಲ್ಯಾಣ ಕರ್ನಾಟಕ ಸಂಸ್ಥೆಯಿಂದ ಉಚಿತ ಆರೋಗ್ಯ ತಪಾಸಣೆ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ತಿರುಮಲಾಪೂರ ಮತ್ತು ಸಾಲೆ ಬೀರನಳ್ಳಿ ಗ್ರಾಮ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಬೀದರ ಜಿಲ್ಲೆಯ ವನವಾಸಿ ಕಲ್ಯಾಣ ಕರ್ನಾಟಕ ಸಂಸ್ಥೆ ವತಿಯಿಂದ ಸಾರ್ವಜನಿಕರ ಅನುಕೂಲವಾಗುವಂತೆ ಉಚಿತ ಆರೋಗ್ಯ





☛ ಉದಯವಾಹಿನಿ ಚಿತ್ರ

ತಪಾಸಣೆ ಮತ್ತು ಉಚಿತ ಔಷಧಿ ವಿತರಣೆ ಮಾಡಲಾಯಿತು.

ನುರಿತ ವೈದ್ಯರುಗಳಾದ ಚಿಂಚೋಳಿಯ ಡಾ.ಬಸವೇಶ ವೇಜೀನಾಥ ಪಾಟೀಲ್,ಯಾದಗಿರಿಯ ಆರೋಗ್ಯ ವಾಹಿನಿ ಡಾ.ಬೀಮರೆಡ್ಡಿ,ಡಾ.ಶಶಿ,ಸಚಿನ್ ನಾಯಕ,ಅಬ್ಬೆತುಮಕೂರಿನ ಪ್ರಾಂತ ಹಿತರಕ್ಷ ಕಾಶಪ್ಪ ದೊರೆ,ವನವಾಸಿ ಕಲ್ಯಾಣ ಕರ್ನಾಟಕ ಸಮಿತಿ ಅಧ್ಯಕ್ಷ ರಮೇಶ,ಬೀದರ ಜಿಲ್ಲಾ ಸಂಯೋಜಕ ಬಾಲಾಜಿ, ವಾಲ್ಮೀಕಿ ಸಂಘ ಅಧ್ಯಕ್ಷ ರಾಜಕುಮಾರ ನಾಯಕ, ದಶರಥ ನಾಯಕ,ಅಶೋಕ, ವಕೀಲರು ಸೂರ್ಯಕಾಂತ ಚಿಂಚೋಳಿಕರ್,ತಾಲ್ಲೂಕಾ ಸಂಯೋಜಕ ಚಂದ್ರಕಾಂತ ಕಲ್ಲೂರ,ಇನ್ನು ಅನೇಕರು ಉಚಿತ ಆರೋಗ್ಯ ತಪಾಸಣೆ ಉಚಿತ ಔಷಧಿ ವಿತರಣೆ ಕಾರ್ಯಕ್ರಮದಲ್ಲಿ ಭಾಗಿಯಾಗಿ 240ಕ್ಕೂ ಹೆಚ್ಚು ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣೆ ನಡೆಸಿ ಔಷಧ ವಿತರಣೆ ಮಾಡಿದರು.

## ಭಗವಾನ್ ಶ್ರೀ ಮಹಾವೀರ ಜಯಂತಿ

• ಉದಯವಾಹಿನಿ, ಧಾರವಾಡ

ಭಗವಾನ ಮಹಾವೀರರು ಜಗತ್ತಿಗೆ ಅಹಿಂಸೆ, ಶಾಂತಿ ಸೇರಿದಂತೆ ಸುಂದರ ಸಮಾಜ ರೂಪಗೊಳ್ಳಲು ಅಗತ್ಯವಿರುವ ನೀತಿ, ತತ್ವ, ಸಿದ್ಧಾಂತಗಳನ್ನು ಬೋಧಿಸಿದರು. ಜೈನ ಧರ್ಮವು, ಭಾರತವು ಜಗತ್ತಿಗೆ ನೀಡಿದ ಬಹು ದೊಡ್ಡ ಕೊಡುಗೆ ಆಗಿದೆ ಎಂದು ಅಂತರಾಷ್ಟ್ರೀಯ ಜೈನ ವಿದ್ವಾಂಸರಾದ ಮೈಸೂರಿನ ಡಾ.ಶುಭಚಂದ್ರ ಅವರು ಹೇಳಿದರು.

ಅವರು ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಭಗವಾನ್ ಶ್ರೀ ಮಹಾವೀರ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಪ್ರಧಾನ ಉಪನ್ಯಾಸ ನೀಡಿ, ಮಾತನಾಡಿದರು. ಕಾರ್ಯಕ್ರಮವನ್ನು ಕರ್ನಾಟಕ ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಅಪ್ಪಾಸಿ ಬಬಲೇಶ್ವರ ಅವರು ಉದ್ಘಾಟಿಸಿ, ಮಾತನಾಡಿ, ಭಾರತದಲ್ಲಿನ ಧರ್ಮದಾರ್ಶನಿಕರು ಶಾಂತಿ, ಸಂಸ್ಕಾರ, ಮೌಲ್ಯಯುತ ಬದುಕನ್ನು ವಿಶ್ವಕ್ಕೆ ನೀಡಿದ್ದು ಮಹಾನ್ ಕೊಡುಗೆ ಆಗಿದೆ. ಭಗವಾನ ಮಹಾವೀರರು ಬೋಧಿಸಿದ ಸತ್ಯ, ಅಹಿಂಸೆ, ಶಾಂತಿಯನ್ನು ಎಲ್ಲೆಡೆ ಪಸರಿಸಬೇಕು ಎಂದರು.

ಕರ್ನಾಟಕ ರಾಜ್ಯ ಬಾಲ ವಿಕಾಸ ಅಕಾಡಮಿಯಿಂದ ಮಹಾನ ಪುರುಷರ, ದಾರ್ಶನಿಕರ ತತ್ವಗಳನ್ನು ಮತ್ತು ಧರ್ಮದ ಮೌಲ್ಯಗಳನ್ನು ಮಕ್ಕಳಿಗೆ ತಲುಪಿಸುವ ಮತ್ತು ಸಂಸ್ಕಾರವಂತ ಸಮಾಜ ರೂಪಿಸಲು ವಿನೂತನ ಕಾರ್ಯಕ್ರಮಗಳನ್ನು ರೂಪಿಸಲಾಗುವುದು ಎಂದು ಸಂಗಮೇಶ ಬಬಲೇಶ್ವರ ತಿಳಿಸಿದರು.

## ಮಳೆಯಿಂದ ರಸ್ತೆ ಅವಾಂತರ: ಕಸದ ರಾಶಿ ಚರಂಡಿ ರಾಡಿಗೆ ಸಂಚಾರ ದುಸ್ತರ

• ಉದಯವಾಹಿನಿ, ಆಳಂದ್

ಮಂಗಳವಾರ ಸಂಜೆ ಸುರಿದ ಅಕಾಲಿಕ ಮಳೆಯಿಂದಾಗಿ ಪಟ್ಟಣದ ಹಳೆಯ ತಹಶೀಲ್ದಾರ ಕಚೇರಿ ಮಾರ್ಗದ ಮುಖ್ಯ ರಸ್ತೆಗಳು ತೀವ್ರ ಅವಾಂತರಕ್ಕೆ ಗುರಿಯಾಗಿವೆ.

ಚರಂಡಿ ನೀರು ಮೇಲೆ ಹರಿಯುತ್ತಿದ್ದು, ರಸ್ತೆಗಳು ಕಸದ ರಾಶಿಗಳಿಂದ ತುಂಬಿಕೊಂಡಿವೆ, ಇದರಿಂದ ಸಾರ್ವಜನಿಕ ಸಂಚಾರವು ಸಂಪೂರ್ಣ ಅವ್ಯವಸ್ಥೆಗೆ ತಿರುಗಿದೆ. ಪ್ರತಿ ಬಾರಿ ಮಳೆಯಾದಾಗ ಈ ಪರಿಸ್ಥಿತಿ ಉಂಟಾಗುತ್ತಿರುವುದು ನಾಗರಿಕರಲ್ಲಿ ಆಕ್ರೋಶ ಮತ್ತು ಆತಂಕವನ್ನು ಉಂಟುಮಾಡಿದೆ. ಸಂಬಂಧಿತ ಅಧಿಕಾರಿಗಳು ಈ ಸಮಸ್ಯೆಗೆ ಸರಿಯಾದ ಪರಿಹಾರ ಕಂಡುಕೊಳ್ಳದೆ ಇರುವುದು ಜನರ ಆರೋಪವಾಗಿದೆ.

**ಪರಿಸ್ಥಿತಿಯ ತೀವ್ರತೆ:** ಮಳೆ ಸುರಿದಾಗೊಮ್ಮೆ



☛ ಉದಯವಾಹಿನಿ ಚಿತ್ರ

ಮಳೆಯ ಪರಿಣಾಮವಾಗಿ ಆಳಂದ್ ಪಟ್ಟಣದ ಪುರಸಭೆ ಹತ್ತಿರದ ರಸ್ತೆಗಳಲ್ಲಿ ನೀರು ತುಂಬಿಕೊಂಡಿದ್ದು, ಚರಂಡಿಗಳು ತೀವ್ರವಾಗಿ ರಸ್ತೆಯ ಮೇಲೆ ಪ್ಲಾಸ್ಟಿಕ್ ತ್ಯಾಜ್ಯ, ಚೀಲಗಳು, ಮತ್ತು ಇತರ ಕಸದ ರಾಶಿಗಳು ಹರಡಿಕೊಂಡಿವೆ, ಇದು ಪಾದಚಾರಿಗಳು ಮತ್ತು ವಾಹನ ಚಲನೆಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ.

**ಚರಂಡಿ ಮತ್ತು ಕಸ ನಿರ್ವಹಣೆಯ ಕೊರತೆ:** ಚರಂಡಿ ವ್ಯವಸ್ಥೆಯು ಸಾಕಷ್ಟು ಸಾಮರ್ಥ್ಯವಿಲ್ಲದಿರುವುದು ಮತ್ತು ನಗರದಲ್ಲಿ ಕಸ ತ್ಯಾಜ್ಯದ ನಿರ್ವಹಣೆಯ ಕೊರತೆ ಈ ಸಮಸ್ಯೆಗೆ ಮುಖ್ಯ ಕಾರಣವಾಗಿದೆ.

**ನಾಗರಿಕರ ಆಕ್ರೋಶ**

**ನಿವಾಸಿಗಳ ಪ್ರಕಾರ, ಈ ಸಮಸ್ಯೆ ಪ್ರತಿ ಮಳೆಯ ಸೀಸನ್‌ನಲ್ಲಿ ಪುನರಾವರ್ತನೆಯಾಗುತ್ತಿದೆ. ''ಪ್ರತಿ ಬಾರಿ ಮಳೆ ಬಂದರೆ ಇಲ್ಲಿನ ಮುಖ್ಯರಸ್ತೆಯ ಚರಂಡಿ ಆಗುತ್ತವೆ ಎಂದು ಕಿಶನ ರಾಠೋಡ ಹೇಳಿದರು.**

## ಕ್ರೈಸ್ತ ಸಮುದಾಯ ಭವನಕ್ಕೆ ಅನುದಾನ: ಭರವಸೆ

• ಉದಯವಾಹಿನಿ, ಬೀದರ್

ಬೀದರ್ ದಕ್ಷಿಣ ಕ್ಷೇತ್ರ ವ್ಯಾಪ್ತಿಯಲ್ಲಿ ಹೊಸ ಕ್ರೈಸ್ತ ಸಮುದಾಯ ಭವನ, ಸಮಾಧಿ ಸುತ್ತುಗೋಡೆ ನಿರ್ಮಾಣ ಹಾಗೂ ಚರ್ಚಗಳ ದುರಸ್ತಿಗೆ ಅನುದಾನ ಕಲ್ಪಿಸಲಾಗುವುದು ಎಂದು ರಾಜ್ಯ ಕ್ರಿಶ್ಚಿಯನ್ ಅಭಿವೃದ್ಧಿ ನಿಗಮದ ಉಪಾಧ್ಯಕ್ಷ ಸಂಜಯ್ ಜಾಗೀರದಾರ್ ಭರವಸೆ ನೀಡಿದರು.

ಬೀದರ್ ತಾಲ್ಲೂಕಿನ ಮೊಗದಾಳ ಸಮೀಪದ ನ್ಯೂ ಬೆಥೆಲ್ ಚರ್ಚನಲ್ಲಿ ಬೀದರ್ ದಕ್ಷಿಣ ಕ್ಷೇತ್ರ ವ್ಯಾಪ್ತಿಯ ಪಾಸ್ಟರಳ ವತಿಯಿಂದ ಈಚೆಗೆ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು. ಸಮುದಾಯದವರು ಅವಶ್ಯಕ ಕಾಮಗಾರಿ ಸಂಬಂಧ ಮನವಿ ಸಲ್ಲಿಸಿದ್ದಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ದೇವಸ್ಥಾನಗಳ ಅರ್ಚಕರು, ಮಸೀದಿಗಳ ಇಮಾಮ್ ಹಾಗೂ ಮೌಜನ್‌ಗಳ ಮಾದರಿಯಲ್ಲಿ ಪಾಸ್ಟರ್‌ಗಳಿಗೂ ಸರ್ಕಾರದಿಂದ ಗೌರವ ಧನ ಕೊಡಿಸಲು ಯತ್ನಿಸಲಾಗುವುದು.

ಶೀಘ್ರದಲ್ಲೇ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ, ಪಾಸ್ಟರ್‌ಗಳ ಬೇಡಿಕೆ ಕುರಿತು ಮನವರಿಕೆ ಮಾಡಿಕೊಡಲಾಗುವುದು ಎಂದು ಹೇಳಿದರು.

ಕ್ರೈಸ್ತರು ತಮ್ಮ ಮಕ್ಕಳ ಶಿಕ್ಷಣಕ್ಕೆ ಪ್ರಾಮುಖ್ಯತೆ ಕೊಡಬೇಕು. ಶೈಕ್ಷಣಿಕ ಯೋಜನೆಗಳ ಪ್ರಯೋಜನ ಪಡೆಯಬೇಕು ಎಂದು ತಿಳಿಸಿದರು.

### 40% ಬೆಲೆ ಏರಿಕೆಯೂ ಲೆಕ್ಕಕ್ಕಿಲ್ಲ, ಧಾರವಾಡದಲ್ಲಿ ಊಟಕ್ಕಿಂತ ಹಣ್ಣು ಸೇವನೆಗೆ ಹೆಚ್ಚು ಒತ್ತು


## ಬೇಸಿಗೆಯಲ್ಲಿ ಹಣ್ಣಿಗೆ ಭರ್ಜರಿ ಬೇಡಿಕೆ: ಮಾರಾಟ ಜೋರು

• ಉದಯವಾಹಿನಿ, ಧಾರವಾಡ

ಇಂಧನ, ಕರೆಂಟ್, ಟೀ, ಕಾಫಿ, ಹಾಲಿನ ಉತ್ಪನ್ನಗಳಂತೆಯೇ ಮಾರುಕಟ್ಟೆಯಲ್ಲಿ ಹಣ್ಣಿನ ಬೆಲೆಯೂ ಹೆಚ್ಚಳಗೊಂಡಿದೆ. ಆದರೆ ಬೇಸಿಗೆಯಲ್ಲಿ ಹಣ್ಣು ಬಳಸುವುದು ಆರೋಗ್ಯಕ್ಕೆ ಪೂರಕವೆಂದು ಜನ ಬೆಲೆ ಏರಿಕೆಯನ್ನೂ ಲೆಕ್ಕಿಸದೇ ಖರೀದಿಯಲ್ಲಿ ತೊಡಗಿದ್ದರಿಂದ ಈಗ ಹಣ್ಣಿನ ಮಾರುಕಟ್ಟೆಗೆ ಜೀವಕಳೆ ಬಂದಂತಾಗಿದೆ.

ಕಳೆದ ಮಾರ್ಚ್ ತಿಂಗಳಿನಲ್ಲಿ 150 ರೂ.ಗೆ ಕೆಜಿ ಸೇಬು, 70 ರೂ.ಗೆ ಕೆಜಿ ಬಾಳೆಹಣ್ಣು, 15-20 ರೂ. ಕೆಜಿ ಕಲ್ಲಂಗಡಿ ಹಣ್ಣು ಮಾರಾಟ ಆಗುತ್ತಿತ್ತು. ಇದೇ ರೀತಿ ಬೇರೆ ಬೇರೆ ಹಣ್ಣಗಳ ಬೆಲೆ ಇತ್ತು. ಆದರೆ ಕಳೆದ 10 ದಿನಗಳಲ್ಲಿ ಹಣ್ಣಿನ ಬೆಲೆ ಶೇ.40ರಷ್ಟು ಏರಿಕೆ ಕಂಡಿದೆ. ಆದರೆ ಇದ್ಯಾವುದಕ್ಕೂ ಜನ ತಲೆ ಕೆಡಿಸಿಕೊಂಡಿಲ್ಲ. ಮಾರ್ಚ್‌ಗಿಂತಲೂ ಏಪ್ರಿಲ್‌ನಲ್ಲಿ ಹಣ್ಣುಗಳನ್ನು ಹೆಚ್ಚು ಖರೀದಿಸುತ್ತಿರುವುದು ವಿಶೇಷ.

ಊಟಕ್ಕಿಂತ ಹಣ್ಣು ಬಳಕೆ ಆರೋಗ್ಯಕ್ಕೆ ಪೂರಕ



☛ ಉದಯವಾಹಿನಿ ಚಿತ್ರ

ವಾಗಿದೆ. ಹೀಗಾಗಿ ಅದೆಷ್ಟೋ ಜನರು ಮಧ್ಯಾಹ್ನದ ಊಟ ಬಿಟ್ಟು ಹಣ್ಣು ಬಳಸುತ್ತಿದ್ದಾರೆ. ಕೆಲವರು ಜ್ಯೂಸ್ ಮಾಡಿಕೊಂಡು ಊಟ ತ್ಯಜಿಸುತ್ತಿದ್ದಾರೆ. ಹಣ್ಣಿನ ಸಲಾಡ್ ಸೇವಿಸುತ್ತಿದ್ದಾರೆ. ಹೀಗಾಗಿ ದೇಹಕ್ಕೆ ತಂಪು ನೀಡುವ ಹಾಗೂ ಜ್ಯೂಸ್‌ಗೆ ಯೋಗ್ಯವಾದ ಹಣ್ಣುಗಳ ಮಾರಾಟ ಹೆಚ್ಚಾಗಿದೆ. ಈ ಬಾರಿ ತಂಪು ಪಾನೀಯಗಳಿಗಿಂತ ಹಣ್ಣು ಹಾಗೂ ಹಣ್ಣಿನ ಜ್ಯೂಸ್ ಬಳಕೆಗೆ ಜನ ಒತ್ತು ನೀಡಿದಂತೆ ಕಾಣುತ್ತಿದೆ.

ದೇಹದಲ್ಲಿ ಶೇಖರಣೆಯಾಗಿರುವ ಕೆಟ್ಟ ಕೊಲೆಸ್ಟ್ರಾಲ್ ಕಡಿಮೆ ಮಾಡಲು ಹಾಗೂ ಹಲವು ಪೋಷಕಾಂಶ, ನೀರಿನಾಂಶಗಳನ್ನು ದೇಹಕ್ಕೆ ನೀಡಲು ಬೇಸಿಗೆಯಲ್ಲಿಕೆಲ ಹಣ್ಣು ಬಳಸುವುದು ಒಂದು ನೈಸರ್ಗಿಕ ವಿಧಾನ. ಸೇಬು, ಕಲ್ಲಂಗಡಿ, ಬೆಣ್ಣೆಹಣ್ಣು, ಕಿವಿಹಣ್ಣು, ಅನಾನಸ್, ದಾಳಿಂಬೆಯನ್ನು ಇದಕ್ಕೆ ಬಳಸಲಾಗುತ್ತದೆ. ಇದರಿಂದ ಹೃದಯದ ಆರೋಗ್ಯವನ್ನೂ ಕಾಪಾಡಿಕೊಳ್ಳಬಹುದು ಎಂಬುದು ವೈಜ್ಞಾನಿಕವಾಗಿ ರುಜುವಾತಾದ ಸತ್ಯ.

ಹೀಗಾಗಿ ಶೇ.40ರಷ್ಟು ಬೆಲೆ ಹೆಚ್ಚಾದರೂ, ತಲೆಬಿಸಿ ಮಾಡಿಕೊಳ್ಳದ ಜನ ಹೆಚ್ಚಾಗಿ ಹಣ್ಣುಗಳನ್ನು ಖರೀದಿಸುತ್ತಿದ್ದಾರೆ ಎನ್ನುತ್ತಾರೆ ಧಾರವಾಡದ ಹಣ್ಣಿನ ವ್ಯಾಪಾರಿಗಳು. ಕಳೆದ 10 ದಿನಗಳಲ್ಲಿ ಹಣ್ಣಿನ ಬೆಲೆ ಶೇ.40ರಷ್ಟು ಏರಿದೆ. ಆದರೂ ಮಾರ್ಚ್‌ಗಿಂತ ಏಪ್ರಿಲ್ ತಿಂಗಳಲ್ಲಿ ಹೆಚ್ಚು ಜನರು ಹಣ್ಣು ಖರೀದಿಗೆ ಬರುತ್ತಿದ್ದಾರೆ.

**ಹಣ್ಣಿನ ಬೆಲೆ ಏರಿಕೆ ಪ್ರಮಾಣ**

| ಹಣ್ಣು | ಹಿಂದಿನ ಬೆಲೆ | ಪ್ರಸ್ತುತ ಬೆಲೆ |
|---|---|---|
| ಸೇಬು | 150-160 | 230-280 |
| ಆರೇಂಜ್ (ಆಮದು) | 160-180 | 200-220 |
| ಮೋಸಂಬಿ | 60-70 | 100-110 |
| ದ್ರಾಕ್ಷಿ | 100 | 100 |
| ಚಿಕ್ಕು | 50-60 | 90-100 |
| ಏಲಕ್ಕಿ ಬಾಳೆ | 70-80 | 100 |
| ಸ್ವೀಟ್ ಹುನಸೆ (ಥೈಲ್ಯಾಂಡ್) | 80 | 120 |

- ಟೀ, ಕಾಫಿ, ಹಾಲಿನ ಉತ್ಪನ್ನಗಳಂತೆಯೇ ಮಾರುಕಟ್ಟೆಯಲ್ಲಿ ಹಣ್ಣಿನ ಬೆಲೆಯೂ ಹೆಚ್ಚಳಗೊಂಡಿದೆ
- ಮಾರ್ಚ್‌ಗಿಂತಲೂ ಏಪ್ರಿಲ್‌ನಲ್ಲಿ ಹಣ್ಣುಗಳನ್ನು ಹೆಚ್ಚು ಖರೀದಿಸುತ್ತಿರುವುದು ವಿಶೇಷ.
- ದೇಹಕ್ಕೆ ತಂಪು ನೀಡುವ ಹಾಗೂ ಜ್ಯೂಸ್‌ಗೆ ಯೋಗ್ಯವಾದ ಹಣ್ಣುಗಳ ಮಾರಾಟ ಹೆಚ್ಚಾಗಿದೆ.

### ಅಮೆರಿಕದ ಸುಂಕಗಳನ್ನು 'ಏಕಪಕ್ಷೀಯ ದಬ್ಬಾಳಿಕೆ' ಎಂದು ಜರೆದ ಚೀನಾದ ಹಣಕಾಸು ಸಚಿವಾಲಯ

# ಮುಗಿಯದ ಸುಂಕ ಕಚ್ಚಾಟ: ಅಮೆರಿಕದ ಮೇಲೆ 125% ತೆರಿಗೆ ಹೇರಿದ ಚೀನಾ

**ಬೀಜಿಂಗ್:** ವಿಶ್ವದ ಎರಡು ಪ್ರಭಾವಿ ರಾಷ್ಟ್ರಗಳಾದ ಅಮೆರಿಕ ಹಾಗೂ ಚೀನಾ ನಡುವೆ ನಡೆಯುತ್ತಿರುವ ಸುಂಕ ಸಮರ ತಣ್ಣಗಾಗುವಂತೆ ಕಾಣಿಸುತ್ತಿಲ್ಲ.

ಅಮೆರಿಕದ ಪ್ರತಿ ಸುಂಕದಿಂದ ಕೆರಳಿರುವ ಚೀನಾ, ಇದೀಗ ದೊಡ್ಡಣ್ಣನ ಮೇಲೆ ಶೇ. 125ರಷ್ಟು ಸುಂಕ ಹೇರಿದ್ದು, ತಿರುಗೇಟು ನೀಡಿದೆ.

ಇದೇ ಏಪ್ರಿಲ್ 12ರಿಂದ ಅಂದರೆ ಶನಿವಾರದಿಂದಲೇ ಇದು ಜಾರಿಗೆ ಬರಲಿದೆ. ಈ ಮೂಲಕ ಅಮೆರಿಕ ಎಷ್ಟು ಸುಂಕ ವಿಧಿಸಿದರೂ ನಾವು ಜಗ್ಗಲ್ಲ ಎಂದು ಚೀನಾ ಸಂದೇಶ ರವಾನಿಸಿದೆ.

ಸ್ಪೇನ್ ಪ್ರಧಾನ ಮಂತ್ರಿಯೊಂದಿಗೆ ಮಾತನಾಡಿದ ಕ್ಸಿ ಜಿನ್‌ಪಿಂಗ್, ಏಕಪಕ್ಷೀಯ ದಬ್ಬಾಳಿಕೆ'ಯನ್ನು ವಿರೋಧಿಸಲು ಐರೋಪ್ಯ ಒಕ್ಕೂಟವು ಬೀಜಿಂಗ್‌ನೊಂದಿಗೆ ಕೈಜೋಡಿಸಬೇಕು ಎಂದು ಆಗ್ರಹಿಸಿದ್ದಾರೆ.

ಅಮೆರಿಕ ಮತ್ತು ಚೀನಾ ನಡುವೆ ದೊಡ್ಡ ಮಟ್ಟದ ಸುಂಕ ಸಮರ ನಡೆಯುತ್ತಿದ್ದು, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಏಪ್ರಿಲ್ 2 ರಂದು ಚೀನಾ ಮೇಲೆ ಹೆಚ್ಚಿನ ಸುಂಕ ವಿಧಿಸಿದ್ದರು. ಇದಕ್ಕೆ ಪ್ರತಿಕಾರವಾಗಿ ಚೀನಾವು ಅಮೆರಿಕದ ವಸ್ತುಗಳ ಮೇಲೆ ಶೇ. 34ರಷ್ಟು ಸುಂಕ ವಿಧಿಸಿತ್ತು. ಸುಂಕದ ಹೋರಾಟಕ್ಕೆ ಯುರೋಪ್ ಒಕ್ಕೂಟದ ಸಹಕಾರ ಕೋರಿದ ಚೀನಾ, ಅಮೆರಿಕಕ್ಕೆ

**ಉಳಿದ ದೇಶಗಳಿಗೆ ರಿಯಾಯಿತಿ**

**ಅಮೆರಿಕವು ಚೀನಾ ಹೊರತುಪಡಿಸಿ ಉಳಿದ ದೇಶಗಳ ಮೇಲೆ ಹೇರಿರುವ ಸುಂಕವನ್ನು ತಾತ್ಕಾಲಿಕವಾಗಿ 90 ದಿನಗಳ ಕಾಲ ತಡೆ ಹಿಡಿದಿದೆ. ಈ ಮೂಲಕ ಬೇರೆ ಬೇರೆ ದೇಶಗಳಲ್ಲಿ ತನ್ನೊಂದಿಗೆ ಒಪ್ಪಂದಕ್ಕೆ ಬರಲು ಹಾಗೂ ಸುಂಕ ಕಡಿಮೆ ಮಾಡಲು ಅವಕಾಶ ಕಲ್ಪಿಸಿದೆ. ಆದರೆ ಚೀನಾಗೆ ಈ ವಿನಾಯಿತಿ ನೀಡಿಲ್ಲ.**

1953ರ ವಿಡಿಯೋ ಮೂಲಕ ಟಾಂಗ್, ಇದರಿಂದ ಕೆರಳಿದ್ದ ಅಮೆರಿಕ ಚೀನಾದ ವಸ್ತುಗಳ ಮೇಲಿನ ಸುಂಕವನ್ನು ಶೇ. 104ಕ್ಕೆ ಹೆಚ್ಚಿಸಿ ಬಿಸಿ ಮುಟ್ಟಿಸಿತ್ತು. ಇಷ್ಟಕ್ಕೆ ಸುಮ್ಮನಾದ ಡ್ರ್ಯಾಗನ್ ತಾನೇನು ಕಡಿಮೆ ಎಂದು, ಅಮೆರಿಕದ ವಸ್ತುಗಳ ಮೇಲಿನ ಸುಂಕವನ್ನು ಶೇ. 84ಕ್ಕೆ ಏರಿಕೆ ಮಾಡಿತ್ತು. ಬಳಿಕ ಏಪ್ರಿಲ್ 9ರಂದು ಟ್ರಂಪ್ ಚೀನಾದ ವಸ್ತುಗಳ ಮೇಲಿನ ಸುಂಕವನ್ನು ಶೇ. 125ಕ್ಕೆ ಹೆಚ್ಚಿಸಿದ್ದರು. ಇದಾದ ಬಳಿಕ ಸ್ಪಷ್ಟನೆ ನೀಡಿದ್ದ ಶ್ವೇತ ಭವನ ಚೀನಾದಿಂದ ಆಮದಾಗುವ ವಸ್ತುಗಳ ಮೇಲೆ ಟ್ರಂಪ್ ಹೇಳಿದಂತೆ ಶೇ. 125 ಅಲ್ಲ ಶೇ. 145 ತೆರಿಗೆ ವಿಧಿಸುವುದಾಗಿ ಹೇಳಿತ್ತು. ಇದರಿಂದ



ಕೆರಳಿ ಕೆಂಡವಾಗಿರುವ ಚೀನಾ ಇದೀಗ ಅಮೆರಿಕದ ವಸ್ತುಗಳ ಮೇಲೆ ಶೇ. 125ರಷ್ಟು ಸುಂಕ ವಿಧಿಸಿದೆ. ಈ ಮೂಲಕ ನಿಮ್ಮ ಬೆದರಿಕೆಗೆಲ್ಲ ಬಗ್ಗಲ್ಲ ಸೊಪ್ಪು ಹಾಕಲ್ಲ ಎಂದು ಎಚ್ಚರಿಕೆ ನೀಡಿದೆ.

ಈ ಮೂಲಕ ಅಮೆರಿಕವು ಪ್ರಪಂಚದ ಎರಡನೇ ಅತಿದೊಡ್ಡ ಆರ್ಥಿಕತೆಯ ಮೇಲೆ ಒತ್ತಡ ಹೇರಿದೆ. ಅಮೆರಿಕಕ್ಕೆ ಸರಕುಗಳನ್ನು ರಫ್ತು ಮಾಡುವ ಎರಡನೇ ಅತಿದೊಡ್ಡ ದೇಶ ಚೀನಾ ಆಗಿದ್ದು, ಹೀಗಾಗಿ ಅಮೆರಿಕವು ಚೀನಾದ ಮೇಲೆ ಹೆಚ್ಚಿನ ಸುಂಕ ವಿಧಿಸಿದೆ. ಅಮೆರಿಕವು ಚೀನಾದ ಮೇಲೆ ಅತಿಯಾದ ಸುಂಕವನ್ನು ವಿಧಿಸುತ್ತಿದ್ದು, ಇದು ಅಂತಾರಾಷ್ಟ್ರೀಯ ವ್ಯಾಪಾರ ನಿಯಮಗಳು, ಆರ್ಥಿಕ ಕಾನೂನುಗಳು ಮತ್ತು ಸಾಮಾನ್ಯ ಜ್ಞಾನಕ್ಕೆ ವಿರುದ್ಧವಾಗಿದೆ. ಇದು ಏಕಪಕ್ಷೀಯ ದಬ್ಬಾಳಿಕೆಯಾಗಿದೆ ಎಂದು ಚೀನಾದ ಹಣಕಾಸು ಸಚಿವಾಲಯ ಕಿಡಿ

- **ತೀವ್ರಗೊಂಡ ಅಮೆರಿಕ ಮತ್ತು ಚೀನಾ ನಡುವಿನ ಸುಂಕ ಸಮರ**
- **ಅಮೆರಿಕದ ವಸ್ತುಗಳ ಮೇಲಿನ ಸುಂಕವನ್ನು ಶೇ. 125ಕ್ಕೆ ಹೆಚ್ಚಿಸಿದ ಚೀನಾ**
- **ಅಮೆರಿಕದ ಸುಂಕಗಳನ್ನು 'ಏಕಪಕ್ಷೀಯ ದಬ್ಬಾಳಿಕೆ' ಎಂದು ಜರೆದ ಚೀನಾದ ಹಣಕಾಸು ಸಚಿವಾಲಯ**
- **ಇದು ಅಂತಾರಾಷ್ಟ್ರೀಯ ವ್ಯಾಪಾರ ನಿಯಮಗಳಿಗೆ ವಿರುದ್ಧ ಎಂದು ಕಿಡಿ**

ಕಾರಿದೆ. ಅಮೆರಿಕವು ಪದೇ ಪದೇ ನಮ್ಮ ಮೇಲೆ ಹೆಚ್ಚಿನ ಸುಂಕವನ್ನು ವಿಧಿಸುತ್ತಿದೆ. ಇದು ಕೇವಲ ಸಂಖ್ಯೆಗಳ ಆಟವಾಗಿದ್ದು, ಇದು ಆರ್ಥಿಕವಾಗಿ ಅರ್ಥಹೀನ.

ಸುಂಕವನ್ನು ದಬ್ಬಾಳಿಕೆ ಮತ್ತು ಬಲವಂತಕ್ಕಾಗಿ ಬಳಸುತ್ತಿರುವಂತೆ ತೋರುತ್ತಿದೆ. ಇದು ಹಾಸ್ಯಾಸ್ಪದ ಎಂದು ಚೀನಾ ಸಚಿವಾಲಯ ಆಕ್ರೋಶ ವ್ಯಕ್ತಪಡಿಸಿದೆ. ಅಲ್ಲದೆ ಅಮೆರಿಕದ ಸರಕುಗಳು ಈಗ ಚೀನಾದಲ್ಲಿ ಮಾರಾಟವಾಗದ ಕಾರಣ, ಅಮೆರಿಕವು ಚೀನಾದ

**ಪ್ರತೀಕಾರ ಆರಂಭ**

**ಬೀಜಿಂಗ್ ಮತ್ತು ವಾಷಿಂಗ್ಟನ್ ನಡುವೆ ಸಂಬಂಧ ಹದಗೆಟ್ಟಿದ್ದು, ಸೇವೆಗಳು ಮತ್ತು ಜನರ ಸಂಬಂಧಗಳ ಮೇಲೆ ಪರಿಣಾಮ ಬೀರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಚೀನಾದ ಚಿತ್ರಮಂದಿರಗಳಲ್ಲಿ ಪ್ರದರ್ಶನವಾಗುವ ಅಮೆರಿಕದ ಚಲನಚಿತ್ರಗಳ ಸಂಖ್ಯೆಯನ್ನು ಕಡಿಮೆ ಮಾಡಲು ಅಲ್ಲಿನ ಅಧಿಕಾರಿಗಳು ಮುಂದಾಗಿದ್ದಾರೆ. ಈ ಮೂಲಕ ಸರಕುಗಳ ಹೊರತಾಗಿ ಬೇರೆ ರೀತಿಯ ಪ್ರತೀಕಾರ ಕೂಡ ಆರಂಭವಾಗಿದೆ.**

ರಫ್ತುಗಳ ಮೇಲೆ ಸುಂಕವನ್ನು ಹೆಚ್ಚಿಸಿದರೆ, ಅದನ್ನು ತಾನು ಪರಿಗಣಿಸುವುದಿಲ್ಲ ಎಂದು ಹೇಳಿದೆ.

ತನ್ನ ಹಕ್ಕುಗಳು ಮತ್ತು ಹಿತಾಸಕ್ತಿಗಳನ್ನು ಅಮೆರಿಕ ಉಲ್ಲಂಘಿಸಿದರೆ, ತೀವ್ರವಾಗಿ ಪ್ರತಿರೋಧಿಸಿ ಹೋರಾಡುತ್ತೇವೆ' ಎಂದು ಎಚ್ಚರಿಕೆ ನೀಡಿರುವ ಚೀನಾ, ಸುಂಕದಿಂದ ಉಂಟಾಗುವ ಹಾನಿಗೆ ದೊಡ್ಡಣ್ಣನೇ ಜವಾಬ್ದಾರಿ ತೆಗೆದುಕೊಳ್ಳಬೇಕು ಎಂದು ಗುಡುಗಿದೆ.

## ಮಿನಿ ನ್ಯೂಸ್

### ವಾರಾಣಸಿಗೆ ಪ್ರಧಾನಿ ಮೋದಿ ಭೇಟಿ

**ವಾರಣಾಸಿ:** ಸ್ವಕ್ಷೇತ್ರ ವಾರಾಣಸಿಗೆ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು ವಿಮಾನ ನಿಲ್ದಾಣದಲ್ಲೇ, ಅತ್ಯಾಚಾರ ಘಟನೆಯ ಕುರಿತು ಪೊಲೀಸ್ ಆಯುಕ್ತರು, ವಿಭಾಗೀಯ ಆಯುಕ್ತರು ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರಿಂದ ಸಮಗ್ರ ಮಾಹಿತಿ ಪಡೆದುಕೊಂಡು, ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಇಂದು 50ನೇ ಬಾರಿಗೆ ತಮ್ಮ ಸಂಸದೀಯ ಕ್ಷೇತ್ರ ವಾರಣಾಸಿಗೆ ಆಗಮಿಸಿದ ಪ್ರಧಾನಿ ಮೋದಿ ವಿಮಾನ ನಿಲ್ದಾಣಕ್ಕೆ ಬಂದಿಳಿದ ಕೂಡಲೇ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು. ಈ ವೇಳೆ 19 ವರ್ಷದ ಯುವತಿಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರದ ಬಗ್ಗೆ ಅಧಿಕಾರಿಗಳು ಮಾಹಿತಿ ನೀಡಿದರು. ಆರೋಪಿಗಳ ವಿರುದ್ಧ ಸಾಧ್ಯವಾದಷ್ಟು ಕಠಿಣ ಕ್ರಮ ಕೈಗೊಳ್ಳಲು ಮತ್ತು ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಸೂಕ್ತ ಕ್ರಮಗಳನ್ನು ಜಾರಿಗೆ ತರುವಂತೆ ಪ್ರಧಾನಿ ಮೋದಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

### ದಾಳಿಕೋರರಿಗೆ ಶಿಕ್ಷೆ ಕೊಡಿಸುವ ಉದ್ದೇಶದಿಂದ ರಾಣಾ ಹಸ್ತಾಂತರ: ಅಮೆರಿಕ

**ನವದೆಹಲಿ:** ಮುಂಬೈ ಭಯೋತ್ಪಾದಕ ದಾಳಿಯು ಇಡೀ ಜಗತ್ತನ್ನು ಬೆಚ್ಚಿಬೀಳಿಸಿತ್ತು ಮತ್ತು ಈ ಹತ್ಯಾಕಾಂಡದಲ್ಲಿ ಭಾಗಿಯಾಗಿದ್ದಕ್ಕಾಗಿ ನ್ಯಾಯವನ್ನು ಎದುರಿಸಲು ಪಾಕಿಸ್ತಾನಿ-ಕೆನಡಿಯನ್ ತಹವೂರ್ ಹುಸೇನ್ ರಾಣಾನನ್ನು ಭಾರತಕ್ಕೆ ಹಸ್ತಾಂತರಿಸಲಾಗಿದೆ ಎಂದು ಅಮೆರಿಕೆ ತಿಳಿಸಿದೆ. ದಾಳಿಗೆ ಕಾರಣರಾದವರನ್ನು ನ್ಯಾಯದ ಮುಂದೆ ತರುವುದನ್ನು ಖಚಿತಪಡಿಸಿಕೊಳ್ಳುವ ಭಾರತದ ಪ್ರಯತ್ನಗಳನ್ನು ಅಮೆರಿಕ ದೀರ್ಘಕಾಲದಿಂದ ಬೆಂಬಲಿಸಿದೆ ಎಂದು ಅದು ಹೇಳಿದೆ.

2008ರ ಮುಂಬೈ ಭಯೋತ್ಪಾದಕ ದಾಳಿಯನ್ನು ಯೋಜಿಸುವಲ್ಲಿ ಪಾತ್ರವನ್ನು ಎದುರಿಸಲು 64 ವರ್ಷದ ರಾಣಾ ಅವರನ್ನು ಏಪ್ರಿಲ್ 9 ರಂದು ಭಾರತಕ್ಕೆ ಹಸ್ತಾಂತರಿಸಲಾಯಿತು ಎಂದು ಯುಎಸ್ ಸ್ಟೇಟ್ ಡಿಪಾರ್ಟಿಂಟ್ ವಕ್ತಾರ ಟಮಿ ಬ್ರೂಸ್ ಹೇಳಿದ್ದಾರೆ. ಈ ದಾಳಿಗಳಿಗೆ ಕಾರಣರಾದವರನ್ನು ನ್ಯಾಯದ ಮುಂದೆ ತರುವುದನ್ನು ಖಚಿತಪಡಿಸಿಕೊಳ್ಳುವ ಭಾರತದ ಪ್ರಯತ್ನಗಳನ್ನು ಯುನೈಟೆಡ್ ಸ್ಟೇಟ್ಸ್ ದೀರ್ಘಕಾಲದಿಂದ ಬೆಂಬಲಿಸಿದೆ. ಮತ್ತು ಅಧ್ಯಕ್ಷ ಟ್ರಂಪ್ ಹೇಳಿದಂತೆ, ಭಯೋತ್ಪಾದನೆಯ ಜಾಗತಿಕ ಪಿಡುಗಿನ ವಿರುದ್ಧ ಹೋರಾಡಲು ಯುನೈಟೆಡ್ ಸ್ಟೇಟ್ಸ್ ಮತ್ತು ಭಾರತ ಒಟ್ಟಾಗಿ ಕೆಲಸ ಮಾಡುವುದನ್ನು ಮುಂದುವರಿಸುತ್ತವೆ ಎಂದು ಅವರು ಹೇಳಿದರು.

# ನ್ಯೂಯಾರ್ಕ್‌ನಲ್ಲಿ ಪ್ರವಾಸಿ ಹೆಲಿಕಾಪ್ಟರ್ ಅಪಘಾತ

## ಸ್ಪೇನ್‌ನ ಒಂದೇ ಕುಟುಂಬದ ಆರು ಪ್ರಯಾಣಿಕರ ದುರ್ಮರಣ

**ನ್ಯೂಯಾರ್ಕ್:** ಅಮೆರಿಕದ ರಾಜಧಾನಿ ವಾಷಿಂಗ್ಟನ್ ಡಿಸಿಯಲ್ಲಿ ನಡೆದ ಭೀಕರ ವಿಮಾನ ಅಪಘಾತದ ಆಘಾತ ಮಾಸುವ ಮುನ್ನವೇ, ನ್ಯೂಯಾರ್ಕ್‌ನಲ್ಲಿ ಪ್ರವಾಸಿ ಹೆಲಿಕಾಪ್ಟರ್‌ವೊಂದು ಪತನಗೊಂಡು ಆರು ಜನ ಮೃತಪಟ್ಟಿರುವ ಹೃದಯವಿದ್ರಾವಕ ಘಟನೆ ನಡೆದಿದೆ.



**ನದಿಯಲ್ಲಿ ತೇಲಾಡಿದ ಶವಗಳು**

ಪೈಲೆಟ್‌ನ ನಿಯಂತ್ರಣ ತಪ್ಪಿ ಪ್ರವಾಸಿ ಹೆಲಿಕಾಪ್ಟರ್‌ವೊಂದು ನ್ಯೂಯಾರ್ಕ್‌ನ ಹಡ್ಸನ್ ನದಿಗೆ ಬಿದ್ದಿದ್ದು, ಪೈಲಟ್ ಸೇರಿದಂತೆ ಎಲ್ಲಾ ಆರು ಪ್ರಯಾಣಿಕರು ಸಾವನ್ನಪ್ಪಿದ್ದಾರೆ. ಮೃತಪಟ್ಟವರಲ್ಲಿ ಮೂವರು ಮಕ್ಕಳು ಕೂಡ ಸೇರಿದ್ದಾರೆ ಎಂದು ರಕ್ಷಣಾ ಕಾರ್ಯಾಚರಣೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಹಡ್ಸನ್ ನದಿಯಲ್ಲಿ ಪ್ರವಾಸಿ ಹೆಲಿಕಾಪ್ಟರ್ ಪತನಗೊಂಡಿರುವ ಕುರಿತು ತೀವ್ರ ದು:ಖ ವ್ಯಕ್ತಪಡಿಸಿರುವ ನ್ಯೂಯಾರ್ಕ್ ಮೇಯರ್ ಎರಿಕ್ ಆಡಮ್ಸ್, ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸಿದ್ದಾರೆ.

ಈ ಸಮಯದಲ್ಲಿ ಆರು ಮೃತದೇಹಗಳನ್ನು ನೀರಿನಿಂದ ಹೊರತೆಗೆಯಲಾಗಿದೆ.

ದುಃಖಕರ ವಿಷಯವೆಂದರೆ, ಆ ಆರೂ ಜನರು ಮೃತಪಟ್ಟಿದ್ದಾರೆ ಎಂದು ಘೋಷಿಸಲಾಗಿದೆ. ಈ ದುರಂತ ಮನಸ್ಸಿಗೆ ನೋವುಂಟು ಮಾಡಿದೆ ಎಂದು ಎರಿಕ್ ಆಡಮ್ಸ್ ವಿಷಾದ ವ್ಯಕ್ತಪಡಿಸಿದ್ದಾರೆ.

ಹವಾಮಾನ ವೈಪರೀತ್ಯದಿಂದ ಈ ದುರ್ಘಟನೆ ಸಂಭವಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದು. ಹೆಲಿಕಾಪ್ಟರ್‌ನ ರೋಟರ್ ಬ್ಲೇಡ್ ಕಳಚಿ ನದಿಗೆ ಬಿದ್ದ ಪರಿಣಾಮ ಅಪಘಾತ ಸಂಭವಿಸಿತು ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಹೆಲಿಕಾಪ್ಟರ್‌ನ ಲ್ಯಾಂಡಿಂಗ್ ಸ್ಕಿಡ್‌ಗಳು ಸುರಂಗದ ಬಳಿ ನದಿಯಲ್ಲಿ

- **ನ್ಯೂಯಾರ್ಕ್‌ನ ಹಡ್ಸನ್ ನದಿಯಲ್ಲಿ ಪ್ರವಾಸಿ ಹೆಲಿಕಾಪ್ಟರ್ ಪತನ**
- **ಸ್ಪೇನ್‌ನ ಒಂದೇ ಕುಟುಂಬದ ಆರು ಪ್ರಯಾಣಿಕರ ದುರ್ಮರಣ**
- **ರೋಟರ್ ಬ್ಲೇಡ್ ಕಳಚಿದ ಪರಿಣಾಮ ಹಡ್ಸನ್ ನದಿಗೆ ಬಿದ್ದ ಹೆಲಿಕಾಪ್ಟರ್**
- **ಅಮರಿಕ ನೋಡಲು ಬಂದಿದ್ದ ಸ್ಪೇನ್ ಪ್ರವಾಸಿಗರ ದುರಂತ ಅಂತ್ಯ**

ಮುಳುಗಿರುವುದು ಕಂಡುಬಂದಿದೆ. ನ್ಯೂಯಾರ್ಕ್ ಮತ್ತು ನ್ಯೂಜೆರ್ಸಿ ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ, ದೋಣಿಗಳಲ್ಲಿ ರಕ್ಷಣಾ ಕಾರ್ಯಾಚರಣೆ ಕೈಗೊಂಡರು. ಆದಾಗ್ಯೂ, ಹೆಲಿಕಾಪ್ಟರ್‌ನಲ್ಲಿದ್ದ ಎಲ್ಲಾ ಪ್ರಯಾಣಿಕರು ಮತ್ತು ಓರ್ವ ಪೈಲೆಟ್ ಈ ದುರಂತದಲ್ಲಿ ಬದುಕುಳಿಯಲಿಲ್ಲ ಎಂದು ಮೂಲಗಳು ಖಚಿತಪಡಿಸಿವೆ.

# ಬಿಜೆಪಿ ಬಲವರ್ಧನೆಗೆ ಅಮಿತ್ ಶಾ ಪ್ಲಾನ್

**ಚೆನ್ನೈ:** ಮುಂಬರುವ 2026ರ ತಮಿಳುನಾಡು ವಿಧಾನಸಭೆ ಚುನಾವಣೆ ಗಮನದಲ್ಲಿರಿಸಿಕೊಂಡು ಬಿಜೆಪಿ ಪಕ್ಷವನ್ನು ಬಲವರ್ಧನೆಗೊಳಿಸುವ ಕಾರ್ಯಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಕೈ ಹಾಕಿದ್ದಾರೆ.

ತಡರಾತ್ರಿ ಚೆನ್ನೈಗೆ ಆಗಮಿಸಿದ ಅಮಿತ್ ಶಾ, ತಮಿಳುನಾಡಿನಲ್ಲಿ ಪಕ್ಷದ ಕಾರ್ಯ ಚಟುವಟಿಕೆಯನ್ನು ಪರಿಶೀಲಿಸುವ ನಿರೀಕ್ಷೆಯಿದೆ ಮತ್ತು ರಾಜ್ಯದಲ್ಲಿ ಮೈತ್ರಿ ಸಾಧ್ಯತೆಗಳ ಬಗ್ಗೆ ಚರ್ಚಿಸುವ ಸಾಧ್ಯತೆಯಿದೆ.



ಮುಂದಿನ ವಿಧಾನಸಭಾ ಚುನಾವಣೆಗೆ ಸಜ್ಜಾಗುತ್ತಿದ್ದೇವೆ. ಸಾಮಾನ್ಯವಾಗಿ, ನಾವು ಚುನಾವಣೆಗೆ ಒಂದು ವರ್ಷ ಮುಂಚಿತವಾಗಿ ನಮ್ಮ ಪ್ರಾಥಮಿಕ ಕೆಲಸವನ್ನು ಪ್ರಾರಂಭಿಸುತ್ತೇವೆ ಮತ್ತು ಶಾ ಅವರ ಭೇಟಿ ನಮಗೆ ಅಗತ್ಯವಾದ ಪ್ರಚೋದನೆಯನ್ನು ನೀಡುತ್ತದೆ ಎಂದು ರಾಜ್ಯ ಬಿಜೆಪಿಯ ಹಿರಿಯ ನಾಯಕರೊಬ್ಬರು ಪಿಟಿಐಗೆ ತಿಳಿಸಿದ್ದಾರೆ.

ತಮ್ಮ ಒಂದು ದಿನದ ಭೇಟಿಯ ಸಮಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ವಿರುದ್ಧ ಆಡಳಿತಾರೂಢ ಡಿಎಂಕೆಯ ಸುಳ್ಳು ಪ್ರಚಾರವನ್ನು ಅವರು ಎದುರಿಸಬಹುದು ಎಂದು ಪಕ್ಷದ ಮಹಿಳಾ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷೆ ಮತ್ತು ಕೊಯಮತ್ತೂರು ದಕ್ಷಿಣ ಶಾಸಕಿ ವನತಿ ಶ್ರೀನಿವಾಸನ್ ಹೇಳಿದ್ದಾರೆ.

ಅಮಿತ್ ಶಾ ಅವರ ಭೇಟಿಯು ರಾಜ್ಯದಲ್ಲಿ ಮೈತ್ರಿಯನ್ನು ದೃಢಪಡಿಸುತ್ತದೆಯೇ ಎಂದು ಕೇಳಿದಾಗ, ಮೈತ್ರಿಯ ಬಗ್ಗೆ ನಿರ್ಧಾರವನ್ನು ಪಕ್ಷದ ನಾಯಕತ್ವ ಮಾತ್ರ ಪ್ರಕಟಿಸುತ್ತದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಇಲ್ಲಿಗೆ ಆಗಮಿಸಿದ ಕೇಂದ್ರ ಗೃಹ ಸಚಿವರನ್ನು ತಮಿಳುನಾಡಿನ ರಾಷ್ಟ್ರೀಯ ಸಹ ಉಸ್ತುವಾರಿ ಡಾ.ಪೊಂಗುಲೇಟಿ ಸುಧಾಕರ್ ರೆಡ್ಡಿ ಸೇರಿದಂತೆ ರಾಜ್ಯ ಬಿಜೆಪಿ ಮುಖಂಡರು ಸ್ವಾಗತಿಸಿದರು.

ಅವರ ಉಪಸ್ಥಿತಿಯು ಕಾರ್ಯಕರ್ತರಿಗೆ ಶಕ್ತಿ ನೀಡುತ್ತದೆ ಮತ್ತು ಪ್ರಧಾನಿ ನರೇಂದ್ರ ಮೋದಿ ಜಿ ಅವರ ನಾಯಕತ್ವದಲ್ಲಿ ತಮಿಳುನಾಡಿನ ಅಭಿವೃದ್ಧಿಗಾಗಿ ಕೆಲಸ ಮಾಡುವ ನಮ್ಮ ಸಂಕಲ್ಪವನ್ನು ಬಲಪಡಿಸುತ್ತದೆ ಎಂದು ರೆಡ್ಡಿ ಹೇಳಿದರು.

ಅವರ ಭೇಟಿಯ ಸಂದರ್ಭದಲ್ಲಿ ರಾಜ್ಯ ಘಟಕವು ಹೊಸ ಪದಾಧಿಕಾರಿಗಳ ತಂಡವನ್ನು ಆಯ್ಕೆ ಮಾಡುವ ಅಂತಿಮ ಹಂತದ ಭಾಗವಾಗಿ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಪಕ್ಷದ ಆಕಾಂಕ್ಷಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

# ಕಿಶ್ತ್ವಾರ್ ಎನ್‌ಕೌಂಟರ್‌ಗೆ ಓರ್ವ ಉಗ್ರ ಬಲಿ

**ಜಮ್ಮು:** ಜಮ್ಮು ಮತ್ತು ಕಾಶ್ಮೀರದ ಕಿಶ್ತ್ವಾರ್ ಜಿಲ್ಲೆಯಲ್ಲಿ ಶುಕ್ರವಾರ ಭದ್ರತಾ ಪಡೆಗಳೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಒಬ್ಬ ಉಗ್ರನನ್ನು ಹತ್ಯೆ ಮಾಡಲಾಗಿದೆ. ಅಲ್ಲದೆ ಉಧಂಪುರ ಜಿಲ್ಲೆಯಲ್ಲಿ ಮೂವರು ಉಗ್ರರನ್ನು ಪತ್ತೆಹಚ್ಚಲು ಪ್ರತ್ಯೇಕ ಕಾರ್ಯಾಚರಣೆ ನಡೆಯುತ್ತಿದೆ ಎಂದು ಸೇನಾ ಅಧಿಕಾರಿಗಳು ತಿಳಿಸಿದ್ದಾರೆ.

ಜಮ್ಮು ಪ್ರದೇಶದ ಗುಡ್ಡಗಾಡು ಜಿಲ್ಲೆಗಳ ವಿವಿಧ ಸ್ಥಳಗಳಲ್ಲಿ ಉಗ್ರರು ಅಡಗಿರುವ ಶಂಕೆಯ ಮೇರೆಗೆ ತೀವ್ರ ನಿಗಾ ಇಡಲು ಭದ್ರತಾ ಪಡೆಗಳು, ದೋಡಾ ಜಿಲ್ಲೆಯ ಭದೇರ್ವಾ ಪ್ರದೇಶಕ್ಕೆ ಕಣ್ಗಾವಲು ವ್ಯಾಪ್ತಿಯನ್ನು ವಿಸ್ತರಿಸಿವೆ.

ಜಿಲ್ಲೆಯ ಚತ್ರು ಅರಣ್ಯ ಪ್ರದೇಶದಲ್ಲಿ ಸೇನೆ ಮತ್ತು ಜಮ್ಮು ಮತ್ತು ಕಾಶ್ಮೀರ ಪೊಲೀಸರು ಜಂಟಿಯಾಗಿ ಪ್ರಾರಂಭಿಸಿದ ಶೋಧ ಮತ್ತು ಹತ್ಯೆ ಕಾರ್ಯಾಚರಣೆ ಸಮಯದಲ್ಲಿ ಕಿಶ್ತ್ವಾರ್‌ನಲ್ಲಿ ಎನ್‌ಕೌಂಟರ್ ನಡೆದಿದ್ದು, ಓರ್ವ ಉಗ್ರನನ್ನು ಹತ್ಯೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಾರ್ಯಾಚರಣೆಯ ಸಮಯದಲ್ಲಿ, ಭದ್ರತಾ ಪಡೆಗಳ ಮೇಲೆ ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದವು. ಪ್ರತಿ ದಾಳಿಯಲ್ಲಿ ಇದುವರೆಗೆ ಒಬ್ಬ ಭಯೋತ್ಪಾದಕನನ್ನು ತಟಸ್ಥಗೊಳಿಸಲಾಗಿದೆ ಎಂದು ಸೇನೆ ವೈಟ್ ನೈಟ್ ಕಾರ್ಪ್ಸ್ ಅಥವಾ 16 ಕಾರ್ಪ್ಸ್‌ನಲ್ಲಿ ಪೋಸ್ಟ್ ಮಾಡಿದೆ. ಪ್ರತಿಕೂಲ ಭೂಪ್ರದೇಶ ಮತ್ತು ಪ್ರತಿಕೂಲ ಹವಾಮಾನದ ಹೊರತಾಗಿಯೂ, ನಮ್ಮ ಧೈರ್ಯಶಾಲಿ ಸೈನಿಕರು ನಿರಂತರವಾಗಿ ಕಾರ್ಯಾಚರಣೆಯನ್ನು ಮುಂದುವರೆಸಿದ್ದಾರೆ ಎಂದು ಸೇನೆ ಹೇಳಿದೆ. ಹತ್ಯೆಗೀಡಾದ ಭಯೋತ್ಪಾದಕ ಪಾಕಿಸ್ತಾನದ ಸೈಫುಲ್ಲಾ ಮಾಡ್ಯೂಲ್‌ನ ಭಾಗವಾಗಿದ್ದನೆಂದು ವರದಿಯಾಗಿದೆ. ಆದರೆ ಇದನ್ನು ಅಧಿಕೃತವಾಗಿ ಸೇನೆ ಖಚಿತಪಡಿಸಿಲ್ಲ.

ನೈದ್ಗಾಮ್ ಪ್ರದೇಶದಲ್ಲಿ ಭಯೋತ್ಪಾದಕರೊಂದಿಗೆ ಸಣ್ಣ ಗುಂಡಿನ ಚಕಮಕಿ ನಡೆದಿದ್ದು, ಇದರ ಪರಿಣಾಮವಾಗಿ ಬೃಹತ್ ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಲಾಯಿತು.

### ನ್ಯಾಯಾಧೀಶರೊಂದಿಗೆ ಅನುಚಿತ ವರ್ತನೆ; ವಕೀಲನಿಗೆ 6 ತಿಂಗಳು ಜೈಲು

**ಲಕ್ನೋ:** ವಕೀಲರ ಉಡುಪು ಧರಿಸದೆ ಮತ್ತು ಶರ್ಟ್ ಗುಂಡಿ ಹಾಕದೆಯೇ ನ್ಯಾಯಾಲಯಕ್ಕೆ ಹಾಜರಾದ ಕಾರಣಕ್ಕಾಗಿ ಅಲಹಾಬಾದ್ ಹೈಕೋರ್ಟ್ ಸ್ಥಳೀಯ ವಕೀಲರೊಬ್ಬರಿಗೆ ಆರು ತಿಂಗಳ ಜೈಲು ಶಿಕ್ಷೆ ವಿಧಿಸಿದೆ. 2021ರ ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆಗೆ ಹಾಜರಾದ ವಕೀಲ ಅಶೋಕ್ ಪಾಂಡೆ ಎಂಬುವವರಿಗೆ ನ್ಯಾಯಾಲಯ ಶಿಕ್ಷೆ ನೀಡಿದೆ. ವಕೀಲರು ಸರಿಯಾದ ಸಮವಸ್ತ್ರವಿಲ್ಲದೆ ನ್ಯಾಯಾಲಯಕ್ಕೆ ಹಾಜರಾಗಿದ್ದನ್ನು ನ್ಯಾಯಾಲಯ ಸ್ವಯಂಪ್ರೇರಿತವಾಗಿ ಗಮನಿಸಿದೆ.

ನ್ಯಾಯಾಧೀಶರೊಂದಿಗೆ ಅನುಚಿತವಾಗಿ ವರ್ತಿಸಿದ್ದಲ್ಲದೆ, ನ್ಯಾಯಾಲಯದಿಂದ ಹೊರಹೋಗುವಂತೆ ಹೇಳಿದ ನ್ಯಾಯಾಧೀಶರನ್ನು ಗೂಂಡಾಗಳು' ಎಂದು ಕರೆದಿದ್ದಾರೆ.

ನ್ಯಾಯಮೂರ್ತಿಗಳಾದ ವಿವೇಕ್ ಚೌಧರಿ ಮತ್ತು ಬಿಆರ್ ಸಿಂಗ್ ಅವರನ್ನೊಳಗೊಂಡ ವಿಭಾಗೀಯ ಪೀಠವು, ಶಿಕ್ಷೆಯನ್ನು ಅನುಭವಿಸಲು ಲಕ್ನೋ ಮುಖ್ಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮುಂದೆ ಶರಣಾಗಲು ವಕೀಲರಿಗೆ ನಾಲ್ಕು ವಾರಗಳ ಕಾಲಾವಕಾಶ ನೀಡಿದೆ.

### ಅಮೆರಿಕದಲ್ಲಿ ತಹವ್ವೂರ್ ರಾಣಾನನ್ನು ಭಾರತೀಯ ಅಧಿಕಾರಿಗಳು ರಿಸೀವ್ ಮಾಡಿದ್ದು ಹೀಗೆ


# ರಾಣಾ ಹಸ್ತಾಂತರದ ಫೋಟೋ ಬಿಡುಗಡೆ ಮಾಡಿದ ಯುಎಸ್

**ವಾಷಿಂಗ್ಟನ್ ಡಿಸಿ:** 2008ರ ಮುಂಬೈ ಭಯಾನಕ ದಾಳಿಯ ಪ್ರಮುಖ ಆರೋಪಿ ತಹವ್ವೂರ್ ರಾಣಾನನ್ನು ಭಾರತಕ್ಕೆ ಕರೆತರಲಾಗಿದೆ. ಅಮೆರಿಕದ ಅಧಿಕಾರಿಗಳು ರಾಣಾನನ್ನು ಭಾರತೀಯ ಅಧಿಕಾರಿಗಳಿಗೆ ಹಸ್ತಾಂತರಿಸಿದ್ದಾರೆ. ಈ ಹಸ್ತಾಂತರ ಪ್ರಕ್ರಿಯೆಯ ಫೋಟೋಗಳನ್ನು ಅಮೆರಿಕದ ನ್ಯಾಯಾಂಗ ಇಲಾಖೆ ಇದೀಗ ಬಿಡುಗಡೆ ಮಾಡಿದೆ.

ಫೋಟೋದಲ್ಲಿ ತಹವ್ವೂರ್ ರಾಣಾ ಅಮೆರಿಕದ ಜೈಲಿನ ಬಟ್ಟೆ ಧರಿಸಿದ್ದಾನೆ. ಅಮೆರಿಕದ ಮಾರ್ಷಲ್ಸ್ ಅಧಿಕಾರಿಗಳು ಆತನನ್ನು ಭಾರತದ ವಿದೇಶಾಂಗ ಸಚಿವಾಲಯದ ಅಧಿಕಾರಿಗಳಿಗೆ ಒಪ್ಪಿಸಿದ್ದಾರೆ.

ಈ ಕುರಿತು ಅಧಿಕೃತ ಹೇಳಿಕೆಯನ್ನು ಬಿಡುಗಡೆ ಮಾಡಿರುವ ಅಮೆರಿಕದ ನ್ಯಾಯಾಂಗ ಇಲಾಖೆ, 2008ರ ಮುಂಬೈ ಭಯೋತ್ಪಾದಕ ದಾಳಿಗೆ ಸಂಬಂಧಿಸಿದ 10 ಕ್ರಿಮಿನಲ್ ಆರೋಪಗಳ ಮೇಲೆ, ಭಾರತದಲ್ಲಿ ತಹವ್ವೂರ್ ರಾಣಾ ವಿಚಾರಣೆ ನಡೆಯಲಿದೆ. ಕೆನಡಾದ ಪ್ರಜೆ ಮತ್ತು ಪಾಕಿಸ್ತಾನದ ನಿವಾಸಿಯಾಗಿರುವ ಭಯೋತ್ಪಾದಕ ತಹವ್ವೂರ್ ಹುಸೇನ್ ರಾಣಾನನ್ನು, ಅಮೆರಿಕದ ಮಾರ್ಷಲ್ ಅಧಿಕಾರಿಗಳು ಭಾರತೀಯ ವಿದೇಶಾಂಗ ಇಲಾಖೆ ಅಧಿಕಾರಿಗಳಿಗೆ ಹಸ್ತಾಂತರಿಸಿದ್ದಾರೆ.

ಎಂದು ಸ್ಪಷ್ಟಪಡಿಸಿದೆ. ಮುಂದುವರೆದು, ಮುಂಬೈ ದಾಳಿಯಲ್ಲಿ ಆರು ಅಮೆರಿಕನ್ನರು ಸಾವನ್ನಪ್ಪಿದ್ದರು. ಭಾರತದಲ್ಲಿ ತಹವ್ವೂರ್ ರಾಣಾ ವಿಚಾರಣೆ



**ಸುದೀರ್ಘ ವಿಚಾರಣೆ**

**2009ರಲ್ಲಿ ಬೇರೊಂದು ಪ್ರಕರಣದಲ್ಲಿ ತಹವ್ವೂರ್ ರಾಣಾನನ್ನು ಬಂಧಿಸಿದ್ದ ಅಮೆರಿಕದ ಎಫ್‌ಬಿಐ, ಭಯೋತ್ಪಾದಕ ಗುಂಪುಗಳೊಂದಿಗಿನ ಆತನ ಸಂಬಂಧವನ್ನು ಖಚಿತಪಡಿಸಿತ್ತು. ಇದೇ ವೇಳೆ ಅಮೆರಿಕ ನ್ಯಾಯಾಲಯದಲ್ಲಿ ತಹವ್ವೂರ್ ರಾಣಾನ ಹಸ್ತಾಂತರದ ಬಗ್ಗೆ ಸುದೀರ್ಘ ವಿಚಾರಣೆ ನಡೆದು, ಅಂತಿಮವಾಗಿ ಅಮೆರಿಕದ ಸುಪ್ರೀಂಕೋರ್ಟ್, ರಾಣಾನನ್ನು ಭಾರತಕ್ಕೆ ಹಸ್ತಾಂತರಿಸಲು ಅನುಮತಿ ನೀಡಿತು.**

ನಡೆಯಲಿರುವುದರಿಂದ, ದಾಳಿಯಲ್ಲಿ ಬಲಿಯಾದ ಯುಎಸ್ ನಾಗರಿಕರ ಕುಟುಂಬಸ್ಥರಿಗೆ ನ್ಯಾಯ ಸಿಗುವ ವಿಶ್ವಾಸವಿದೆ. ರಾಣಾ ಹಸ್ತಾಂತರವು ಒಂದು

**ತಹವ್ವೂರ್ ರಾಣಾನ ವಿಚಾರಣೆ ನಡೆಸಿರುವ ಅಮೆರಿಕದ ನ್ಯಾಯಾಲಯವು, ರಾಣಾ ಮುಂಬೈ ದಾಳಿಯಲ್ಲಿ ನೇರವಾಗಿ ಭಾಗವಹಿಸಿಲ್ಲ. ಆದರೆ ಆತ ದಾಳಿಗೆ ಬೇಕಾದ ಸಹಾಯ ಮಾಡಿದ್ದಾನೆ. ಚಿಕಾಗೋದಲ್ಲಿ ವಲಸೆ ಕಚೇರಿ ನಡೆಸುತ್ತಿದ್ದ ರಾಣಾ, ಉಗ್ರ ಡೇವಿಡ್ ಹೆಡ್ಲಿಗೆ ಸುಳ್ಳು ದಾಖಲೆಗಳನ್ನು ಬಳಸಿ ಭಾರತಕ್ಕೆ ಬರಲು ಸಹಾಯ ಮಾಡಿದ್ದಾನೆ ಎಂದು ತೀರ್ಪು ನೀಡಿದೆ.**

ನಿರ್ಣಾಯಕ ಹೆಜ್ಜೆಯಾಗಿದೆ. ಈ ಹಿನ್ನೆಲೆಯಲ್ಲಿ ಯುಎಸ್ ಮಾರ್ಷಲ್ಸ್ ಈಗಾಗಲೇ ಭಾರತೀಯ ವಿದೇಶಾಂಗ ಇಲಾಖೆ ಅಧಿಕಾರಿಳಿಗೆ ರಾಣಾನನ್ನು ಅಧಿಕೃತವಾಗಿ ಹಸ್ತಾಂತರಿಸಿದ್ದಾರೆ ಎಂದು ಯುಎಸ್ ಡಿಪಾರ್ಟ್ ಮೆಂಟ್ ಆಫ್ ಜಸ್ಟೀಸ್ ಮಾಹಿತಿ ನೀಡಿದೆ. ಮುಂಬೈ ದಾಳಿಯ ಬಳಿಕ ಡೆವಿಡ್ ಹೆಡ್ಲಿ ಮತ್ತು ತಹವ್ವೂರ್ ರಾಣಾ ದೂರವಾಣಿಯಲ್ಲಿ ಸಂಭಾಷಣೆ ನಡೆಸಿದ್ದು, ಮುಂಬೈ ದಾಳಿಕೋರರನ್ನು ಮೆಚ್ಚಿ ಮಾತನಾಡಿದ್ದಾರೆ.

ಅಲ್ಲದೇ ದಾಳಿಯಲ್ಲಿ ಭಾಗವಹಿಸಿದ ಎಲ್ಲಾ ಉಗ್ರರಿಗೂ ಪಾಕಿಸ್ತಾನದ ನಿಶಾನ್-ಎ-ಹೈದರ್ ಪ್ರಶಸ್ತಿ ಸಿಗಬೇಕು ಎಂದ ಇವರಿಬ್ಬರೂ ಸಂಭಾಷಣೆ

- **ಭಾರತಕ್ಕೆ ಅಧಿಕೃತವಾಗಿ ಹಸ್ತಾಂತರಗೊಂಡ ಉಗ್ರ ತಹವ್ವೂರ್ ರಾಣಾ**
- **ರಾಣಾ ಹಸ್ತಾಂತರದ ಫೋಟೋ ಬಿಡುಗಡೆ ಮಾಡಿದ ಯುಎಸ್ ನ್ಯಾಯಾಂಗ ಇಲಾಖೆ**
- **ಭಾರತೀಯ ವಿದೇಶಾಂಗ ಇಲಾಖೆ ಅಧಿಕಾರಿಗಳಿಗೆ ತಹವ್ವೂರ್ ರಾಣಾ ಹಸ್ತಾಂತರ**
- **ಯುಎಸ್ ಡಿಪಾರ್ಟ್‌ಮೆಂಟ್ ಆಫ್ ಜಸ್ಟೀಸ್ ಬಿಡುಗಡೆ ಮಾಡಿದ ಫೋಟೋ ವೈರಲ್**

ನಡೆಸಿದ್ದರು ಎಂದು ಅಮೆರಿಕದ ನ್ಯಾಯಾಲಯ ತನ್ನ ತೀರ್ಪಿನಲ್ಲಿ ಉಲ್ಲೇಖಿಸಿದೆ ಸದ್ಯ ತಹವ್ವೂರ್ ರಾಣಾನನ್ನು ಭಾರತಕ್ಕೆ ಕರೆತರಲಾಗಿದೆ.

ಭಾರತದಲ್ಲಿ ಆತನ ವಿಚಾರಣೆ ನಡೆಯಲಿದ್ದು, ಮುಂಬೈ ದಾಳಿಯಲ್ಲಿ ರಾಣಾನ ಪಾತ್ರದ ಬಗ್ಗೆ ತನಿಖೆ ನಡೆಸಲಾಗುವುದು. ಉಗ್ರ ತಹವ್ವೂರ್ ರಾಣಾ ತಪ್ಪಿತಸ್ಥ ಎಂದು ಸಾಬೀತಾದರೆ, ಆತನಿಗೆ ಕಠಿಣ ಶಿಕ್ಷೆಯಾಗುವುದು ಖಚಿತ. ಭಾರತ ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದೆ.

### • ಚೀನಾದಿಂದ ಆಪಲ್ ವಿಮುಖ • ಅನೇಕ ಕಂಪನಿಗಳಿಗೆ ಇಂಡಿಯಾವೇ ಆಪತ್ಬಾಂಧವ

# ಭಾರತಕ್ಕೆ ಲಾಭ ತಂದ ಡೊನಾಲ್ಡ್ ಟ್ರಂಪ್ ಸುಂಕ ಯುದ್ಧ

**ಹೊಸದಿಲ್ಲಿ :** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚೀನಾ ವಿರುದ್ಧ ತೆರಿಗೆ ಯುದ್ಧ ಸಾರಿದ್ದಾರೆ. ಇದು ಭಾರತಕ್ಕೆ ಲಾಭವಾಗುವ ರೀತಿ ಕಾಣುತ್ತಿದೆ ಟ್ರಂಪ್ ನೀತಿ ಅಮೆರಿಕದ ಪ್ರತಿಷ್ಠಿತ ಫೋನ್ ಬ್ರಾಂಡ್ ಆಪಲ್ ಚೀನಾವನ್ನು ತೊರೆಯುವ ಬಗ್ಗೆ ಯೋಚನೆ ಮಾಡುವಂತೆ ಮಾಡಿದೆ. ಇದರ ನಡುವೆಯೇ ಭಾರತದಲ್ಲಿ ಆಪಲ್ ಉತ್ಪನ್ನಗಳ ಉತ್ಪಾದನೆಗೆ ಬೂಸ್ಟ್ ನೀಡಿದೆ. ಇದರಿಂದ ಭಾರತದಲ್ಲಿ ಹೆಚ್ಚಿನ ಉದ್ಯೋಗ ಸೃಷ್ಟಿ ಆಗಲಿದ್ದು, ಆರ್ಥಿಕ ಪ್ರಗತಿಯೂ ಆಗಲಿದೆ. ಆಪಲ್ ಸಾಧನಗಳ ಮುಖ್ಯ ಉತ್ಪಾದನಾ ಕೇಂದ್ರವಾಗಿರುವ ಚೀನಾ ಮೇಲೆ ಡೊನಾಲ್ಡ್ ಟ್ರಂಪ್ ಶೇ.145ರಷ್ಟು ಸುಂಕ ಹೆಚ್ಚಿಸಿರುವುದು ಆಪಲ್ ಕಂಪನಿಗೆ ನುಂಗಲಾರದ ತುತ್ತಾಗಿದೆ. ಈ ಹಿನ್ನೆಲೆ ಟ್ರಂಪ್ ಸುಂಕವನ್ನು ಮೀರಿ ನಡೆಯಲು ಆಪಲ್ ಭಾರತವನ್ನು ಪರ್ಯಾಯವಾಗಿ ನೋಡುತ್ತಿದೆ. ಈ ಹೊತ್ತಲ್ಲಿ ಆಪಲ್ ಸೇರಿ ಅನೇಕ ಕಂಪನಿಗಳಿಗೆ ಭಾರತ ಆಪತ್ಬಾಂದವ ರೀತಿ ಕಾಣುತ್ತಿದ್ದು, ಭಾರತಕ್ಕೂ ಇದು ಅನುಕೂಲ ಆಗಲಿದೆ ಎನ್ನಲಾಗುತ್ತಿದೆ.

ಈಗಾಗಲೇ ಭಾರತದಲ್ಲಿ ಆಪಲ್ ಸಾಧನಗಳ ಉತ್ಪಾದನಾ ಘಟಕಗಳು ತಲೆಯೆತ್ತಿವೆ. ಚೀನಾ ಮೇಲೆ ಅಮೆರಿಕ ಸುಂಕ ಏರಿಸಿರುವುದರಿಂದ ಭಾರತದಲ್ಲಿ ಹೆಚ್ಚಿನ ಉತ್ಪಾದನೆಗೆ ಆಪಲ್ ಕಂಪನಿ ಮುಂದಾಗಿದೆ. ಭಾರತದ ಅತಿದಡೊಡ್ಡ ಫಾಕ್ಸ್‌ಕಾನ್ ಇಂಡಿಯಾ ಕಾರ್ಖಾನೆಯಲ್ಲಿ ಉತ್ಪಾದನೆಗೆ ಬೂಸ್ಟ್ ನೀಡಿರುವ ಆಪಲ್ ಕಂಪನಿ ತಾತ್ಕಾಲಿಕವಾಗಿ ಆಪಲ್ ಸಾಧನಗಳ ಉತ್ಪಾದನೆಯನ್ನು ಮುಂದುವರೆಸಿದೆ.

ಶೇ.20ರಷ್ಟು ಉತ್ಪಾದನೆ ಹೆಚ್ಚಳದ ಗುರಿಯೊಂದಿಗೆ ಆಪಲ್ ಕಂಪನಿ ಕೆಲಸ ಮಾಡುತ್ತಿದ್ದು, ಭಾರತದ ಎಲ್ಲಾ



ಆಪಲ್ ಉತ್ಪಾದನಾ ಘಟಕಗಳಲ್ಲಿ ಉತ್ಪಾದನೆಗೆ ಬೂಸ್ಟ್ ನೀಡಿದೆ ಎನ್ನಲಾಗಿದೆ. ಚೆನ್ನೈನಲ್ಲಿಯೇ ಕಳೆದ ವರ್ಷ 20 ಮಿಲಿಯನ್ ಐಫೋನ್‌ಗಳನ್ನು ಉತ್ಪಾದಿಸಿತ್ತು. ಈಗ ರಜಾ ದಿನವೂ ಕೆಲಸ ನಡೆಯುತ್ತಿರುವುದರಿಂದ ಉತ್ಪಾದನೆ ಭಾರೀ ಪ್ರಮಾಣದಲ್ಲಿ ಏರಿಕೆಯಾಗಿದೆ.

ಟ್ರಂಪ್ ಸುಂಕ ಯುದ್ಧ ಶುರು ಮಾಡುವ ಮುನ್ನವೇ ಭಾರತದಲ್ಲಿ ತನ್ನ ಸಾಮ್ರಾಜ್ಯ ವಿಸ್ತರಿಸಲು ಆಪಲ್ ಮುಂದಾಗಿತ್ತು. ಇದರ ಭಾಗವಾಗಿ ಚೆನ್ನೈನಲ್ಲಿ ತ್ವರಿತ ಕಸ್ಟಮ್ಸ್ ಕ್ಲಿಯರೆನ್ಸ್ ಪಡೆಯಲು ಸುಮಾರು 8 ತಿಂಗಳು ಹಿಂದೆಯೇ ಆಪಲ್ ಕಂಪನಿ ಮೋದಿ ಸರ್ಕಾರದ ಮೊರೆ ಹೋಗಿತ್ತು.

ಕೇಂದ್ರ ಸರ್ಕಾರ ಕೂಡ ಆಪಲ್‌ಗೆ ಅಗತ್ಯವಿರುವ ಕ್ಲಿಯರೆನ್ಸ್ ಕೊಡಿ ಎಂದು ಅಧಿಕಾರಿಗಳಿಗೆ ಸೂಚಿಸಿತ್ತು. ಈ ಮೊದಲು ಚೆನ್ನೈ ಏರ್‌ಪೋರ್ಟ್‌ನಲ್ಲಿ ಕಸ್ಟಮ್ ಕ್ಲಿಯರೆನ್ಸ್‌ಗೆ 30 ಗಂಟೆ ಸಮಯ ಹಿಡಿಯುತ್ತಿತ್ತು. ಅದು ಈಗ ಆರು ಗಂಟೆಗೆ ಇಳಿದಿದ್ದು, ಆಪಲ್‌ಗಾಗಿ ಗ್ರೀನ್ ಕಾರಿಡಾರ್ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಹೇಳಲಾಗುತ್ತಿದೆ. ಚೀನಾದ ಕೆಲ ವಿಮಾನ ನಿಲ್ದಾಣಗಳಲ್ಲಿ ಗ್ರೀನ್ ಕಾರಿಡಾರ್ ವ್ಯವಸ್ಥೆ ಇದ್ದು, ಅದು ಆಪಲ್ ಕಂಪನಿಗಾಗಿ ಚೆನ್ನೈ ಏರ್‌ಪೋರ್ಟ್ ನಲ್ಲೂ ಶುರುವಾಗಿದೆ ಎನ್ನಲಾಗಿದೆ.

**ಈ ವರ್ಷ ಭಾರೀ ಪ್ರಮಾಣದಲ್ಲಿ ಏರಿದ ಆಪಲ್ ರಫ್ತು**

**ಈ ಹಿನ್ನೆಲೆ ಭಾರತದಿಂದ ಅಮೆರಿಕಕ್ಕೆ ಜನವರಿಯಲ್ಲಿ 770 ಬಿಲಿಯನ್ ಡಾಲರ್ ಮೌಲ್ಯದ ಆಪಲ್ ಉತ್ಪನ್ನಗಳು ಹೋಗಿದ್ದರೆ, ಫೆಬ್ರವರಿಯಲ್ಲಿ 643 ಮಿಲಿಯನ್ ಡಾಲರ್ ಮೌಲ್ಯದ ಉತ್ಪನ್ನಗಳು ರಫ್ತಾಗಿದ್ದವು. ಕಳೆದ ವರ್ಷದ ಕೊನೆ ನಾಲ್ಕು ತಿಂಗಳಲ್ಲಿ ಇದರ ಪ್ರಮಾಣ ಕೇವಲ 110 ಮಿಲಿಯನ್ ಡಾಲರ್‌ನಿಂದ 331 ಮಿಲಿಯನ್ ಡಾಲರ್ ಇತ್ತು. ಜನವರಿ ಹಾಗೂ ಫೆಬ್ರವರಿಯಲ್ಲಿ ಇದು ಡಬಲ್ ಆಗಿರೋದು ಆಪಲ್ ಚೀನಾ ಮೀರಿ ಭಾರತದ ಕಡೆ ನೋಡುತ್ತಿರುವುದು ಪಕ್ಕಾ ಆಗಿದೆ. ಜನವರಿ ಮತ್ತು ಫೆಬ್ರವರಿಯಲ್ಲಿ ಫಾಕ್ಸ್‌ಕಾನ್ ಘಟಕದಿಂದ ಆಪಲ್ ಅಮೆರಿಕಕ್ಕೆ ತೆಗೆದುಕೊಂಡು ಹೋಗಿರುವ ಉತ್ಪನ್ನಗಳಲ್ಲಿ ಶೇ.85ಕ್ಕಿಂತ ಹೆಚ್ಚು ಚಿಕಾಗೋ, ಲಾಸ್ ಏಂಜಲೀಸ್, ನ್ಯೂಯಾರ್ಕ್ ಮತ್ತು ಸ್ಯಾನ್ ಫ್ರಾನ್ಸಿಸ್ಕೋಗೆ ರಫ್ತಾಗಿವೆ ಎಂಬುದು ಕೂಡ ಪ್ರಮುಖ.**

**ಭಾರತದಲ್ಲಿ ಆಪಲ್‌ನ ಮೂರು ಕಾರ್ಖಾನೆ ರನ್**

**ಆಪಲ್ ತನ್ನ ಉತ್ಪಾದನೆಯನ್ನು ಚೀನಾ ಮೀರಿ ವಿಸ್ತರಿಸಲು ಮೊದಲಿನಿಂದಲೂ ಯೋಚಿಸುತ್ತಿದೆ. ಈಗ ಅದಕ್ಕೆ ಕಾಲ ಪಕ್ವವಾಗಿದ್ದು, ಭಾರತ ಆಪಲ್ ಕಂಪನಿಗೆ ನಿರ್ಣಾಯಕ ನೆಲೆಯಾಗಿ ಕಾಣುತ್ತಿದೆ. ಈಗಾಗಲೇ ಆಪಲ್ ಕಂಪನಿ ಭಾರತದಲ್ಲಿ ಫಾಕ್ಸ್ ಕಾನ್ ಹಾಗೂ ಟಾಟಾ ಜೊತೆ ಟೈ ಅಪ್ ಆಗಿದ್ದು, ಒಟ್ಟು ಮೂರು ಕಾರ್ಖಾನೆಗಳಲ್ಲಿ ಆಪಲ್ ಸಾಧನಗಳು ಉತ್ಪಾದನೆಯಾಗುತ್ತಿವೆ. ಇನ್ನೂ ಎರಡು ಕಾರ್ಖಾನೆಗಳು ನಿರ್ಮಾಣವಾಗುತ್ತಿದ್ದು, ಮತ್ತಷ್ಟು ಕಡೆ ಆಪಲ್ ನಿರ್ಮಾಣ ಘಟಕಗಳನ್ನು ಸ್ಥಾಪಿಸುವ ಗುರಿಯನ್ನು ಹೊಂದಿದೆ. ಶೀಘ್ರದಲ್ಲಿಯೇ ಚೀನಾವನ್ನು ಮೀರಿಸುವಷ್ಟು ಆಪಲ್ ಸಾಧನಗಳ ಉತ್ಪಾದನೆ ಭಾರತದಲ್ಲಿ ಆಗಲಿದೆ ಎನ್ನಲಾಗುತ್ತಿದೆ. ಕೇಂದ್ರ ಸರ್ಕಾರ ಕೂಡ ಇದಕ್ಕೆ ಬೆಂಬಲವಾಗಿ ನಿಂತಿದ್ದು, ಆಪಲ್‌ಗೆ ಬೇಕಾದ ಸೌಲಭ್ಯಗಳನ್ನು ಕಲ್ಪಿಸುತ್ತಿದೆ ಎಂದು ಮೂಲಗಳು ತಿಳಿಸಿವೆ. ಇದರಿಂದ ಭಾರತಕ್ಕೆ ಕಂಪನಿಗಳನ್ನು ಸೆಳೆಯಲು ಮೋದಿ ಸರ್ಕಾರ ಮುಂದಾಗಿದ್ದು, ಉದ್ಯೋಗ ಸೃಷ್ಟಿ, ಆರ್ಥಿಕ ಪ್ರಗತಿಗೆ ಅಮೆರಿಕ ಹಾಗೂ ಚೀನಾ ನಡುವಿನ ವ್ಯಾಪಾರ ಯುದ್ಧವನ್ನು ಬಳಸಿಕೊಳ್ಳುತ್ತಿದೆ.**

### ಸಿಡಿಲು, ಆಲಿಕಲ್ಲು ಮಳೆಯಿಂದ 61 ಮಂದಿ ಸಾವು

**ಪಾಟ್ನಾ:** ಬಿಹಾರದಲ್ಲಿ ಸಿಡಿಲು ಮತ್ತು ಆಲಿಕಲ್ಲು ಮಳೆಯಿಂದ ಸಾವನ್ನಪ್ಪಿದವರ ಸಂಖ್ಯೆ 61ಕ್ಕೆ ಏರಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಆಲಿಕಲ್ಲು ಮಳೆ ಮತ್ತು ಮಳೆ ಸಂಬಂಧಿತ ಘಟನೆಗಳಲ್ಲಿ 39 ಜನ ಸಾವನ್ನಪ್ಪಿದ್ದರೆ, ಗುರುವಾರ ಸಿಡಿಲು ಬಡಿದು 22 ಜನ ಸಾವನ್ನಪ್ಪಿದ್ದಾರೆ ಎಂದು ಅವರು ಹೇಳಿದ್ದಾರೆ.

ಗುರುವಾರ ಸಂಜೆವರೆಗೆ ಇಪ್ಪತ್ತೈದು ಸಾವುಗಳು ವರದಿಯಾಗಿವೆ ಮತ್ತು ವಿವಿಧ ಜಿಲ್ಲೆ ಗಳಿಂದ ಡೇಟಾವನ್ನು ಸಂಗ್ರಹಿಸಿದ ನಂತರ ಸಾವಿನ ಸಂಖ್ಯೆ 61ಕ್ಕೆ ಏರಿದೆ. ನಳಂದ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂದರೆ 23 ಸಾವುಗಳು ಸಂಭವಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಹಾರದ ಹಲವಾರು ಜಿಲ್ಲೆಗಳಲ್ಲಿ ಸಿಡಿಲು, ಆಲಿ ಕಲ್ಲು ಮಳೆ ಮತ್ತು ಮಳೆ ಸಂಬಂಧಿತ ಘಟನೆಗಳಿಂದ ಸಾವನ್ನಪ್ಪಿದವರ ಸಂಖ್ಯೆ 61ಕ್ಕೆ ಏರಿದೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಇಲಾಖೆ ಬಿಡುಗಡೆ ಮಾಡಿದ ಪ್ರಕಟಣೆಯಲ್ಲಿ ತಿಳಿಸಿದೆ. ನಳಂದ ಜಿಲ್ಲೆಯಲ್ಲಿ ಅತಿ ಹೆಚ್ಚು, 23 ಮಂದಿ ಸಾವನ್ನಪ್ಪಿದ್ದಾರೆ.

ಭೋಜ್‌ಪುರ, ಸಿವಾನ್, ಗಯಾ, ಪಾಟ್ನಾ ಮತ್ತು ಶೇಖ್‌ಪುರದಲ್ಲಿ ತಲಾ ನಾಲ್ವರು, ಜಮುಯಿಯಲ್ಲಿ ಮೂವರು ಮತ್ತು ಜೆಹಾನಾಬಾದ್‌ನಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಗೋಪಾಲ್‌ಗಂಜ್, ಮುಜಾಫರ್‌ಪುರ್, ಅರ್ವಾಲ್, ದರ್ಭಂಗಾ, ಬೇಗುಸರೈ, ನಹರ್ಸಾ, ಕತಿಹಾರ್, ಲಖಿಪುರ್ ಜಿಲ್ಲೆಗಳಲ್ಲಿ ತಲಾ ಒಬ್ಬರು ಸಾವನ್ನಪ್ಪಿದ್ದಾರೆ.


### ತಮಿಳುನಾಡು ನೂತನ ಬಿಜೆಪಿ ರಾಜ್ಯಾಧ್ಯಕ್ಷರಾಗಿ ನೈನಾರ್ ನಾಗೇಂದ್ರನ್ ಅವಿರೋಧ ಆಯ್ಕೆ

**ಚೆನ್ನೈ:** ತಮಿಳುನಾಡು ಬಿಜೆಪಿ ನೂತನ ರಾಜ್ಯಾಧ್ಯಕ್ಷರಾಗಿ ತಿರುನಲ್ವೇಲಿ ಶಾಸಕ ನೈನಾರ್ ನಾಗೇಂದ್ರನ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.



ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಮಾಜಿ ಐಪಿಎಸ್ ಅಧಿಕಾರಿ ಕೆ. ಅಣ್ಣಾಮಲೈ ಅವರ ಅಧಿಕಾವಧಿ ಮುಗಿದ ಹಿನ್ನೆಲೆಯಲ್ಲಿ ಆ ಸ್ಥಾನಕ್ಕೆ ಬಿಜೆಪಿ ಹಿರಿಯ ಶಾಸಕ ನೈನಾರ್ ನಾಗೇಂದ್ರನ್ ಅವರನ್ನು ಆಯ್ಕೆ ಮಾಡಲಾಗಿದೆ. ಬಿಜೆಪಿ ರಾಜ್ಯಾಧ್ಯಕ್ಷ ಹುದ್ದೆಗೆ ನೈನಾರ್ ನಾಗೇಂದ್ರನ್ ಒಬ್ಬರೇ ನಾಮಪತ್ರ ಸಲ್ಲಿಸಿದ್ದು, ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಕೆ. ಅಣ್ಣಾಮಲೈ ಅವರು ತಮಿಳುನಾಡು ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ನೈನಾರ್ ನಾಗೇಂದ್ರನ್ ಅವರ ಹೆಸರನ್ನು ಪ್ರಸ್ತಾಪಿಸಿದರು. ಬಿಜೆಪಿಯ ಇತರ ನಾಯಕರು ಅದನ್ನು ಅನುಮೋದಿಸಿದರು. ನೈನಾರ್ ನಾಗೇಂದ್ರನ್ ಅವರು ತಮಿಳುನಾಡು ಬಿಜೆಪಿ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು, ಅಧಿಕೃತ ಘೋಷಣೆಯೊಂದೆ ಬಾಕಿ ಇದೆ.

ಇತ್ತೀಚಿಗೆ ಅಣ್ಣಾಮಲೈ ಅವರು ತಾವು ಬಿಜೆಪಿ ರಾಜ್ಯಾಧ್ಯಕ್ಷ ಹುದ್ದೆಯ ರೇಸ್‌ನಲ್ಲಿಲ್ಲ ಎಂದು ಸ್ಪಷ್ಟಪಡಿಸಿದ್ದರಿಂದ ಈ ಹುದ್ದೆಗೆ ವನತಿ ಶ್ರೀನಿವಾಸನ್ ಮತ್ತು ತಮಿಳಿಸೈ ಸೌಂದರರಾಜನ್ ಅವರ ಹೆಸರುಗಳು ಕೇಳಿಬಂದಿದ್ದವು. ಆದರೆ ಅಂತಿಮವಾಗಿ ನಾಗೇಂದ್ರನ್ ಅವರನ್ನು ಆಯ್ಕೆ ಮಾಡಲಾಗಿದೆ.






# ಅನ್‌ಕ್ಯಾಪ್ಡ್ ಕ್ಯಾಪ್ಟನ್

ಐಪಿಎಲ್ 2025 ರಲ್ಲಿ, 5 ಬಾರಿಯ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್‌ನ ಸ್ಥಿತಿ ಇಷ್ಟೊಂದು ಕೆಟ್ಟದಾಗಿರುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಯಾರಾದರೂ ಇದನ್ನು ಊಹಿಸಿದ್ದರೂ ಸಹ, ಸೀಸನ್‌ನ ಮಧ್ಯದಲ್ಲಿ ಎಂಎಸ್ ಧೋನಿ ಮತ್ತೆ ತಂಡದ ನಾಯಕತ್ವ ವಹಿಸಿಕೊಳ್ಳುತ್ತಾರೆ ಎಂದು ಯಾರೂ ಊಹಿಸಿರಲಿಲ್ಲ. ಆದರೆ ಈಗ ಅದು ಸಂಭವಿಸಿದೆ.

**ಐಪಿಎಲ್‌ನಲ್ಲಿ ಹೀಗೊಂದು ದಾಖಲೆ ಬರೆದ ಧೋನಿ**

ಐಪಿಎಲ್‌ನ ಅತ್ಯಂತ ಯಶಸ್ವಿ ನಾಯಕ ಎಂಎಸ್ ಧೋನಿ ಮತ್ತೊಮ್ಮೆ ಚೆನ್ನೈ ತಂಡದ ನಾಯಕರಾಗಿದ್ದಾರೆ. ಇದರೊಂದಿಗೆ, ಧೋನಿ ಐಪಿಎಲ್‌ನಲ್ಲಿ ಇದುವರೆಗೆ ಸಂಭವಿಸದ ಕ್ಷಣಕ್ಕೆ ಸಾಕ್ಷಿಯಾಗಿದ್ದಾರೆ. ಈ ಮೂಲಕ ಧೋನಿ ಐಪಿಎಲ್ ಇತಿಹಾಸದಲ್ಲಿ ನಾಯಕತ್ವ ಪಡೆದ ಮೊದಲ ಅನ್‌ಕ್ಯಾಪ್ಡ್ ಆಟಗಾರ ಎಂಬ ದಾಖಲೆ ಬರೆದಿದ್ದಾರೆ.



ಹೌದು... ಐಪಿಎಲ್ ಇತಿಹಾಸದಲ್ಲಿ ತಂಡವೊಂದರ ನಾಯಕತ್ವ ವಹಿಸಿಕೊಂಡ ಮೊದಲ ಅನ್‌ಕ್ಯಾಪ್ಡ್ ಆಟಗಾರ ಎಂಎಸ್ ಧೋನಿ. ವಾಸ್ತವವಾಗಿ 5 ವರ್ಷಗಳ ಹಿಂದೆ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾದ ಅಥವಾ 5 ವರ್ಷಗಳ ಕಾಲ ಯಾವುದೇ ಅಂತರರಾಷ್ಟ್ರೀಯ ಪಂದ್ಯದ ಆಡುವ ಹನ್ನೊಂದರ ಬಳಗದ ಭಾಗವಾಗಿರದ ಆಟಗಾರರನ್ನು ಅನ್‌ಕ್ಯಾಪ್ಡ್ ಆಟಗಾರರೆಂದು ಪರಿಗಣಿಸಲಾಗುತ್ತದೆ. ಟೀಮ್ ಇಂಡಿಯಾ ಪರ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಸುಮಾರು 500 ಪಂದ್ಯಗಳನ್ನು ಆಡಿರುವ ಧೋನಿ, ಆಗಸ್ಟ್ 2020 ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾದರು. ಆದರೆ ಜುಲೈ 2019 ರಿಂದ ಅವರು ಯಾವುದೇ ಅಂತರರಾಷ್ಟ್ರೀಯ ಪಂದ್ಯವನ್ನು ಆಡಿರಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ, ಸಿಎಸ್‌ಕೆ ಅವರನ್ನು ಅನ್‌ಕ್ಯಾಪ್ಡ್ ಪ್ಲೇಯರ್ ಆಗಿ ತಂಡದಲ್ಲಿ ಉಳಿಸಿಕೊಂಡಿತ್ತು.

ಇದರೊಂದಿಗೆ, ಧೋನಿಗೆ ಐಪಿಎಲ್‌ನ ಅತ್ಯಂತ ಹಿರಿಯ ನಾಯಕ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ಧೋನಿ ಪ್ರಸ್ತುತ 43 ವರ್ಷ 278 ದಿನಗಳ ವಯಸ್ಸಿನವರಾಗಿದ್ದು, ತಮ್ಮದೇ ಆದ ಹಳೆಯ ದಾಖಲೆಯನ್ನು ಮುರಿದಿದ್ದಾರೆ. ಇದಕ್ಕೂ ಮೊದಲು, 2023 ರ ಐಪಿಎಲ್ ಫೈನಲ್‌ನಲ್ಲಿ ಅವರು ತಂಡದ ನಾಯಕತ್ವ ವಹಿಸಿದಾಗ, ಅವರ ವಯಸ್ಸು 41 ವರ್ಷ ಮತ್ತು 325 ದಿನಗಳಾಗಿದ್ದವು.

ಧೋನಿ ನಾಯಕತ್ವದಲ್ಲೂ ಸಿಎಸ್‌ಕೆಗೆ ಹೀನಾಯ ಸೋಲು!

# ಜಸ್ಟ್ 10.1 ಓವರ್‌ಗೆ ಮ್ಯಾಚ್ ಮುಗಿಸಿಕೊಂಡು ಹೋದ ಕೆಕೆಆರ್





ಕೆಕೆಆರ್ ಬೌಲರ್‌ಗಳ ಬಿಗಿ ದಾಳಿಗೆ ತತ್ತರಿಸಿದ ಸಿಎಸ್‌ಕೆ ಕೇವಲ 103 ರನ್‌ಗಳಿಗೆ ಕುಸಿಯಿತು. 104 ರನ್‌ಗಳ ಸುಲಭ ಗುರಿ ಬೆನ್ನಟ್ಟಿದ ಕೆಕೆಆರ್ ಕೇವಲ 10.1 ಓವರ್‌ನಲ್ಲಿ 107 ರನ್‌ಗಳಿಸಿ ಜಯ ಭೇರಿ ಬಾರಿಸಿತು.

ಐಪಿಎಲ್ 2025ನೇ ಸಾಲಿನ 25ನೇ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ಕೊಲ್ಕತ್ತಾ ನೈಟ್ ರೈಡರ್ಸ್ ತಂಡಗಳು ಚೆನ್ನೈನ ಚೆಪಾಕ್ ಮೈದಾನದಲ್ಲಿ ಮುಖಾ ಮುಖಿಯಾಗಿದ್ದವು. ಈ ಪಂದ್ಯದಲ್ಲಿ ಟಾಸ್ ಸೋತ ಸಿಎಸ್‌ಕೆ ಮೊದಲು ಬ್ಯಾಟಿಂಗ್ ಮಾಡುವ ಅವಕಾಶ ಪಡೆದುಕೊಂಡಿತು. ಕೆಕೆಆರ್ ಬೌಲರ್‌ಗಳ ಬಿಗಿ ದಾಳಿಗೆ ತತ್ತರಿಸಿದ ಸಿಎಸ್‌ಕೆ ಕೇವಲ 103 ರನ್‌ಗಳಿಗೆ ಕುಸಿಯಿತು. 104 ರನ್‌ಗಳ ಸುಲಭ ಗುರಿ ಬೆನ್ನಟ್ಟಿದ ಕೆಕೆಆರ್ ಕೇವಲ 10.1 ಓವರ್‌ನಲ್ಲಿ 107 ರನ್‌ಗಳಿಸುವ ಮೂಲಕ ಅಂಕಪಟ್ಟಿಯಲ್ಲಿ 3ನೇ ಸ್ಥಾನಕ್ಕೆ ಏರಿಕೆ ಕಂಡಿತು.

**ಲಕ್ ಕಳೆದುಕೊಂಡ ಮಹಿ**

**ಕೆಕೆಆರ್ ಬೌಲರ್ಸ್ ಬಿಗಿ ದಾಳಿ**

ಟಾಪ್ ಆರ್ಡರ್ ಬ್ಯಾಟರ್‌ಗಳು ಒಬ್ಬರ ಹೊಂದೆ ಒಬ್ಬರಂತೆ ಪೆವಿಲಿಯನ್ ಪರೇಡ್ ನಡಸಿದರು. ಕೆಕೆಆರ್ ಬೌಲರ್‌ಗಳಾದ ಸುನಿಲ್ ನರೈನ್ 3, ವರುಣ್ ಚಕ್ರರ್ತಿ ಹಾಗೂ ಹರ್ಷಿತ್ ರಾಣಾ ತಲಾ 2, ವೈಭವ್ ಅರೋರ ಹಾಗೂ ಮೋಯಿನ್ ಅಲಿ ತಲಾ ಒಂದೊಂದು ವಿಕೆಟ್ ಪಡೆದುಕೊಂಡರು.

ಸಿಎಸ್‌ಕೆ ಪರ 31 ರನ್ ಗಳಿಸಿದ ಶಿವಂ ದುಬೆ ಟಾಪ್ ರನ್ ಸ್ಕೋರರ್ ಎನಿಸಿಕೊಂಡರು.



# ಒಂದೇ ಮೈದಾನದಲ್ಲಿ ಅತಿ ಹೆಚ್ಚು ಸೋಲು

**ಬೇಡದ ದಾಖಲೆ ಬರೆದ ಆರ್‌ಸಿಬಿ**

ಆರ್‌ಸಿಬಿ ತನ್ನ ಖಾತೆಗೆ ಮುಜುಗರದ ದಾಖಲೆಯೊಂದನ್ನು ಹಾಕಿಕೊಂಡಿದ್ದು, ಒಂದೇ ಮೈದಾನದಲ್ಲಿ ಅತಿ ಹೆಚ್ಚು ಪಂದ್ಯಗಳನ್ನು ಸೋತ ತಂಡ ಎಂಬ ಕುಖ್ಯಾತಿ ಆರ್‌ಸಿಬಿ ಪಾಲಾಗಿದೆ. ಒಂದೇ ಮೈದಾನದಲ್ಲಿ ಅತಿ ಹೆಚ್ಚು ಸೋಲು.

ಈ ಆವೃತ್ತಿಯಲ್ಲಿ ಆರ್‌ಸಿಬಿ ತವರಿನಲ್ಲಿ ಅನುಭವಿಸಿದ ಸತತ ಎರಡನೇ ಸೋಲು ಇದು. ಇದಕ್ಕೂ ಮೊದಲು ಗುಜರಾತ್ ಟೈಟಾನ್ಸ್ ಕೂಡ ಏಕಪಕ್ಷೀಯ ರೀತಿಯಲ್ಲಿ ಸೋಲಿಸಿತ್ತು. ಇದರೊಂದಿಗೆ ಬೆಂಗಳೂರು ತಂಡ ತವರಿನಲ್ಲಿ 45ನೇ ಬಾರಿ ಸೋಲನ್ನು ಅನುಭವಿಸಿದೆ. ಇದು ಐಪಿಎಲ್ ಇತಿಹಾಸದಲ್ಲಿ ಒಂದೇ ಕ್ರೀಡಾಂಗಣದಲ್ಲಿ ಯಾವುದೇ ತಂಡ ಅನುಭವಿಸಿದ ಅತಿ ಹೆಚ್ಚು ಸೋಲುಗಳಾಗಿದೆ. ಕುತೂಹಲಕಾರಿ ವಿಷಯವೆಂದರೆ ಈ ಸೋಲಿಗೆ ಮುನ್ನ, ದೆಹಲಿ ಮತ್ತು ಬೆಂಗಳೂರು ಜಂಟಿಯಾಗಿ ಅಗ್ರಸ್ಥಾನದಲ್ಲಿದ್ದವು. ಉಭಯ ತಂಡಗಳು ಒಂದೇ ಮೈದಾನದಲ್ಲಿ 44 ಸೋಲುಗಳನ್ನು ಕಂಡಿದ್ದವು. ಆದರೆ ಈಗ ದೆಹಲಿ ಬೆಂಗಳೂರನ್ನು ಸೋಲಿಸುವ ಮೂಲಕ ಈ ದಾಖಲೆಯಿಂದ ತನ್ನನ್ನು ತಾನು ರಕ್ಷಿಸಿಕೊಂಡಿದೆ.

# ಆರ್‌ಸಿಬಿಗೆ ಕೊಹ್ಲಿಯ ಅನಗತ್ಯ ಆತುರವೇ ಅಪಾಯಕಾರಿ

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಐಪಿಎಲ್ 2025ರಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಭಾರೀ ಸೋಲನು ಅನುಭವಿಸಿತು. ಉತ್ತಮ ಆರಂಭದ ನಂತರವೂ, ವಿರಾಟ್ ಕೊಹ್ಲಿಯ ತಪ್ಪು ನಿರ್ಧಾರದಿಂದಾಗಿ ಫಿಲ್ ಸಾಲ್ಟ್ ರನ್ ಔಟ್ ಆದರು. ಇದು ಆರ್‌ಸಿಬಿಯ ರನ್ ದರವನ್ನು ಕುಸಿಯುವಂತೆ ಮಾಡಿದಲ್ಲದೆ ತಂಡದ ಸೋಲಿಗೆ ಕಾರಣವಾಯಿತು.

ಐಪಿಎಲ್ 2025 ರ 24ನೇ ಪಂದ್ಯ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಡೆಲ್ಲಿ ಕ್ಯಾಪಿಟಲ್ಸ್ (ನಡುವೆ ಬೆಂಗಳೂರಿನ ಎಂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಿತು. ಆರ್‌ಸಿಬಿಗೆ ಇದು ತವರು ಮೈದಾನವಾಗಿದ್ದ ಕಾರಣ ಈ ಪಂದ್ಯದ ಗೆಲುವಿನ ಫೇವರೇಟ್ ಆರ್‌ಸಿಬಿ ತಂಡವೇ ಆಗಿತ್ತು. ಆದರೆ ಕೊನೆಯಲ್ಲಿ ಪಂದ್ಯದ ಫಲಿತಾಂಶ ಹೊರಬಿದ್ದಾಗ ರಜತ್ ಪಡೆಗೆ ಹೀನಾಯ ಸೋಲು ಎದುರಾಯಿತು. ಈ ಸೋಲಿಗೆ ಆರ್‌ಸಿಬಿಯ ಬ್ಯಾಟಿಂಗ್ ವೈಫಲ್ಯವೇ ಪ್ರಮುಖ ಕಾರಣವಾದರೂ, ಉತ್ತಮ ಆರಂಭದ ಹೊರತಾಗಿಯೂ ಕೊಹ್ಲಿ ಮಾಡಿದ ಅದೊಂದು ತಪ್ಪು ತಂಡದ ಸೋಲಿಗೆ ಇನ್ನೊಂದು ಪ್ರಮುಖ ಕಾರಣ ಎಂದರೆ ತಪ್ಪಾಗಲಾರದು.

**ಸಾಲ್ಟ್ ರನೌಟ್ ದುಬಾರಿಯಾಯ್ತು:** ಆ ಪ್ರಕಾರ ನಿನ್ನೆಯ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿಗೆ ವಿರಾಟ್ ಕೊಹ್ಲಿ ಹಾಗೂ ಫಿಲ್ ಸಾಲ್ಟ್ ಉತ್ತಮ ಆರಂಭವನ್ನೇ ಒದಗಿಸಿದರು. ಈ ಇಬ್ಬರು ಮೊದಲು 3 ಓವರ್‌ಗಳಲ್ಲಿ ಬರೋಬ್ಬರಿ 53 ರನ್ ಕಲೆಹಾಕಿದರು. ಈ ಇಬ್ಬರ ಆಟ ನೋಡಿದವರು, ಆರ್‌ಸಿಬಿ 200 ಕ್ಕಿಂತ ಹೆಚ್ಚು ರನ್ ಕಲೆಹಾಕುವುದು ಖಚಿತ ಎಂತಲೇ ಮಾತನಾಡಿಕೊಳ್ಳುತ್ತಿದ್ದರು. ಆದರೆ 4ನೇ ಓವರ್‌ನಲ್ಲಿ ಎದುರಾದ ಗಂಡಾಂತರ ಆರ್‌ಸಿಬಿಯನ್ನು ಸೋಲಿನ ದವಡೆಗೆ ಥಳ್ಳಿತು ಎಂದರೇ ತಪ್ಪಾಗಲಾರದು.

**ಕೊಹ್ಲಿ ಆತುರಕ್ಕೆ ಇನ್ನೆಷ್ಟು ಬಲಿ:** ಆರ್‌ಸಿಬಿ ಇನ್ನಿಂಗ್ಸ್‌ನ 4ನೇ ಓವರ್ ಅನ್ನು ಅಕ್ಷರ್ ಪಟೇಲ್ ಬೌಲ್ ಮಾಡಿದರು. ಈ ಓವರ್‌ನ ಐದನೇ ಎಸೆತವನ್ನು ಸಾಲ್ಟ್ ಎಕ್ಸ್‌ಟ್ರಾ ಕವರ್‌ನತ್ತ ಆಡಿದರು. ಅಲ್ಲಿ ಫಿಲ್ಡರ್ ಇದ್ದರೂ ಸಹ ನಾನ್ ಸ್ಟ್ರೈಕ್‌ನಲ್ಲಿದ್ದ ವಿರಾಟ್ ಕೊಹ್ಲಿ ರನ್‌ಗಾಗಿ ಓಡಲು ಆರಂಭಿಸಿದರು. ಹೀಗಾಗಿ ಸಾಲ್ಟ್ ಕೂಡ ನಾನ್ ಸ್ಟ್ರೈಕ್ ತುದಿಯತ್ತ ಓಡಲಾರಂಭಿಸಿದರು. ಈ ವೇಳೆ ಫಿಲ್ಡರ್ ಅಲ್ಲೇ ಇರುವುದನ್ನು ಗಮನಿಸಿದ ಕೊಹ್ಲಿ ಅರ್ಧಕ್ಕೆ ಓಡಿದ ಬಳಿಕ ರನ್‌ಗೆ ನಿರಾಕರಿಸಿದರು. ಹೀಗಾಗಿ ಸಾಲ್ಟ್ ಮತ್ತೆ ಕ್ರೀಸ್‌ಗೆ ಓಡಲಾರಂಭಿಸಿದರು. ಆದರೆ ಅಲ್ಲೆ ನಿಂತಿದ್ದ ವಿಪ್ರಾಜ್ ನಿಗಮ್ ಚೆಂಡನ್ನು ಹಿಡಿದು ವಿಕೆಟ್ ಕೀಪರ್‌ನತ್ತ ಎಸೆದರು. ಕೂಡಲೇ ರಾಹುಲ್ ಸ್ಟಂಪ್ ಔಟ್ ಮಾಡಿದರು.

**34 ರನೌಟ್‌ಗಳಲ್ಲಿ ಕೊಹ್ಲಿ ಅಪರಾಧಿ:** ಸಾಲ್ಟ್ ಕ್ರೀಸ್‌ನಲ್ಲಿ ಇರುವವರೆಗೂ ಆರ್‌ಸಿಬಿ ಶರವೇಗದಲ್ಲಿ ರನ್ ಕಲೆಹಾಕುತ್ತಿತ್ತು. ಆದರೆ ಸಾಲ್ಟ್ ವಿಕೆಟ್ ಪತನದ ಬಳಿಕ ತಂಡದ ರನ್ ರೇಟ್ ಕುಸಿತ ಕಂಡಿದಲ್ಲದೆ, ಬ್ಯಾಟರ್‌ಗಳ ಪೆವಿಲಿಯನ್ ಪರೇಡ್ ಶುರುವಾಯಿತು. ಹೀಗಾಗಿ ತಂಡ ಅಲ್ಪ ರನ್ ಕಲೆಹಾಕಲಷ್ಟೇ ಶಕ್ತವಾಯಿತು. ವಾಸ್ತವವಾಗಿ ಇಲ್ಲದ ರನ್ ಕದಿಯಲು ಹೋಗಿ ಕೊಹ್ಲಿ ತನ್ನ ಸಹ ಆಟಗಾರನನ್ನು ರನೌಟ್ ಮಾಡಿಸಿದ್ದು ಇದೇ ಮೊದಲಲ್ಲ. ಅಥವಾ ಕೊಹ್ಲಿಯೇ ರನೌಟ್ ಆಗಿರುವುದು ಕೂಡ ಇದೇ ಮೊದಲಲ್ಲ. ಇದಕ್ಕೂ ಮೊದಲು ಐಪಿಎಲ್‌ನಲ್ಲಿ ಬರೋಬ್ಬರಿ 32 ಬಾರಿ ಈ ತಪ್ಪನ್ನು ಪುನರಾವರ್ತಿಸಿದ್ದಾರೆ.



**ಬರೋಬ್ಬರಿ 32 ರನ್ ಔಟ್**

# ಸುಶ್ಮಿತಾ ಸೇನ್ ಸೀರೆ ಆನ್‌ಲೈನ್‌ನಲ್ಲಿ ಮಾರಾಟ




ಬಾಲಿವುಡ್ ನಟಿ ಸುಶ್ಮಿತಾ ಸೇನ್ ಮಾಜಿ ಅತ್ತಿಗೆ ಚಾರು ಅಸೋಪಗೆ ಆರ್ಥಿಕ ಸಂಕಷ್ಟ ಎದುರಾದ ಹಿನ್ನೆಲೆ ಮುಂಬೈ ತೊರೆದಿದ್ದಾರೆ. ಇದರ ನಡುವೆ ಆನ್‌ಲೈನ್‌ನಲ್ಲಿ ಸೀರೆ ಮಾರಾಟ ಮಾಡ್ತಿರೋ ನಟಿ ಚಾರು ವಿಡಿಯೋ ಭಾರೀ ವೈರಲ್ ಆಗಿದ್ದು, ಈ ಕುರಿತು ಪ್ರತಿಕ್ರಿಯೆ ನೀಡಿದ್ದಾರೆ. ತಾವು ಹೊಸ ಬ್ಯುಸಿನೆಸ್ ಶುರು ಮಾಡಿರುವ ಬಗ್ಗೆ ಅವರು ಮಾತನಾಡಿದ್ದಾರೆ. ಸಂದರ್ಶನವೊಂದರಲ್ಲಿ ನಟಿ ಚಾರು ಅಸೋಪ ಮಾತನಾಡಿ, ಆನ್‌ಲೈನ್‌ನಲ್ಲಿ ಬಟ್ಟೆ ಮಾರಾಟ ಮಾಡ್ತಿರೋದು ನಿಜ. ಮುಂಬೈ ಬಿಟ್ಟು ನನ್ನ ಪೋಷಕರೊಂದಿಗೆ ನಾನು ಮತ್ತು ಮಗಳು ರಾಜಸ್ಥಾನದ ಬಿಕಾನೇರ್‌ಗೆ ವಾಸಿಸುತ್ತಿದ್ದೇನೆ ಎಂದಿದ್ದಾರೆ. ಮುಂಬೈನಲ್ಲಿ ವಾಸಿಸೋದು ಸುಲಭವಲ್ಲ. ಮನೆಯ ಬಾಡಿಗೆ ಮತ್ತು ಇತರೆ ಖರ್ಚು ಸೇರಿ 1 ಲಕ್ಷದಿಂದ 1.5 ಲಕ್ಷ ರೂ. ಆಗುತ್ತಿತ್ತು. ಅದನ್ನು ನಿಭಾಯಿಸುವುದು ಅಷ್ಟು ಸುಲಭವಾಗಿರಲಿಲ್ಲ. ಮಗಳನ್ನು ಒಂಟಿಯಾಗಿ ದಾದಿ ಜೊತೆ ಬಿಟ್ಟು ಹೋಗಲು ಮನಸ್ಸಿರಲಿಲ್ಲ. ಶೂಟಿಂಗ್ ಇದ್ದ ಸಂದರ್ಭದಲ್ಲಿ ಕಷ್ಟವಾಗುತ್ತಿತ್ತು. ಹಾಗಾಗಿ ನನ್ನೂರಿಗೆ ಬಂದು ಸ್ವಂತ ಬ್ಯುಸಿನೆಸ್ ಆರಂಭಿಸಿದೆ. ಇದು ಆತುರದಲ್ಲಿ ಕೈಗೊಂಡ ನಿರ್ಧಾರವಲ್ಲ ಎಂದಿದ್ದಾರೆ. ಅವರ ಆರ್ಥಿಕ ಸ್ಥಿತಿಯನ್ನು ಟ್ರೋಲ್ ಮಾಡಿದ್ದರ ಕುರಿತು ನಟಿ ಮಾತನಾಡಿ, ನೀವು ಹೊಸದನ್ನು ಶುರು ಮಾಡಿದಾಗ ಎಲ್ಲಾರೂ ಕಷ್ಟಪಡುತ್ತಾರೆ. ನನ್ನ ವಿಚಾರದಲ್ಲೂ ಅದೇ ಆಗಿದೆ. ಆರ್ಡರ್ ತೆಗೆದುಕೊಳ್ಳುವುದರಿಂದ ಹಿಡಿದು ಈಗ ಎಲ್ಲಾವನ್ನು ನಿಭಾಯಿಸುತ್ತಿದ್ದೇನೆ. ನನ್ನ ಮಗುವಿನ ಕಡೆ ಗಮನ ಹರಿಸಲು ಈ ನಿರ್ಧಾರ ಕೈಗೊಂಡಿದ್ದೇನೆ.



# ಅಯ್ಯನ ಮನೆ ರಮೇಶ್ ಇಂದಿರಾ ಆಕ್ಷನ್ ಕಟ್

ಸದಾ ಹೊಸ ಬಗೆಯ ಪಾತ್ರಗಳ ಮೂಲಕ ಗಮನ ಸೆಳೆಯುವ 'ದಿಯಾ' ಖ್ಯಾತಿಯ ಖುಷಿ ರವಿ ಕನ್ನಡ ಹಾಗೂ ತೆಲುಗಿನಲ್ಲಿ ಬ್ಯುಸಿಯಾಗಿದ್ದಾರೆ. ಇದರ ನಡುವೆ ಮಿನಿ ವೆಬ್ ಸಿರೀಸ್ ಕಥೆ ಹೇಳಲು ರೆಡಿಯಾಗಿದ್ದಾರೆ. ನಟಿ ಖುಷಿಗೆ 'ಸಪ್ತಸಾಗರದಾಚೆ ಎಲ್ಲೋ' ಖ್ಯಾತಿಯ ರಮೇಶ್ ಇಂದಿರಾ ಆಕ್ಷನ್ ಕಟ್ ಹೇಳಿದ್ದಾರೆ. ಲವ್ ಯೂ ಮನು ಎನ್ನುತ್ತ ಭಯ ಹುಟ್ಟಿಸಿದ್ದ ರಮೇಶ್ ಮತ್ತೆ ನಿರ್ದೇಶನದ ಕ್ಯಾಪ್ ಧರಿಸಿದ್ದಾರೆ. ವೆಬ್ ಸೀರೀಸ್‌ಗೆ 'ಅಯ್ಯನ ಮನೆ' ಎಂದು ಕ್ಯಾಚಿ ಟೈಟಲ್ ಇಡಲಾಗಿದೆ. ಪ್ರತಿ ಮನೆಯೂ ಸ್ವರ್ಗವಾಗಿರುವುದಿಲ್ಲ. ಅಲ್ಲಿ ಎಷ್ಟೋ ಮುಚ್ಚಿಟ್ಟ ವಿಷಯಗಳು ಇರುತ್ತವೆ ಅನ್ನೋದನ್ನು ಈ ಮಿನಿ ಸೀರೀಸ್ ಮೂಲಕ ರಮೇಶ್ ಇಂದಿರಾ ಹೇಳಲು ಹೊರಟಿದ್ದಾರೆ. ರಮೇಶ್ ಇಂದಿರಾ ನಿರ್ದೇಶನದಲ್ಲಿ ಮೂಡಿ ಬರ್ತಿರುವ 'ಅಯ್ಯನ ಮನೆ' ವೆಬ್ ಸೀರೀಸ್‌ಗೆ ಶ್ರುತಿ ನಾಯ್ಡು ಪ್ರೊಡಕ್ಷನ್ ನಿರ್ಮಾಣ ಮಾಡಿದೆ. ಏಳು ಎಪಿಸೋಡ್ ಹೊಂದಿರುವ ವೆಬ್ ಸೀರೀಸ್‌ನಲ್ಲಿ ಖುಷಿ ರವಿ, ಅಕ್ಷಯ್ ನಾಯಕ್, ಮಾನಸಿ ಸುಧೀರ್ ಅಭಿನಯಿಸಿದ್ದಾರೆ. ಇದು ಭಯ, ನಂಬಿಕೆ ಮತ್ತು ವಿಧಿ ಘರ್ಷಿಸುವ ಕಥೆಯನ್ನೊಳಗೊಂಡಿದ್ದು, ಇದೇ ತಿಂಗಳ 25ರಿಂದ ಜೀ5 ಒಟಿಟಿಯಲ್ಲಿ ರಿಲೀಸ್ ಆಗಲಿದೆ. ಚಿಕ್ಕಮಗಳೂರಿನ ಅಯ್ಯನ ಮನೆ ಕುಟುಂಬದಲ್ಲಿ ಅಡಗಿರುವ ಸತ್ಯಗಳ ಸುತ್ತಕಥೆ ಸಾಗುತ್ತದೆ. ಇದೊಂದು ಮಿಸ್ಟ್ರಿ ಕಥೆಯೊಳಗೊಂಡಿದ್ದು, ಪ್ರೇಕ್ಷಕರನ್ನು ಪ್ರತಿ ಕ್ಷಣ ಎಕ್ಸೈಟ್ ಆಗುವಂತೆ ಮಾಡುತ್ತದೆ. ಈಗಾಗಲೇ ಹಲವು ಹಿಟ್ ಚಿತ್ರ ಕೊಟ್ಟುರುವ ರಮೇಶ್ ಇಂದಿರಾ ಹೊಸ ಬಗೆಯ ಕಥೆಯ ಮೂಲಕ ಒಟಿಟಿ ಪ್ರೇಕ್ಷಕರನ್ನು ತಲುಪಲಿದ್ದಾರೆ. 'ಅಯ್ಯನ ಮನೆ' ವೆಬ್ ಸೀರೀಸ್ ಬಗ್ಗೆ ನಿರ್ದೇಶಕರಾದ ರಮೇಶ್ ಇಂದಿರಾ ಮಾತನಾಡಿ, ಅಯ್ಯನ ಮನೆ ರೋಚಕತೆ ಜೊತೆಗೆ ಭಯ, ನಂಬಿಕೆ ಮತ್ತು ಫ್ಯಾಮಿಲಿ ಕಥೆಯೊನ್ನೊಳಗೊಂಡಿದೆ. ಈ ವೆಬ್ ಸರಣಿ ಕರ್ನಾಟಕ ಸಂಸ್ಕೃತಿ, ಸಂಪ್ರದಾಯದವನ್ನು ಅನಾವರಣ ಮಾಡುತ್ತದೆ. ಅಯ್ಯನ ಮನೆ ವೆಬ್ ಸರಣಿ ಪ್ರೇಕ್ಷಕರನ್ನು ಸೀಟಿನ ತುದಿಗೆ ಕುರುವಂತೆ ಮಾಡುತ್ತದೆ ಎಂದರು. ಜಾಜಿ ಪಾತ್ರ ಮಾಡಿರುವ ಖುಷಿ ರವಿ ಮಾತನಾಡಿ, ಮುಗ್ದತೆ, ಗಂಡನ ಪ್ರೀತಿಯ ಹೆಂಡತಿ, ಸಂಪ್ರದಾಯಕ್ಕೆ ನಡೆದುಕೊಳ್ಳುವ ಹೆಣ್ಣು ಮಗಳಾಗಿ ನಟಿಸಿದ್ದೇನೆ. ಇದೊಂದು ಎಮೋಷನ್ ಪಯಣ. ಜೊತೆಗೆ ಅನೇಕ ರಹಸ್ಯಗಳ ಕಥಾಹಂದರ. ನಾನು ವೆಬ್ ಸರಣಿ ನೋಡಲು ಕಾತರಳಾಗಿದ್ದೇನೆ ಎಂದು ತಿಳಿಸಿದ್ದಾರೆ.





# ಸಿನಿಮಾ ಸೋತ್ರೂ ಶ್ರೀವಲ್ಲಿಗೆ ಬೇಡಿಕೆ

**ಶಾಹಿದ್ ಕಪೂರ್‌ಗೆ ರಶ್ಮಿಕಾ ಜೋಡಿ**


ಕೊಡಗಿನ ಬೆಡಗಿ ರಶ್ಮಿಕಾ ಮಂದಣ್ಣ ಬಾಲಿವುಡ್‌ನಲ್ಲೇ ಸೆಟಲ್ ಆಗೋ ಲಕ್ಷಣ ಕಾಣ್ತಿದೆ. 'ಸಿಕಂದರ್' ಸಿನಿಮಾ ಮಕಾಡೆ ಮಲಗಿದ್ರೂ ಕೂಡ ಬಾಲಿವುಡ್‌ನ ಮತ್ತೊಂದು ಸಿನಿಮಾಗೆ ಅವರು ನಾಯಕಿಯಾಗಿದ್ದಾರೆ. 2012ರಲ್ಲಿ ತೆರೆಕಂಡ 'ಕಾಕ್‌ಟೈಲ್' ಚಿತ್ರದ ಸೀಕ್ವೆಲ್‌ನಲ್ಲಿ ಶಾಹಿದ್ ಕಪೂರ್‌ಗೆ ಹೀರೋಯಿನ್ ಆಗಿದ್ದಾರೆ. ಸಿಕಂದರ್ ಸಿನಿಮಾ ಫ್ಲಾಪ್ ಆದ್ರೂ ರಶ್ಮಿಕಾಗೆ ಇರುವ ಬೇಡಿಕೆ ಕಮ್ಮಿಯಾಗಿಲ್ಲ. ಟ್ರಯಾಂಗಲ್ ಲವ್ ಸ್ಟೋರಿ 'ಕಾಕ್‌ಟೈಲ್ 2'ಗೆ ತಯಾರಿ ನಡೆಯುತ್ತಿದೆ. ಇದರಲ್ಲಿ ಶಾಹಿದ್‌ಗೆ ರಶ್ಮಿಕಾ ಮಂದಣ್ಣ ಮತ್ತು ಕೃತಿ ಸನೋನ್ ಇಬ್ಬರು ನಾಯಕಿಯರು ಜೊತೆಯಾಗಲಿದ್ದಾರೆ. ಇದರಲ್ಲಿ ರಶ್ಮಿಕಾ ಮಂದಣ್ಣಗೆ ಪವರ್‌ಫುಲ್ ರೋಲ್ ಸಿಕ್ಕಿದೆ. ದಿನೇಶ್ ವಿಜ್ಞಾನ್ ನಿರ್ಮಾಣದ 'ಕಾಕ್‌ಟೈಲ್ 2'ಗೆ ಲವ್ ರಂಜನ್ ಕಥೆ ಬರೆದಿದ್ದಾರೆ. ಹೋಮಿ ಅಡಜಾನಿಯಾ ನಿರ್ದೇಶನ ಮಾಡಲಿದ್ದಾರೆ. ಇದೇ ಆಗಸ್ಟ್‌ನಿಂದ ಸಿನಿಮಾ ಶೂಟಿಂಗ್ ಶುರುವಾಗಲಿದೆ. ಮುಂದಿನ ವರ್ಷ ಅಂತ್ಯದೊಳಗೆ ರಿಲೀಸ್ ಮಾಡುವ ಪ್ಲ್ಯಾನ್ ಚಿತ್ರತಂಡಕ್ಕಿದೆ. ಸದ್ಯ ರಶ್ಮಿಕಾ ಒಪ್ಪಿಕೊಂಡಿರೋ ಸಿನಿಮಾ ಸುದ್ದಿ ಕೇಳಿ ಫ್ಯಾನ್ಸ್ ಥ್ರಿಲ್ ಆಗಿದ್ದಾರೆ.

# ಹೃತಿಕ್ ರೋಷನ್‌ಗೆ ಜೊತೆಯಾದ ಪ್ರಿಯಾಂಕಾ



ಬಾಲಿವುಡ್ ನಟ ಹೃತಿಕ್ ರೋಷನ್ 'ಕ್ರಿಶ್ 4' ಸಿನಿಮಾ ಮೂಲಕ ಮೊದಲ ಬಾರಿಗೆ ನಿರ್ದೇಶನಕ್ಕಿಳಿದಿದ್ದಾರೆ.

ಈ ಚಿತ್ರಕ್ಕಾಗಿ ಭರ್ಜರಿ ತಯಾರಿ ಕೂಡ ನಡೆಯುತ್ತಿದೆ. ಇದರ ನಡುವೆ ಚಿತ್ರದ ಬಗ್ಗೆ ಕ್ರೇಜಿ ಅಪ್‌ಡೇಟ್‌ವೊಂದು ಸಿಕ್ಕಿದೆ. ಹೃತಿಕ್ ರೋಷನ್‌ಗೆ ನಾಯಕಿಯಾಗಿ ದೇಸಿ ಗರ್ಲ್ ಪ್ರಿಯಾಂಕಾ ಚೋಪ್ರಾ ಕಾಣಿಸಿಕೊಳ್ಳಲಿದ್ದಾರೆ. ಹಾಲಿವುಡ್ ಸಿನಿಮಾಗಳಲ್ಲಿ ಬ್ಯುಸಿಯಿದ್ದ ನಟಿ ಬಾಲಿವುಡ್ ಸಿನಿಮಾದಲ್ಲಿ ಯಾವಾಗ ನಟಿಸ್ತಾರೆ ಎಂಬುದನ್ನು ಎದುರು ನೋಡುತ್ತಿದ್ದ ಫ್ಯಾನ್ಸ್‌ಗೆ ಸಿಹಿಸುದ್ದಿ ಸಿಕ್ಕಿದೆ. 'ಕ್ರಿಶ್ 4'ನಲ್ಲಿ ಮುಖ್ಯ ಪಾತ್ರದಲ್ಲಿ ಹೃತಿಕ್ ಜೊತೆ ಪ್ರಿಯಾಂಕಾ ಚೋಪ್ರಾ, ಕಾಣಿಸಿಕೊಳ್ಳಲಿದ್ದಾರೆ. ಸೂಪರ್ ಹೀರೋ ಕಾನ್ಸೆಪ್ಟ್‌ನ ಈ ಸಿನಿಮಾ ಈಗಾಗಲೇ 3 ಸಿರೀಸ್‌ನಲ್ಲಿ ಸಕ್ಸಸ್ ಕಂಡಿದೆ. 'ಕ್ರಿಶ್ 4' ಸಿನಿಮಾ ಹೇಗಿರಲಿದೆ ಅನ್ನೋ ಕ್ಯೂರಿಯಾಸಿಟಿ ಫ್ಯಾನ್ಸ್‌ಗೆ ಜಾಸ್ತಿಯಾಗಿದೆ. ಈ ಹಿಂದೆ 'ಕ್ರಿಶ್' ಹಾಗೂ 'ಕ್ರಿಶ್ 3' ಸರಣಿಯಲ್ಲಿ ಹೃತಿಕ್‌ಗೆ ಜೊತೆಯಾಗಿ ಪ್ರಿಯಾಂಕಾ ನಟಿಸಿದ್ದರು.



ಈಗ ಹಲವು ವರ್ಷಗಳ ಬಳಿಕ ಮತ್ತೆ 'ಕ್ರಿಶ್ 4'ಗೆ ನಟಿ ಸಾಥ್ ನೀಡುತ್ತಿದ್ದಾರೆ.

ಸದ್ಯ ರಾಜಮೌಳಿ ನಿರ್ದೇಶನದ ಹಾಗೂ ಮಹೇಶ್ ಬಾಬು ನಟನೆಯ ಹೊಸ ಸಿನಿಮಾದಲ್ಲಿ ಪ್ರಿಯಾಂಕಾ ಚೋಪ್ರಾ, ನಾಯಕಿಯಾಗಿ ನಟಿಸುತ್ತಿದ್ದಾರೆ. ಈ ಸಿನಿಮಾಗಾಗಿ ಅವರು 30 ಕೋಟಿ ರೂ. ಸಂಭಾವನೆ ಚಾರ್ಜ್ ಮಾಡಿದ್ದಾರೆ.

# ಮುದ್ದು ರಾಕ್ಷಸಿ ಮುಗಿಸಿದ ನಿವೇದಿತಾ



ಮಾಜಿ ಪತಿ ಚಂದನ್ ಶೆಟ್ಟಿ ಜೊತೆಗೆ ನಟಿಸಿರುವ 'ಮುದ್ದು ರಾಕ್ಷಸಿ' ಚಿತ್ರದ ಶೂಟಿಂಗ್ ಅನ್ನು ನಿವೇದಿತಾ ಗೌಡ ಮುಗಿಸಿ ಕೊಟ್ಟಿದ್ದಾರೆ. 'ಮುದ್ದು ರಾಕ್ಷಸಿ' ಸಿನಿಮಾ ಕಂಪ್ಲೀಟ್ ಆಗಿರುವ ಬಗ್ಗೆ ನಟಿ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಯಶಸ್ವಿಯಾಗಿ 'ಮುದ್ದು ರಾಕ್ಷಸಿ' ಸಿನಿಮಾ ಚಿತ್ರೀಕರಣ ಮುಗಿಸಿದ್ದೇವೆ. ಈ ಚಿತ್ರತಂಡವನ್ನು ಮಿಸ್ ಮಾಡಿಕೊಳ್ಳುತ್ತೇನೆ ಎಂದು ನಿವೇದಿತಾ ಗೌಡ ಇನ್ಸ್ಟಾಗ್ರಾಂ ಬರೆದುಕೊಂಡಿದ್ದಾರೆ.

**ಸೈಕೋ ಥ್ರಿಲ್ಲರ್ ಕಥಾಹಂದರ**

'ಮುದ್ದು ರಾಕ್ಷಸಿ' ಎಂಬ ಸೈಕೋ ಥ್ರಿಲ್ಲರ್ ಕಥಾಹಂದರವಿರುವ ಈ ಸಿನಿಮಾದಲ್ಲಿ ಚಂದನ್ ಶೆಟ್ಟಿಗೆ ಪ್ರೇಮಿಯಾಗಿ ಲೀಡ್ ರೋಲ್‌ನಲ್ಲಿ ನಿವೇದಿತಾ ನಟಿಸಿದ್ದಾರೆ. ಸಿನಿಮಾಗೆ ಪುನೀತ್ ಶ್ರೀನಿವಾಸ್ ಅವರು ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಶ್ರೀ ಚೌಡೇಶ್ವರಿ ಸಿನಿ ಕಂಬೈನ್ಸ್ ಮೂಲಕ ಮೋಹನ್ ಕುಮಾರ್ ನಿರ್ಮಿಸಿದ್ದಾರೆ. ಶೂಟಿಂಗ್ ಪೂರ್ಣಗೊಂಡಿದ್ದು, ಮುಂದಿನ ದಿನಗಳಲ್ಲಿ ಅಭಿಮಾನಿಗಳಿಗೆ ಹೆಚ್ಚಿನ ಅಪ್‌ಡೇಟ್ ಸಿಗಲಿದೆ. ಡಿವೋರ್ಸ್‌ಗೂ ಮುನ್ನ ಈ ಚಿತ್ರ ಸೆಟ್ಟೇರಿತ್ತು. ಆದರೆ ಕೆಲ ಭಾಗದ ಶೂಟಿಂಗ್ ಬಾಕಿ ಇದೆ ಎನ್ನುವಾಗ ಚಂದನ್ ಹಾಗೂ ನಿವೇದಿತಾ ತಮ್ಮ ವೈವಾಹಿಕ ಜೀವನಕ್ಕೆ ಫುಲ್ ಸ್ಟಾಪ್ ಇಟ್ಟರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966